ನಮಸ್ಕಾರ – ಪ್ರದಕ್ಷಿಣೆ

ನಮಸ್ಕಾರ – ಪ್ರದಕ್ಷಿಣೆಯ ಬಗ್ಗೆ
ವಿಶೇಷ ಮಾಹಿತಿ ನೀಡುವ ಗ್ರಂಥ

ಸಂಪಾದಕರು ಹಾಗೂ ಸಂಗ್ರಾಹಕರು
ವಿದ್ವಾನ್ ಚತುರ್ವೇದಿ ಎಸ್. ವೇದವ್ಯಾಸಾಚಾರ್ಯ, ಎಂ.ಎ., ಬಿ.ಎಡ್.

ಪ್ರಕಾಶಕರು
ಚತುರ್ವೇದಿ ಸಂಶೋಧನ ಪ್ರತಿಷ್ಠಾನ (ರಿ).
184, "ಭಾಗವತ ಮಂದಿರಂ", 22ನೇ ಮುಖ್ಯರಸ್ತೆ, 12ಎ ಅಡ್ಡರಸ್ತೆ,
ರಾಘವೇಂದ್ರ ಲೇಔಟ್, ಪದ್ಮನಾಭನಗರ, ಬೆಂಗಳೂರು– 560 070.
ಫೋನ್: 26394184, (ಮೊ): 9880046703

ನಮಸ್ಕಾರ - ಪ್ರದಕ್ಷಿಣೆ

ನಮಸ್ಕಾರ - ಪ್ರದಕ್ಷಿಣೆಯ ಬಗ್ಗೆ
ವಿಶೇಷ ಮಾಹಿತಿ ನೀಡುವ ಗ್ರಂಥ

ಸಂಪಾದಕರು ಹಾಗೂ ಸಂಗ್ರಾಹಕರು

ವಿದ್ವಾನ್ ಚತುರ್ವೇದಿ ಎಸ್. ವೇದವ್ಯಾಸಾಚಾರ್ಯ, ಎಂ.ಎ., ಬಿ.ಎಡ್.

ಪ್ರಕಾಶಕರು

ಚತುರ್ವೇದಿ ಸಂಶೋಧನ ಪ್ರತಿಷ್ಠಾನ (ರಿ).
184, "ಭಾಗವತ ಮಂದಿರಂ", 22ನೇ ಮುಖ್ಯರಸ್ತೆ, 12ಎ ಅಡ್ಡರಸ್ತೆ,
ರಾಘವೇಂದ್ರ ಲೇಔಟ್, ಪದ್ಮನಾಭನಗರ, ಬೆಂಗಳೂರು- 560 070.
ಫೋನ್: 26394184, (ಮೊ): 9880046703

NAMASKARA- PRADAKSHINE

(About Namaskara- Pradhakshine)

Chaturvedi Vidwan S. Vedavyasacharya, M.A., B.Ed.

First Edition: 2005

Copies: 1000

Price:

Type Setting & Printing:

Samrudha Offset Printers,
No. 121, 2nd Main,
11th Cross, Vittal Nagar,
Bangalore- 560 026
Ph: 26747677

ಹೆಚ್.ಹೆಚ್. ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿ
ಶ್ರೀ ಪೇಜಾವರ ಅಧೋಕ್ಷಜ ಮಠ
ಜಗದ್ಗುರು ಮಧ್ವಾಚಾರ್ಯ ಸಂಸ್ಥಾನ
ಉಡುಪಿ - 576 101, ಕರ್ನಾಟಕ
ಫೋನ್: 24198

ಮೂರನೇ ಆವೃತ್ತಿಯ ಬಗ್ಗೆ ಅನುಗ್ರಹ ಸಂದೇಶ

ನಮಸ್ಕಾರವು ಭಾರತೀಯ ಸಂಸ್ಕೃತಿಯ ಅವಿಭಾಜ್ಯವಾದ ಅಂಗ. ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ವಿನಯ, ಸೌಜನ್ಯಗಳ ಪ್ರತೀಕವೇ ಈ ನಮಸ್ಕಾರ ಇದು ಭಗವಂತನಲ್ಲಿ ಮತ್ತು ಹಿರಿಯರಲ್ಲಿ ತನಗಿರುವ ಗೌರವ ಭಾವನೆಯನ್ನು ಅಭಿವ್ಯಕ್ತಗೊಳಿಸುವ ಪ್ರಕ್ರಿಯೆಯಾಗಿದೆ. ಪರಮಾತ್ಮನ ಮಹಿಮೆಯನ್ನು ತಿಳಿದು ಸ್ನೇಹ ಪುರಃಸರವಾಗಿ ಮಾಡುವ ಈ ನಮಸ್ಕಾರವು ಭಕ್ತಿಯೋಗದ ಒಂದು ಪ್ರಧಾನ ಅಂಗವಾಗಿದೆ. ಈ ನಮಸ್ಕಾರ ಭಕ್ತ ಭಗವಂತರ ಸಂಬಂಧವನ್ನು ಸದೃಢಗೊಳಿಸುವ ಜೊತೆಗೆ ಸಮಾಜದಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ಸಂಬಂಧಗಳನ್ನು ಬಲಪಡಿಸಿ ಸಾಮಾಜಿಕ ಶಿಸ್ತು ಮತ್ತು ವ್ಯವಸ್ಥೆಗಳಿಗೂ ಕಾರಣವಾಗಿದೆ.

ನಮಸ್ಕಾರದ ವಿವಿಧ ಪ್ರಕಾರಗಳನ್ನೂ ಅದಕ್ಕೆ ಸಂಬಂಧಿಸಿದ ವಿಧಿ ನಿಯಮಗಳನ್ನೂ ವಿವರವಾಗಿ ತಿಳಿಸುವ ಈ ಕೃತಿಯನ್ನು ಕಂಡು ನಮಗೆ ಹರ್ಷವಾಗಿದೆ. ನಮ್ಮ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಅಧ್ಯಯನ ಮಾಡಿ ಬೆಂಗಳೂರು ನಗರದಲ್ಲಿ ಪಾಠಪ್ರವಚನಗಳನ್ನು ನಡೆಸಿಕೊಂಡು ಜ್ಞಾನಕಾರ್ಯವನ್ನು ಮಾಡುತ್ತಿರುವ ನಮ್ಮ ಪ್ರಿಯಶಿಷ್ಯರಾದ ಎಸ್. ವೇದವ್ಯಾಸಾಚಾರ್ಯರು ಅನೇಕ ಪ್ರಮಾಣಗಳನ್ನು ಸಂಗ್ರಹಿಸಿ ನಮಸ್ಕಾರದ ಬಗ್ಗೆ ವಿಸ್ತೃತ ವಿವರಣೆಗಳನ್ನೊಳಗೊಂಡ ಅವಶ್ಯ ಸಂಗ್ರಾಹ್ಯವಾದ ಈ ಅಪೂರ್ವ ಕೃತಿಯನ್ನು ರಚಿಸಿ ವಿಶೇಷ ಅಭಿನಂದನೆಗೆ ಪಾತ್ರರಾಗಿದ್ದಾರೆ. ವೇದವ್ಯಾಸಾಚಾರ್ಯರು ಇಂತಹ ಅನೇಕ ಕೃತಿಗಳನ್ನು ರಚಿಸಿ ಹರಿ-ಗುರುಗಳ ಅನುಗ್ರಹಕ್ಕೆ ಪಾತ್ರರಾಗಲೆಂದು ಆಶಿಸುತ್ತೇನೆ. ನಮಸ್ಕಾರ ಪ್ರದಕ್ಷಿಣೆಯು ಮೂರನೇ ಆವೃತ್ತಿಯನ್ನು ಕಂಡಿರುವುದು ನಮಗೆ ಅತ್ಯಂತ ಹರ್ಷದಾಯಕವಾಗಿದೆ.

ಇತಿ ಸಪ್ರೇಮ ನಾರಾಯಣ ಸ್ಮರಣೆಗಳು.

ಮೂರನೆಯ ಆವೃತ್ತಿಯ ಬಗ್ಗೆ
ಸಂಗ್ರಾಹಕರು

ಭಗವಂತನಿಗೆ ಕೃತಜ್ಞತೆಯನ್ನು ತೋರಿಸುವುದೇ ನಮಸ್ಕಾರ - ನಮಸ್ಕಾರವು ಕಾಯೇನ ಮನಸಾ-ವಾಚಾ ಎಂದು ತ್ರಿಕರಣ ಪೂರ್ವಕವಾಗಿದ್ದು ಅತಃಕರಣ ಶುದ್ದಿಯನ್ನು ಮಾಡುವ ಸಾಧನವಾಗಿದೆ.

ಇಂಥಹ ನಮಸ್ಕಾರವನ್ನು ಹಾಗೂ ಪ್ರದಕ್ಷಿಣೆಯನ್ನು ಕ್ರಮವರಿತು ವಿಧಿವತ್ತಾಗಿ ಮಾಡಿದರೆ ಲಭಿಸುವ ಫಲವು ಅಧಿಕವಾಗಿರುತ್ತದೆ. ಯಾವ ಯಾವ ದೇವಸ್ಥಾನದಲ್ಲಿ ಹೇಗೆ ಪ್ರದಕ್ಷಿಣೆ ಹಾಗೂ ನಮಸ್ಕರಿಸಬೇಕೆಂಬ ನಿಯಮಗಳನ್ನು ಅನೇಕ ಆಕರಗಳಿಂದ ಸಂಗ್ರಹಿಸಿ ಅದನ್ನ ಗ್ರಂಥರೂಪಕ್ಕೆ ಇಳಿಸಲು ಈ ಹಿಂದೆ ಪ್ರಯತ್ನಿಸಿ ಪುಸ್ತಕ ರೂಪದಲ್ಲಿ ಜನರಿಗೆ ಸೇರಿತು ಆದರೆ ಅವಶ್ಯಕತೆಗಿಂತಲೂ ಕಡಮೆ ಪ್ರತಿಗಳು ಅಚ್ಚಾದವು. ಬೇಡಿಕೆ ಅಧಿಕವಾದ್ದರಿಂದ ಕೆಲವು ವಿಶೇಷ ವಿಷಯಗಳೊಂದಿಗೆ ಪುನಃ ದ್ವಿತೀಯಾವೃತ್ತಿಯನ್ನು ಮಾಡಲಾಯಿತು. ಆ ಆವೃತ್ತಿಗಳೂ ಮುಗಿದು ಈಗ ಮೂರನೆಯ ಆವೃತ್ತಿಯು ಹೊರಬರುತ್ತಿರುವುದು ಸಂತೋಷದ ಸಂಗತಿ, ಜಿಜ್ಞಾಸುಗಳು ಇದರ ಪೂರ್ಣ ಉಪಯೋಗವನ್ನು ಪಡೆದಿದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಮೂರನೇ ಆವೃತ್ತಿಯಲ್ಲಿ ಶ್ರೀರಂಗ ಪ್ರಾಕಾರ ಪ್ರದಕ್ಷಿಣೆ, ಬ್ರಹ್ಮಾಂಡದರ್ಶನ ಇವೇ ಮೊದಲಾದ ನೂತನ ವಿಷಯಗಳನ್ನು ಸೇರಿಸಲಾಗಿದೆ. ಇದರ ಉಪಯೋಗ ಭಗವದ್ಭಕ್ತರು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇವೆ. ಮೂರನೇ ಆವೃತ್ತಿಗೂ ತಮ್ಮ ಅನುಗ್ರಹ ಸಂದೇಶ ನೀಡಿ ನನ್ನನ್ನು ಅನುಗ್ರಹಿಸಿದ ನನ್ನ ಸ್ವರೂಪೋದ್ಧಾರರಾದ, ಶ್ರೀಶ್ರೀ 108 ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಗೆ ನನ್ನ ಭಕ್ತ್ಯಾದರಪೂರ್ವಕ ಪ್ರಣಾಮಗಳು.

ಇತಿ ಸಜ್ಜನರಜೋಧಾರೀ

ಚತುರ್ವೇದಿ ಯಸ್. ವೇದವ್ಯಾಸಾಚಾರ್ಯ

यस्. वेदव्यासाचार्य

ವಿಷಯ ಸೂಚಿ

1. ನಮಸ್ಕಾರ-ಪ್ರದಕ್ಷಿಣೆ

ಭಗವಂತನಿಗೆ ಕೃತಜ್ಞತೆಯ ಇನ್ನೊಂದು ಮುಖವೆ ನಮಸ್ಕಾರ. ನಮಗೆ ಅಮೂಲ್ಯವಾದ ಕಣ್ಣು ಕಿವಿ ಮೊದಲಾದ ದಶೇಂದ್ರಿಯಗಳನ್ನು ನೀಡಿ ಅನುಗ್ರಹವನ್ನು ಮಾಡಿರುವ ಭಗವಂತನನ್ನು ಮರೆತರೆ ಅವನೊಬ್ಬ ಪಶುವೆ. ನಮಸ್ಕಾರವೆಂದರೆ **"ನಾಹಂ ಕರ್ತಾ ಹರಿಃಕರ್ತಾ"** ಎಂಬ ಭಾವನೆಯೆ ಆಗಿದೆ. ನಮಸ್ಕಾರವಾದರೂ ನಾನೇ ಮಾಡಿದ್ದು ಎಂಬ ಅಹಂಕಾರವನ್ನು ತೊಲಗಿಸಿ ಭಗವಂತನ ಕರ್ತೃತ್ವವನ್ನು ಜ್ಞಾಪಿಸಿಕೊಡುವುದು.

ಮಕಾರವು ಅಹಂಕಾರವನ್ನು ತಿಳಿಸಿದರೆ ನಕಾರವು ಅದನ್ನು ನಿಷೇಧಿಸುತ್ತಾ ಭಗವಂತನೇ ಕರ್ತೃ ಎಂದು ತಿಳಿಸುತ್ತದೆ.

ಅಹಂಕೃತಿಃ ಮಕಾರಃ ಸ್ಯಾತ್ ನಕಾರಃ ತನ್ನಿಷೇಧಕಃ।

ನನ್ನ ಉತ್ಕರ್ಷಗಳಿಗೆ ಪರಮಾತ್ಮನೆ ಹೊಣೆಗಾರ ಎಂಬ ಭಾವನೆಯೇ ನಮಸ್ಕಾರದ ಸಾರ. ಇಂಥಹ ನಮಸ್ಕಾರವನ್ನು ಮಾಡದವನ ತಲೆಯು, ಮುಕುಂದನಿಗೆ ಮಣಿಯದೆ ಮಣಿಮುಕುಟ ಕಿರೀಟದಿಂದ ಕೂಡಿದ್ದರೂ ಅದು ತಲೆಗೆ ಭಾರವಾಗಿ ಸಂಸಾರ ಸಮುದ್ರದಲ್ಲಿ ಇನ್ನೂ ಮುಳುಗಲು ಕಾರಣವಾಗುತ್ತದೆ. ಹೊರತು ಮೇಲೆ ತೇಲುವ ಸಾಧನವಾಗಲಾರದು.

"ಭಾರಃ ಪರಂ ಪಟ್ಟ ಕಿರೀಟ ಜುಷ್ಟಮಪ್ಯುತ್ತಮಾಂಗಂ ನ ನಮೇನ್ಮುಕುಂದಂ।

2. ನಮಸ್ಕಾರವೆಂದರೇನು?

ಈ ದೇಹವು ನಿನ್ನದು, ನನ್ನದಲ್ಲ ಎಂಬ ಭಾವನೆಗೆ ಅನುಕೂಲವಾದ ವ್ಯಾಪಾರವೇ ನಮಸ್ಕಾರ **"ಸ್ವಸ್ವತ್ವ ನಿವೃತ್ಯನುಕೂಲಃ ವ್ಯಾಪಾರವಿಶೇಷ"** (ಲಘುಮಂಜೂಷ ಆನೇಕಾರಿಕೆ) ದೊಡ್ಡವರನ್ನುದ್ದೇಶಿಸಿ ನಾನು ತಮಗಿಂತ ಅಪಕೃಷ್ಟನಾಗಿರುವೆನು ಎಂಬ ಭಾವನೆಯನ್ನು ತಿಳಿಸುವ ವ್ಯಾಪಾರ ವಿಶೇಷವು ನಮಸ್ಕಾರ.

"ಅಹಮಸ್ಮಾದಪಕೃಷ್ಟ ಇತಿ ಜ್ಞಾನವಿಶೇಷ।

ವಿಷಯಗಳ ಕಡೆಗೆ ಓಡುವ ಮನಸ್ಸನ್ನು ವಿಷಯಗಳಿಂದ ಹಿಂತಿರುಗಿಸಿ ಬ್ರಹ್ಮನಲ್ಲಿರುವಂತೆ ಮಾಡುವುದೇ ಆಗಿದೆ.

"ವಿಷಯೇಭ್ಯಃ ಪರಾವರ್ತನೇನ ವೃತ್ತೀನಾಂ ಬ್ರಹ್ಮೈಕಪ್ರವಣತಾ ನಮಸ್ಕಾರಃ"

ನಾನು ನನ್ನದು ಎಂಬುದು ಮೃತ್ಯುರೂಪವಾಗಿದೆ. ನನ್ನದಲ್ಲ ಭಗವಂತನದು ಎಂಬುದೇ ಶಾಶ್ವತವಾದದ್ದು. ನಾನು ನನಗೆ ಸ್ವತಂತ್ರನಲ್ಲ. ನಾನು ನನಗೆ ಅಧೀನನಲ್ಲ ಭಗವಂತನಿಗೆ ಅಧೀನವೆಂಬ ಜ್ಞಾನವೆ ನಮಸ್ಕಾರ.

ಮಮೇತಿ ದ್ವ್ಯಕ್ಷರಂ ಮೃತ್ಯುಃ ನ ಮಮೇತಿ ಚ ಶಾಶ್ವತಂ।
ನಾಹಂ ಮಮ ಸ್ವತಂತ್ರೋऽಹಂ ನಾಸ್ಮೀತ್ಯಸ್ಯಾರ್ಥ ಉಚ್ಯತೇ॥

ದೇವತಾಸ್ತುತಿ ನಮಸ್ಕಾರಗಳನ್ನೇ ಮಂಗಳವೆಂದು ಕರೆಯಲಾಗಿದೆ.

"ದೇವತಾ ಸ್ತುತಿ ನಮಸ್ಕಾರಾದಿಷು ಮಂಗಲವ್ಯವಹಾರಃ"

ನ+ಮ+ವಿಸರ್ಗ = ನಮಃ

ನಮಃ ಎಂಬಲ್ಲಿ ನಕಾರವು, ಮಕಾರವೂ ವಿಸರ್ಗಗಳಿವೆ. ವಿಸರ್ಗವೆಂದರೆ ನಾಶವೆ ಇಲ್ಲದಿರುವ ಭಗವಂತನೆಂದರ್ಥ. ಮಕಾರವೆಂದರೆ ಪ್ರಧಾನವೆಂದು ಅರ್ಥ ನಕಾರವೆಂದರೆ ಹೊಂದಲು ಯೋಗ್ಯವಾದ ಮಾರ್ಗವೆಂದರ್ಥವಾಗಿದೆ.

ನಾಶ ರಹಿತವಾದ ಮೋಕ್ಷವನ್ನು ಕೊಡುವ ಮುಕುಂದನನ್ನು ಹೊಂದಲು ಇರುವ ಪ್ರಧಾನ ಮಾರ್ಗವೆಂದರೆ ನಮಸ್ಕಾರ.

ಪಂಥಾ ನಕಾರ ಉದ್ದಿಷ್ಟಃ ಮಃ ಪ್ರಧಾನೋ ನಿರೂಪ್ಯತೇ।
ವಿಸರ್ಗಃ ಪರಮೇಶಸ್ತು ತತ್ರಾರ್ಥೋऽಯಮುದೀರಿತೇ॥
ತತ್ಪ್ರಾಪ್ತಯೇ ಪ್ರಧಾನೋऽಯಂ ಪಂಥಾ ನಮಸನಾಮವಾನ್॥

ನಂತೃ ನಂತವ್ಯಭಾವ

ಭಕ್ತ ಹಾಗೂ ಭಗವಂತನ ಮಧ್ಯೆ ಇರುವ ನಂತೃ-ನಂತವ್ಯ ಭಾವವೆ ನಮಸ್ಕಾರ ಹೊರತು ಬೇರೆ ಯಾವುದೇ ಪ್ರಯೋಜನವನ್ನು ಹೊಂದಿಲ್ಲ. ಭಗವಂತನು ಉಚ್ಚ, ನಾನು ನೀಚನು ಎಂಬುದೆ ನಮಸ್ಕಾರದ ಅಂತರ್ಯವಾಗಿದೆ. ಇದೊಂದು ಉಪಾಧಿರಹಿತವಾದದ್ದು.

ಭಗವಾನ್ ಮೇ ಪರೋ ನಿತ್ಯಮಹಂ ಪ್ರತ್ಯವರಃ ಸದಾ।
ಇತಿ ಭಾವೋ ನಮಃ ಪ್ರೋಕ್ತಃ ನಮಸಃ ಕಾರಣಂ ಹಿ ಸಃ॥

3. ಪ್ರದಕ್ಷಿಣೆ -ಪ್ರದಕ್ಷಿಣೆಯ ಫಲ

ಪ್ರದಕ್ಷಿಣೆ ಎಂದರೆ ಸಾಂಖ್ಯಾಯನರ ಪ್ರಕಾರ ಎಡದಿಂದ ಬಲಕ್ಕೆ ಚಲಿಸುವುದು, ಪ್ರದಕ್ಷಿಣೆಯಲ್ಲಿ ನಮ್ಮ ಹಸ್ತವನ್ನು ಚಾಚಿರಬೇಕು. ಎಂದರೆ

ದೇವರಿಗೆ ಬಲಗೈಯನ್ನು ತೋರಿಸುತ್ತಿರಬೇಕು. ತಲೆಯನ್ನು ಬಗ್ಗಿಸಿ ನಮ್ರವಾಗಿರಬೇಕು. ಬಲಪಾರ್ಶ್ವವನ್ನು ತೋರಿಸಬೇಕು. ಮನಸ್ಸು ದೇವನಿರುವ ಬಲ ಭಾಗದಲ್ಲಿ ಲೀನವಾಗಿರಬೇಕು. ಈ ನಿಯಮಗಳ ಜೊತೆಗೆ ಬಾಯಲ್ಲಿ ಮಂತ್ರ ಹೃದಯದಲ್ಲಿ ಭಗವದ್ರೂಪ, ಕೈಗಳನ್ನು ಜೋಡಿಸಿ ನಿಧಾನವಾಗಿ ದೇವರಿಗೆ ಬಲಭಾಗದಿಂದ ನಮಗೆ ಎಡಭಾದಿಂದ ವೃತ್ತಾಕಾರವಾಗಿ ಚಲಿಸುವುದು ಪ್ರದಕ್ಷಿಣೆ.

ಪ್ರಸಾರ್ಯ ದಕ್ಷಿಣಂ ಹಸ್ತಂ ಸ್ವಯಂ ನಮ್ರಶಿರಾಃ ಪುನಃ।
ದರ್ಶಯೇತ್ ದಕ್ಷಿಣಂ ಪಾರ್ಶ್ವಂ ಮನಸಾಪಿ ಚ ದಕ್ಷಿಣಃ॥

ಪ್ರ+ದ+ಕ್ಷಿ+ಣೆ

ಪ್ರದಕ್ಷಿಣೆಯಲ್ಲಿರುವ ನಾಲ್ಕು ವರ್ಣಗಳು ಪ್ರದಕ್ಷಿಣೆಯ ಫಲವನ್ನು ತಿಳಿಸುತ್ತವೆ. ಪ್ರ ಎಂದರೆ = (ಪ್ರಚ್ಛಿನತ್ತಿ ಭಯಂ) ಸಾಂಸಾರಿಕ ಭಯವನ್ನು ಪರಿಹರಿಸುವುದು.

ದಕಾರವು-ದದಾತಿ ಮೋಕ್ಷಂ ಎಂಬಂತೆ ಮೋಕ್ಷವನ್ನು ನೀಡುವುದು. ಎಂದರ್ಥವನ್ನು ಕೊಡುವುದು.

ಕ್ಷಿಕಾರವು - ಕ್ಷೀಯತೇ ರೋಗಃ ಅಸ್ಮಾತ್ ಎಂಬಂತೆ
ರೋಗವನ್ನು ಪರಿಹರಿಸುವುದು ಎಂದರ್ಥ ಕೊಡುವುದು.

ಣ ಕಾರಣವು - ಸಂಪತ್ತನ್ನು ನೀಡುವುದು ಎಂಬರ್ಥ ಇದರಂತೆ ಪ್ರದಕ್ಷಿಣೆ ಎಂದರೆ ಸಾಂಸಾರಿಕ ಭಯವನ್ನು ಹಾಗೂ ರೋಗಗಳನ್ನು ಪರಿಹರಿಸಿ, ಐಹಿಕ ಸಂಪತ್ತನ್ನು ನೀಡಿ ಕಡೆಗೆ ಮೋಕ್ಷವನ್ನು ಕೊಡುವ ಸಾಧನವೆಂದು ಅರ್ಥ.

ಪ್ರಚ್ಛಿನತ್ತಿ ಭಯಂ ಸರ್ವಂ ದಕಾರೋ ಮೋಕ್ಷ ಸಿದ್ಧಿದಃ।
ಕ್ಷಿಕಾರಾತ್ ಕ್ಷೀಯತೇ ರೋಗೋ ಣಕಾರಂ ಶ್ರೀಪ್ರದಾಯಕಮ್॥

ಪ್ರದಕ್ಷಿಣೆಯೂ ಭಕ್ತಿಶ್ರದ್ಧೆಯಿಂದ ಕೂಡಿರಬೇಕು.

ತತಶ್ಚ ದೇವತಾಂ ಭಕ್ತ್ಯಾ ಪರಿಕ್ರಮ್ಯ ನಮೇದ್ ಬುಧಃ।

ಭಗವಂತನಿಗೆ ಮಾಡುವ ಮೂರು ಪ್ರದಕ್ಷಿಣೆ ಹಾಗೂ ನಮಸ್ಕಾರಗಳನ್ನು ಹಾಕಿದರೆ ಪೃಥಿವಿಯನ್ನು ಪ್ರದಕ್ಷಿಣೆಯನ್ನು ಮಾಡಿದರೆ ಫಲವು ಲಭಿಸುವುದು.

ಪೃಥವೀ ಪ್ರದಕ್ಷಿಣ ಫಲಂ ತೇನ ಪ್ರಾಪ್ಯ ಹರಿಂ ವ್ರಜೇತ್।

ವೇದಾಧ್ಯಯನ ಮಾಡಿರುವ ವಿಪ್ರನಿಗೆ ಇಡೀ ಭೂಮಿಯನ್ನು ದಾನಮಾಡಿದ ಫಲವು ಪ್ರದಕ್ಷಿಣೆಯಿಂದ ಲಭಿಸುವುದು.

ವೇದವಿದ್ಭ್ಯೋ ಧರಾಂ ದತ್ವಾ ಯತ್ ಫಲಂ ಲಭತೇ ನರಃ।
ತತ್ಫಲಂ ಲಭತೇ ಭಕ್ತ್ಯಾ ದೇವಂ ಕೃತ್ವಾ ಪ್ರದಕ್ಷಿಣಮ್॥

ಪ್ರದಕ್ಷಿಣೆಯಿಂದ ಸರ್ವಪಾಪಗಳೂ ನಶಿಸುತ್ತವೆ. ಸಮಸ್ತವನ್ನು ದಾನಮಾಡಿದ ಫಲವು ಲಭಿಸುತ್ತದೆ. ಸಮಸ್ತ ರೋಗಗಳೂ ನಾಶ ಹೊಂದುತ್ತವೆಯಾದ್ದರಿಂದ ಪ್ರದಕ್ಷಿಣೆಯನ್ನು ಮಾಡಲೇಬೇಕು.

ಪ್ರದಕ್ಷಿಣೆಯ ಕಾಲ ಹಾಗು ಅದರ ಫಲ

ಪೂರ್ವಾಹ್ನೇ ವ್ಯಾಧಿನಾಶಃ ಸ್ಯಾತ್ ಮಧ್ಯಾಹ್ನೇ ವಾಂಛಿತಾರ್ಥದಮ್।
ಸಾಯಾಹ್ನೇ ಸರ್ವಪಾಪಘ್ನಂ ಅರ್ಧಯಾಮೇ ವಿಮುಕ್ತಿದಮ್॥

ಅಷ್ಟಮ್ಯಾಂ ಚ ಚತುರ್ದಶ್ಯಾಂ ಪಂಚದಶ್ಯಾಂ ತ್ರಿಜನ್ಮನಿ।
ಆರ್ದ್ರಾಯಾಮರ್ಕವಾರೇ ಚ ಕರಣೇ ವಿಷ್ಣು ಸಂಜ್ಞಕೇ॥

ಅಯನೇ ವಿಷುವೇ ಚೈವ ಗ್ರಹಣೇ ಚಂದ್ರ ಸೂರ್ಯಯೋಃ।
ಸಂಕ್ರಮೇ ಚೋತ್ಸವೇ ಚೈವ ಸ್ತುತ್ವಾ ಕೃತ್ವಾ ಪ್ರದಕ್ಷಿಣಂ।
ಪ್ರಣಮೇದ್ ಯಃ ಹರಿಂ ಭಕ್ತ್ಯಾ ಸರ್ವಾನ್ ಕಾಮಾನ್ ಅವಾಪ್ನುಯಾತ್॥

ಲಭೇತ್ ಶತಗುಣಂ ಪುಣ್ಯಂ ಕೇವಲಂ ನಾತ್ರ ಸಂಶಯಃ।
ಏವ ಮುಕ್ತೇಷು ಕಾಲೇಷು ಭಕ್ತಿಶ್ರದ್ಧಾಸಮನ್ವಿತಃ॥

ನಮಸ್ಕಾರ ಪ್ರದಕ್ಷಿಣೆಯನ್ನು ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ರಾತ್ರಿಯಲ್ಲೂ ಹಾಕಬಹುದು. ಇದರಿಂದ ವ್ಯಾಧಿನಾಶ, ಇಷ್ಟಾರ್ಥಸಿದ್ಧಿ, ಸರ್ವಪಾಪಶಾಂತಿ ಮೊದಲಾದ ಫಲಗಳಿವೆ.

ನೂರುಪಟ್ಟು ಪುಣ್ಯ ಫಲ ಲಭಿಸಲು ಅಷ್ಟಮಿ, ಚತುರ್ದಶೀ, ಪಂಚದಶೀ, ಪೂರ್ಣಿಮೆ, ಅಮಾವಾಸ್ಯೆ, ತ್ರಿಜನ್ಮ ನಕ್ಷತ್ರದಿವಸ, ಆರಿದ್ರಾ ನಕ್ಷತ್ರವಿರುವದಿನ, ಭಾನುವಾರ, ದಕ್ಷಿಣಾಯನ- ಉತ್ತರಾಯಣದಿನ, ಸೂರ್ಯಚಂದ್ರ ಗ್ರಹಣ ದಿವಸಗಳು, ಸಂಕ್ರಮಣ, ಚಾತುರ್ಮಾಸ್ಯಾದಿ ಪರ್ವಕಾಲ, ಆರಾಧನೆ, ರಥೋತ್ಸವ ದಿವಸಗಳಲ್ಲಿ ಭಗವಂತ, ವಾಯು, ರುದ್ರಾದಿಗಳನ್ನು ನಮಸ್ಕರಿಸಿದರೆ ಸರ್ವೇಷ್ಟಗಳೂ ಲಭಿಸುತ್ತವೆ.

ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ನಮಸ್ಕರಿಸಿದರೆ ಅವನ ಇಷ್ಟಾರ್ಥ ಖಂಡಿತಾ ಪೂರ್ಣವಾಗುವುದು.

ಸೂರ್ಯೋದಯಂ ಸಮಾರಭ್ಯ ಯಾವದಸ್ತಂ ರವೇರ್ಭವೇತ್।
ತಾವತ್ ಪ್ರದಕ್ಷಿಣಂ ಕೃತ್ವಾ ಸರ್ವಾನ್ ಕಾಮಾನವಾಪ್ನುಯಾತ್॥

4. ಧೂಳಿನ ಮಹಿಮೆ

ದೇವಾಲಯಗಳಲ್ಲಿ ನಮಸ್ಕರಿಸುವಾಗ ಜ್ಞಾನಿಗಳ, ಭಕ್ತರ ಧೂಳು ನಮ್ಮ ಮೈಗೆ ಅಂಟಿಕೊಳ್ಳುತ್ತವೆ. ಅವುಗಳು ಅಪಾರ ಸಂಸಾರ ಸಮುದ್ರವನ್ನು ದಾಟುವ ಸೇತುವೆಗಳಾಗುತ್ತವೆ.

ಪ್ರಣಾಮವನ್ನು ಮಾಡಿದಾಗ ನಾವು ನಮ್ಮ ದೇಹವನ್ನು ಭೂಮಿಗೆ ಬೀಳಿಸಿದಂತೆ ನಮ್ಮ ಜೊತೆಗೆ ನಮ್ಮ ಪಾಪಗಳೂ ಬೀಳುವುವು. ಆದರೆ ಹೀಗೆ ಬಿದ್ದ ಪಾಪಗಳು ಪುನಃ ನಮ್ಮೊಡನೆ ಏಳುವುದಿಲ್ಲ.

ವಿಷ್ಣೋಃ ಪಾದಪ್ರಣಾಮಾರ್ಥಂ ಭಕ್ತೇನ ಪತತಾ ಭುವಿ।
ಪತಿತಂ ಪಾತಕಂ ಕೃತ್ಸ್ನಂ ನೋತ್ತಿಷ್ಠಂತಿ ಪುನಸ್ಸಹ॥ - ನಾರದೀಯ

ನಮಸ್ಕಾರವು ಯಜ್ಞವೆನಿಸಿದ್ದು ಸರ್ವಯಜ್ಞಗಳಿಗಿಂತಲೂ ಉತ್ತಮವಾಗಿದೆ. ಇದೊಂದು ಉತ್ತಮವಾದ ಉಪಚಾರ ಪೂಜೆಯಾಗಿದೆ. ನಮಸ್ಕಾರವೊಂದರಿಂದಲೇ ಪೂತನಾಗಿ ಹರಿಯ ಪ್ರಸಾದವನ್ನು ಹೊಂದುವನು.

ನಮಸ್ಕಾರಃ ಸ್ಮೃತೋ ಯಜ್ಞಃ ಸರ್ವಯಜ್ಞೇಷು ಚೋತ್ತಮಃ।
ನಮಸ್ಕಾರೇಣ ಚೈಕೇನ ನರಃ ಪೂತೋ ಹರಿಂ ವ್ರಜೇತ್॥

ನಮಸ್ಕಾರ ಪ್ರದಕ್ಷಿಣೆ

ಅಹಂ ಭಗವತ ಏವ। ನ ಮಮ। ಮಮ
ಯಾ ಕೃತಯೋ ನ ತಾ ಮಮ। ಭಗವತ ಏವ।

ಪ್ರಹ್ವೀಭಾವ

ನಮಸ್ಕಾರವು "ಣಮು ಪ್ರಹ್ವತ್ವೇ ಶಬ್ದೇಚ" ಎಂಬ ಧಾತುವಿನಿಂದ ಉತ್ಪನ್ನವಾದ ನಮಸ್ಕಾರ ಶಬ್ದವು ದೇಹದ ಬಗ್ಗಿರುವಿಕೆಯನ್ನು ಹೇಳುತ್ತದೆ. ದೇಹವು ಮಾತ್ರ ಬಗ್ಗಿದರೆ ಸಾಲದು. ಮನಸೂ ಬಗ್ಗಿ ಪ್ರಹ್ವೀಭಾವವನ್ನು ಹೊಂದಿರಬೇಕು ದೇಹ ಮತ್ತು ಮನಸ್ಸು ಉಪಲಕ್ಷಿತವಾದ ಏಕಾದಶ ಇಂದ್ರಿಯಗಳೂ ನಮ್ರವಾಗಿದ್ದು ಬಾಯಿಯಿಂದ ಮಹಿಮಾದ್ಯೋತಕವಾದ ಶಬ್ದರೂಪಸ್ತುತಿ ಹೊರಡುತ್ತಿರಬೇಕು. ಇದೇ ನಮಸ್ಕಾರ.

ಮನಸ್ಸು ಭಗವಂತನ ಕಡೆ ಬಗ್ಗುವುದೇ ವಂದನೆ ಎಂದು ಹೇಳುವ "ವದಿ-ಅಭಿವಾದನ ಸ್ತುತ್ಯೋಃ" ಎಂಬ ಧಾತುವಿನಿಂದ ಉತ್ಪನ್ನವಾಗಿದ್ದು ಅಭಿವಾದನ ಮತ್ತು ಸ್ತುತಿ ಎರಡನ್ನೂ ಒಳಗೊಂಡಿದೆ.

ಒಬ್ಬ ವ್ಯಕ್ತಿಗೆ ನಮಸ್ಕರಿಸಿದರೆ ನಮ್ಮಲ್ಲಿ ನಿರಹಂಭಾವವಿದೆ ಎಂಬುದರ ದ್ಯೋತಕವಾಗಿರುತ್ತದೆ. ಮಕಾರವು ಮಮಕಾರದ್ಯೋತಕವಾಗಿದೆ. ಮಕಾರವಿಲ್ಲದಿರುವಿಕೆಯೇ ನಮನವು. ಮಮಕಾರವಿದ್ದರೆ ನಾವು ಮೇಕೆಗಳಂತೆ "ಮೇ ಮೇ" ನನಗೆ, ನನಗೆ ಎಂದು ಕೂಗುತ್ತೇವೆ.

ಪಾದ್ಮಪುರಾಣವು ಯಾವುದೇ ಕಾರ್ಯವು ನಮ್ಮಿಂದಾಯಿತೆಂದರೆ ಅದು ಭಗವಂತನ ಕಾರ್ಯ - ನಮ್ಮದಲ್ಲವೆಂಬ ಭಾವನೆಯೇ ನಮಸ್ಕಾರವೆಂದು ಹೇಳಿದೆ.

"ಕರ್ಮಣ್ಯಕರ್ಮ ಯಃ ಪಶ್ಯೇತ್" ಎಂಬ ಗೀತಾವಾಕ್ಯವು ನಾವು ಮಾಡಿರುವ ಕರ್ಮಗಳಲ್ಲಿ ಅ+ಕರ್ಮ=ಭಗವಂತನ ಕರ್ಮವನ್ನು ನೋಡುವುದೇ ಆಗಿದೆ ಎಂದು.

ನಮಸ್ಕಾರದ ಅರ್ಥವನ್ನು ತಿಳಿಯದೆ ಪೂಜಾನಂತರದಲ್ಲಿ ಹೇಳಲಾಗುವ **"ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ ಚಾಖಿಲಂ"** ಎಂಬ ವಾಕ್ಯವು ನಮಸ್ಕಾರವನ್ನು ಮಾಡಿದಾಗ ನಮ್ಮ ಭಾರವನ್ನೆಲ್ಲ ಭೂವರಾಹನ ಮೇಲೆ ಹಾಕಿ ಆತ್ಮವನ್ನು ನಿವೇದಿಸಬೇಕಾದರೆ ನಾಹಂ ಕರ್ತಾ ಎಂಬ ಅನುಸಂಧಾನವಿರಲೇಬೇಕು. ಇಲ್ಲದಿದ್ದಲ್ಲಿ ದೇಹವನ್ನು ಮಾತ್ರ ಬೀಳಿಸುವುದಾಗತ್ತದೆ. ಆತ್ಮನಿವೇದನೆ ಸಾಧ್ಯವಾಗುವುದಿಲ್ಲ.

ನವವಿಧ ಭಕ್ತಿಯಲ್ಲಿ **"ಶ್ರವಣಂ ವಂದನಂ ದಾಸ್ಯಂ ಸಖ್ಯಂ ಆತ್ಮ ನಿವೇದನಂ"** ಎಂಬಲ್ಲಿ ವಂದನವೂ ಸೇರಿದೆ. ಈ ವಂದನದ ಮೂಲಕ ಸ್ನೇಹದಿಂದ ದಾಸರಾಗಿ ಅವನ ಉತ್ಕರ್ಷತೆಯನ್ನು ಒಪ್ಪಿಕೊಂಡು ಅಂಥಹ ಭಗವಂತನಿಗೆ ಆತ್ಮವನ್ನು ನಿವೇದಿಸಬೇಕು.

ಅಂತೂ ನಮ್ಮ ಉತ್ಕರ್ಷಾಪಕರ್ಷಗಳಿಗೆ ಭಗವಂತನೆ ಕಾರಣ ಎಂಬ ಅನುಸಂಧಾನದ ಮೂಲಕ ಮನಸ್ಸು ಮೊದಲಾದವುಗಳನ್ನು ನಮ್ರವಾಗಿರಿಸುವುದೇ ನಮಸ್ಕಾರ. ಇದನ್ನೇ ನ್ಯಾಯಸುಧಾದಲ್ಲಿ **"ಮನೋವೃತ್ತೇಃ ತತ್ಪ್ರವಣತಾ ಹಿ ವಂದನಂ"** ಎನ್ನಲಾಗಿದೆ.

5. ನಮಸ್ಕಾರ ಯಾರಿಗೆ?

ನಮಸ್ಕಾರವನ್ನು ಮಾಡುವವನಿಗೆ ಮತ್ತು ಮಾಡಿಕೊಳ್ಳುವವನಿಗೆ ಒಂದು ವಿಷಯ ತಿಳಿದಿರಬೇಕು.

ಒಬ್ಬ ವ್ಯಕ್ತಿಯು ಇನ್ನೊಬ್ಬನಿಗೆ ನಮಸ್ಕರಿಸಿದಾಗ ಈ ವ್ಯಕ್ತಿಯು ನನಗೆ ನಮಸ್ಕಾರವನ್ನು ಮಾಡುತ್ತಿಲ್ಲ ನನ್ನಲ್ಲಿ ಅಂತರ್ಯಾಮಿಯಾಗಿ ಪ್ರೇರಕನಾಗಿರುವ ಭಗವಂತನಿಗೆ ಎಂಬ ಭಾವನೆ ಮಾಡಿಸಿಕೊಳ್ಳುತ್ತಿರುವನಿಗೆ ಇರಬೇಕು.

ನಮಸ್ಕಾರ ಮಾಡುವವನಾದರೂ ನಾನು ಈ ಜಡ ದೇಹಕ್ಕೆ ನಮಸ್ಕಾರ ಮಾಡುತ್ತಿಲ್ಲ. ಇವನಲ್ಲಿರುವ ಭಗವಂತನಿಗೆ ಎಂದು ಅನುಸಂಧಾನ ಹೊಂದಿರಬೇಕು.

ರುದ್ರದೇವರ ಮಾವನಾದ ದಕ್ಷ ಪ್ರಜಾಪತಿಯು ಅಳಿಯನ ಮೇಲೆ ಕೋಪಗೊಳ್ಳಲು ಕಾರಣವೆಂದರೆ ತನ್ನ ಅಳಿಯನು ತನಗೆ ನಮಸ್ಕರಿಸಲಿಲ್ಲ ಎಂಬ ಭಾವನೆಯೇ ಆಗಿತ್ತು.

"ಗುಹಾಶಯಾಯೈವ ನ ದೇಹಮಾನಿನೇ"

ಪ್ರಾಜ್ಞರು ಮಾಡುವ ನಮಸ್ಕಾರವು ಪರಪುರುಷನಿಗಲ್ಲ. ಪರಪುರುಷನ ಹೃದಯ ಗುಹೆಯಲ್ಲಿರುವ ಪರಮ ಪುರುಷನಿಗೆ ಆಗಿರುತ್ತದೆ.

ರುದ್ರದೇವರಾದರೂ ಮಾವನ ಅಂತರ್ಯಾಮಿಯಾದ ಭಗವಂತನಿಗೆ ಮಣಿದಿದ್ದರು. ಪ್ರಾಜ್ಞನಾದ ದಕ್ಷನು ಹೀಗೆ ಅಹಂಕಾರ ಪಟ್ಟಿದ್ದರಿಂದಲೇ ಅಹಂಕಾರದ್ಯೋತಕವಾದ ಮೇಷದತಲೆ (ಮೇ ಮೇ ಇತಿ ಈಷಾ ಇಚ್ಛಾ ಯಸ್ಯಸ) ಉಂಟಾಯಿತು. ಮನಸ್ಸಿನ ಪ್ರಹ್ವೀಭಾವವಿದ್ದ ಕಡೆ ಅಹಂಕಾರವಿಲ್ಲ. ಅಹಂಕಾರವಿದ್ದ ಕಡೆ ಪ್ರಹ್ವೀಭಾವವಿಲ್ಲ.

ಇಂಥಹ ಭಗವತ್ತತ್ವದ ಚಿಂತನ ಇದ್ದವರು ಬಾಲಕರಿಂದ ಹಿಡಿದು ವೃದ್ಧರಿಗೂ ನಮಸ್ಕರಿಸಲು ಹಿಂಜರಿಯಲಾರರು.

ಈ ದಿಸೆಯಲ್ಲಿ ಸ್ಕಂಧಷಷ್ಠಿಯಂದು ಮಾಡುವ ಬ್ರಹ್ಮಚಾರಿ ಸಂತರ್ಪಣೆಯೂ ಅರ್ಥಯುಕ್ತವಾಗಿದೆ. ಅಂತರ್ಯಾಮಿ ವಿವಕ್ಷೆಯಿಂದಲೇ ಈ ನಮಸ್ಕಾರ ಹೊರತು ದೇಹಕ್ಕಲ್ಲ. ದೇಹ ವಾಮನ ರೂಪದಲ್ಲಿದ್ದರೂ ಬ್ರಹ್ಮಚಾರಿಯಲ್ಲಿ ವಟುವಾಮನನಿರುವನು.

"ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ"

ಈ ಅನುಸಂಧಾನದಿಂದಲೇ ನಚಿಕೇತನ ತಂದೆಯಿಂದ ಶಪ್ತನಾಗಿ ಯಮಪುರಿಗೆ ಹೋದಾಗ ಯಮದೇವರು ಅವನ ಪತ್ನಿ ಶ್ಯಾಮಲೆಯೂ ''ನಮಸ್ತೇಸ್ತು ಬ್ರಹ್ಮನ್'' ಎಂದು ನಮಸ್ಕರಿಸಿದ್ದಾರೆ.

ಹರಿರಸ್ಮಿನ್ ಸ್ಥಿತ ಇತಿ ಭಾವನಾ ಹರಿಭಾವ ಇತೀರಿತಃ।

ವಾಮನಾವ - ತಾರವು, ಅಣುವಿನಲ್ಲಿ ಹಾಸುಹೊಕ್ಕಾಗಿ ಇರುವ ಭಗವಂತನನ್ನು ಕಾಣಬೇಕು ಎಂದು ತಿಳಿಸಿದರೆ ಬ್ರಹ್ಮಾಂಡ ವ್ಯಾಪ್ತ ರೂಪವನ್ನು ಕಾಣಬೇಕ ಎಂದು ತ್ರಿವಿಕ್ರಮಾತಾರವು ಸೂಚಿಸುತ್ತದೆ. ಹಾಗೆಯೇ ಪತ್ನಿಯು ತನ್ನ ಪತಿಯನ್ನು ದೇವರ ಪ್ರತಿಮೆ ತನ್ನ ಗಂಡ ಎಂದು ಪೂಜಿಸಬೇಕೇ ಹೊರತು ನನ್ನ ಪತಿಯೇ ದೇವರು ಎಂಬ ಭಾವನೆಯಿಂದಲ್ಲ ಇದನ್ನೇ ''ಹರಿಭಾವ'' ಎನ್ನುವರು.

ಭಗವದ್ಭಕ್ತಿಗೆ ನಮನ

ಶಿಶು, ಯುವಕ, ವೃದ್ಧರಲ್ಲಿಯೂ ಭೇದವಿಲ್ಲದೆ ಇರುವ ಭಗವಂತನಿಗೆ ನಮಸ್ಕಾರ.

" ನಮೋ ಮಹದ್ಭ್ಯೋ ನಮೋ ಅರ್ಭಕೇಭ್ಯೋ।
ನಮೋ ಯುವಭ್ಯೋ ನಮ ಆಶಿನೇಭ್ಯ॥

ಯಾರಿಗೆ ನಮಸ್ಕರಿಸಿದರೂ ನದಿಗಳೂ ಸಮುದ್ರ ಸೇರುವಂತೆ ಭಗವಂತನಿಗೆ ಸಲ್ಲುತ್ತದೆ.

"ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ।
ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ॥

ದೇವಸ್ಥಾನಕ್ಕೆ ಹೋದಾಗಲೂ ಅಲ್ಲಿರುವ ಕಲ್ಲಿನ, ಕಂಚಿನ ತಾಮ್ರದ ಪ್ರತಿಮೆಗಳಿಗೆ ನಮಸ್ಕಾರ ಹಾಕುತ್ತಿದ್ದೇನೆ ಎಂಬ ಭಾವನೆ ಸಲ್ಲದು. ಅವುಗಳು ಕೇವಲ ಪ್ರತೀಕವಷ್ಟೆ. ಪ್ರತಿಮೆಯೆ ದೇವರಲ್ಲ. **''ನ ಪ್ರತೀಕೇ ನ ಹಿ ಸಃ''** ಎಂಬ ವ್ಯಾಸಸೂತ್ರವು ಪ್ರತೀಕವು ಭಗವಂತನನ್ನು ಜ್ಞಾಪಿಸಿಕೊಡುತ್ತದೆ ವಿನಹಃ ಅದೇ ದೇವರಲ್ಲ ಎಂದಿದೆ. ತಂದೆ ತಾಯಿಗಳ ಫೋಟೋಗಳು ದೇವರಲ್ಲ. ಅದು ತಂದೆ ತಾಯಿಯಗಳ ಸ್ಮರಣೆ ನೀಡುವ ಸಾಧನ ಮಾತ್ರ.

6. ನಮಸ್ಕಾರದ ವಿಧಗಳು

ನಮಸ್ಕಾರವು ಕಾಯಿಕ, ವಾಚಿಕ, ಮಾನಸಿಕವೆಂದು ತ್ರಿವಿಧವಾಗಿದೆ. ದೇಹದಿಂದ ಮಾಡುವ ವಂದನೆಯು ದೈಹಿಕವಾಗಿದೆ (ಕಾಯಿದೆ) ಮಾತಿನಿಂದ ಮಾಡುವ ನಮಸ್ಕಾರ ವಾಚಿಕವೆನಿಸಿದೆ. ಮನಸ್ಸನ್ನು ದೇಹದೊಂದಿಗೆ ಉಪಯೋಗಿಸಿ ಮಾಡುವ ನಮಸ್ಕಾರ ಮಾನಸಿಕ ಎಂದೆನಿಸುತ್ತದೆ.

ಈ ಮೂರು ಸೇರಿದಾಗ ಮಾತ್ರ ಉತ್ತಮವಾದ ನಮಸ್ಕಾರವಾಗುತ್ತದೆ. ಇದನ್ನೇ ತ್ರಿಕರಣ ಪೂರ್ವಕವಾಗಿ ಮಾಡುವ ನಮಸ್ಕಾರ ಎನ್ನುತ್ತಾರೆ.

ಇವುಗಳಲ್ಲಿ ಕಾಯಕವು ಉತ್ತಮವು ವಾಚಿಕವು ಅಧಮ, ಮಾನಸವು ಮಧ್ಯಮವೆನಿಸಿದೆ.

ಕಾಯಿಕಃ ವಾಗ್ಭವಶ್ಚೈವ ಮಾನಸಸ್ತ್ರಿವಿಧಃ ಸ್ಮೃತಃ।
ನಮಸ್ಕಾರಸ್ತು ತತ್ವಜ್ಞ್ಯೈಃ ಉತ್ತಮಾಧಮಮಧ್ಯಮಾಃ॥

ದೈಹಿಕವಾಗಿ ಮಾಡುವ ನಮಸ್ಕಾರವು ಉತ್ತಮರನ್ನು ಕುರಿತು ನಿಮ್ಮ ಗುಣದ ಮುಂದೆ ನಾನು ನೀಚ ಎಂಬ ಭಾವನೆಯನ್ನು ದೇಹತಃ ತೋರಿಸುವುದಾಗಿದೆ ಆದ್ದರಿಂದಲೇ ವಾಚಿಕದ್ದಲ್ಲಿಯಾದರೂ ಬಾಯಿಯಲ್ಲಿ ಮಂತ್ರ ನಿರಂತರವಾಗಿ ಉಚ್ಚಾರ ಮಾಡುತ್ತಿದ್ದರೂ ಮನಸ್ಸು ಬೇರೆಡೆ ಇರಲು ಸಾಧ್ಯವಿದೆ ಎಂದೇ ವಾಚನಿಕ ಅಧಮ ಎನಿಸಿದೆ.

ಮನಸ್ಸಿನಲ್ಲೇ ಭಕ್ತಿಪೂರ್ವಕವಾಗಿ ನಮಿಸುವುದು ಸಾಧ್ಯವಿದೆ. ದೇವಸ್ಥಾನದ ಮುಂದೆ ಹೋದಾಗ ಕೈ ಜೋಡಿಸದಿದ್ದರೂ ಮನಸ್ಸಿನಿಂದ ನಮಸ್ಕರಿಸಬಹುದು. ಆದರೆ ಮನಸ್ಸಿನಿಂದ ನಮಸ್ಕರಿಸಿದಾಗ ಗುರು ಮುಂತಾದವರಿಗೆ ತಿಳಿಯಲು ಸಾಧ್ಯವಿಲ್ಲವೆಂದು ಮಧ್ಯಮ.

ಕಾಯಿಕದಲ್ಲಿ ಉತ್ತಮಾಧ್ಯಮ ಮಧ್ಯಮ

ಕಾಯಿಕ ನಮಸ್ಕಾರದಲ್ಲಿ ಮೂರು ವಿಧಗಳಿವೆ. ಕಾಯಿಕ ಉತ್ತಮ, ಕಾಯಿಕ ಮಧ್ಯಮ, ಕಾಯಿಕ ಅಧಮವೆಂದು.

ಕಾಯಿಕ ಉತ್ತಮ=ದಂಡಪ್ರಣಾಮ

ಭೂಮಿಯಲ್ಲಿ ದಂಡಾಕಾರವಾಗಿ ಮಲಗಿ, ಹಸ್ತ ಮತ್ತು ಪಾದಗಳನ್ನು ಚಾಚಿ, ಮಂಡಿಗಳಿಂದ ಭೂಸ್ಪರ್ಶ ಮಾಡಿ ತಲೆಯಿಂದಲೂ ಭೂಮಿಯನ್ನು

ಮುಟ್ಟಿಸಿ ಮಾಡುವ ನಮಸ್ಕಾರ ಉತ್ತಮವಾಗಿದ್ದು ಕಾಯಿಕ ಉತ್ತಮ ಎನಿಸಿದೆ. ಇದೇ ದಂಡ ಪ್ರಣಾಮ.

ಪ್ರಸಾರ್ಯ ಪಾದೌ ಹಸ್ತೌ ಚ ಪತಿತ್ವಾ ದಂಡವತ್ ಕ್ಷಿತೌ।
ಜಾನುಭ್ಯಾಂ ಧರಣೀಂ ಗತ್ವಾ ಶಿರಸಾ ಸ್ಪೃಶ್ಯ ಮೇದಿನೀಮ್।
ಕ್ರಿಯತೇ ಯೋ ನಮಸ್ಕಾರಃ ಉತ್ತಮಃ ಕಾಯಿಕಸ್ತು ಸಃ॥

ದಂಡಪ್ರಣಾಮ ಅಥವಾ ದಂಡವತ್ ಪ್ರಣಾಮವೆಂದು ಎರಡು ರೀತಿ ಉಪಯೋಗಿಸುವರು. ದಂಡ ಪ್ರಣಾಮ ಎಂದರೆ ಪೂಜೆಯಲ್ಲಿ ಮಾಡಿರುವ ತಪ್ಪು, ನ್ಯೂನತೆಗಳಿಗಾಗಿ, ತಪ್ಪಿನ ಪರಿಹಾರಕ್ಕಾಗಿ ದಂಡರೂಪದಲ್ಲಿ ದೇವರ ಮುಂದೆ ತನ್ನ ದೇಹವನ್ನು ಒಪ್ಪಿಸುವುದು. ಇನ್ನೊಂದು ಅರ್ಥದಲ್ಲಿ ಸಾಷ್ಟಾಂಗವಾಗಿ ಪ್ರಣಾಮವನ್ನು ಮಾಡುವಾಗ ದೇಹವು ಮಲಗಿಸಿಟ್ಟ ದಂಡದಂತೆ ಕಾಣುವುದು ಆದ್ದರಿಂದಲೂ ದಂಡ ಪ್ರಣಾಮವೆನಿಸಿದೆ.

ಮತ್ತೊಂದು ಅರ್ಥ ದಂಡಪ್ರಣಾಮವೆಂದರೆ ದಂಡ ಸಹಿತವಾಗಿ ನಮಸ್ಕರಿಸುವುದು. ಎಂದರ್ಥ, ಇದು ಸನ್ಯಾಸಿಗಳಿಗೆ ಹೆಚ್ಚು ಹೊಂದುತ್ತದೆ. ಸನ್ಯಾಸಿಗಳು ನಮಸ್ಕರಿಸುವಾಗ ದೀಕ್ಷಾ ದಂಡವನ್ನು ಹಿಡಿದೆ ನಮಸ್ಕರಿಸಬೇಕು. ಇದನ್ನೇ ಸಾಷ್ಟಾಂಗ ಪ್ರಣಾಮವೆನ್ನುವರು. ಇದರಲ್ಲಿ ತಲೆ, ಎದೆ, ದೃಷ್ಟಿ, ಮನಸ್ಸು ಮತ್ತು ಕಾಲು, ಹಸ್ತಗಳು, ಮಂಡಿಗಳು ಇವುಗಳನ್ನು ಭಗವಂತನಿಗೆ **''ಇವುಗಳು ನಿನ್ನಾಧೀನ''** ಎಂಬ ಭಾವನೆಯಿಂದ ಅರ್ಪಿಸುವುದು. ಸಾಷ್ಟಾಂಗದಲ್ಲಿ ಸಮಸ್ತ ದೇಹದ ಭಾರವು ಭೂಮಿಯಲ್ಲಿ ಹಾಕಿರುವುದರಿಂದ ನನ್ನ ಸಾಕುವ ಭಾರ ನಿನ್ನದೆ ಎಂಬ ಭಾವನೆ ಇರಬೇಕು. ಇದೊಂದು ನವ ವಿಧಭಕ್ತಿಯಲ್ಲಿ ಸೇರಿರುವ ''ಆತ್ಮನಿವೇದನೆ'' ಯಾಗಿದೆ.

ಕಾಯಿಕ ಮಧ್ಯಮ=ಪಂಚಾಂಗ ನಮಸ್ಕಾರ

ಮಂಡಿಗಳನ್ನು ಭೂಮಿಯಲ್ಲಿ ಸ್ಪರ್ಶಿಸಿ (ಊರಿ) ತಲೆಯನ್ನು ಭೂಮಿಯಲ್ಲಿಟ್ಟು ಸ್ಪರ್ಶ ಮಾಡಿ ಎದೆಯನ್ನು ತಗುಲಿಸದೇ ಮಾಡುವ ನಮಸ್ಕಾರವು ಕಾಯಿಕ ಮಧ್ಯಮ ಎನಿಸಿದೆ.

ಸ್ತ್ರೀಯರು ಎದೆಯನ್ನು ಭೂಮಿಗೆ ಸ್ಪರ್ಶಿಸದೇ ಮಾಡುವ ನಮಸ್ಕಾರವು ಕಾಯಿಕ ಮಧ್ಯಮ. ಈ ನಮಸ್ಕಾರವನ್ನೇ ಪಂಚಾಂಗ ನಮಸ್ಕಾರವೆನ್ನುವರು.

ಸ್ತ್ರೀಯರು ಸಾಷ್ಟಾಂಗ ಪ್ರಣಾಮವನ್ನು ಮಾಡಬಾರದು, ಸ್ತ್ರೀಯರ ಸ್ತನದ ಭಾರವನ್ನು ಭೂಮಿಯು ಸಹಿಸುವುದಿಲ್ಲ. ಇದಲ್ಲದೆ ವಿಪ್ರನ ಗುದ, ಶಂಖ, ಸ್ತ್ರೀಯರ ಸ್ತನ, ರೇತಸ್ಸು, ಪವಿತ್ರ ಗ್ರಂಥಿ ಇವುಗಳನ್ನು ಭೂಮಿಯು ಸಹಿಸಲಾರಳು. ಆದ್ದರಿಂದ ಬ್ರಾಹ್ಮಣನು ಆಸನದ ಮೇಲೆ ಕುಳಿತುಕೊಳ್ಳಬೇಕು. ಶಂಖವನ್ನು ಪೀಠದ ಮೇಲೂ, ಗ್ರಂಥಿಯನ್ನು ಬಿಚ್ಚಿಯೂ ಇಡಬೇಕು. ಸ್ತ್ರೀಯರಾದರೂ ಪಂಚಾಂಗ ನಮಸ್ಕಾರವನ್ನೋ ಸಾಧ್ಯವಾದರೆ ಎದೆಯನ್ನು ಬಿಟ್ಟು ಉಳಿದ ಏಳು ಅಂಗಗಳಿಂದ ಮಾಡುವ ಸಪ್ತಾಂಗ ನಮಸ್ಕಾರವನ್ನೋ ಮಾಡಬಹುದು.

ಜಾನುಭ್ಯಾಂ ಕ್ಷಿತಿಂ ಸ್ಪೃಷ್ಟ್ವಾ, ಶಿರಸಾ ಸ್ಪೃಶ್ಯ ಮೇದಿನೀಮ್।
ಕ್ರಿಯತೇ ಯೋ ನಮಸ್ಕಾರೋ ಮಧ್ಯಮಃ ಕಾಯಿಕಸ್ತು ಸಃ।
"ಬ್ರಾಹ್ಮಣಸ್ಯ ಗುದಂ, ಶಂಖಂ ಯೋಷಿತಃ ಸ್ತನಮಂಡಲಂ॥
ರೇತಃ ಪವಿತ್ರ ಗ್ರಂಥಿಂ ಚ ನ ಭೂಃ ಧಾರಯಿತುಂ ಕ್ಷಮಾ॥"

ಕಾಯಿಕಾಧಮ

ಜಾನು ಮತ್ತು ತಲೆಗಳನ್ನು ಭೂಸ್ಪರ್ಶ ಮಾಡದೇ, ಕೇವಲ ಕರಗಳನ್ನು ಜೋಡಿಸಿ ತಲೆಯ ಮೇಲಿರಿಸಿ ಮಾಡುವ ನಮಸ್ಕಾರವು ಕಾಯಧಮವೆನಿಸಿದೆ.

ಪುಟೀಕೃತ್ಯ ಕರೌ ಶೀರ್ಷೇ ದೀಯತೇ ಯದ್ಯಥಾ ತಥಾ।
ಅಸ್ಪೃಷ್ಟ್ವಾ ಜಾನುಶೀರ್ಷಾಭ್ಯಾಂ ಕ್ಷಿತಿಂ ಸೋ ಧಮ ಉಚ್ಯತೇ॥

ವಾಚನಿಕ ಉತ್ತಮ

ತಾನೇ ಸ್ವತಃ ಭಕ್ತಿಯುಕ್ತನಾಗಿ ಗದ್ಯಪದ್ಯಾತ್ಮಕವಾದ ಸ್ತೋತ್ರಗಳಿಂದ ಭಗವಂತನನ್ನು ಸ್ತುತಿಸುವುದೇ ವಾಚನಿಕ ಉತ್ತಮ.

ಯಾ ಸ್ವಯಂ ಗದ್ಯಪದ್ಯಾಭ್ಯಾಂ ಘಟಿತಾಭ್ಯಾಂ ನಮಸ್ಕೃತಿಃ।
ಕ್ರಿಯತೇ ಭಕ್ತಿಯುಕ್ತೈರ್ವಾ ವಾಚನಿಕಸ್ತೂತ್ತಮಃ ಸ್ಮೃತಃ॥

ಭಕ್ತಿಯ ಭರದಲ್ಲಿ, ತನ್ನ ಅನುಭವವನ್ನು ಮೇಳೈಸಿ ತಾನೇ ಶ್ಲೋಕ ರೂಪ ಅಥವಾ ವಾಕ್ಯಗಳಿಂದಾಗಲೀ ಸ್ತುತಿ ಮಾಡುವುದು ಉತ್ತಮ. ಪಂಡಿತರು ಪದ್ಯ ಮಾಡಬಹುದು. ಸಾಮಾನ್ಯ ವ್ಯಕ್ತಿಯು ವಾಕ್ಯಗಳಿಂದ

ಸ್ತುತಿ ಮಾಡಲು ಸಾಧ್ಯವಿದೆ. ತನಗೆ ಭಗವಂತನು ಅನುಗ್ರಹಿಸಿದ ವಿಷಯ ಆತ್ಮ ಸಾಕ್ಷಿಕವಾಗಿದ್ದು ಎಂದೂ ಅನುಭವವಿರುದ್ಧವಾಗದು ಎಂದೇ ಆ ಅನುಭಾವಿಕನ ಅನುಭವ ಸತ್ಯವೇ ಆಗಿರುತ್ತದೆ ಎಂದೇ ಉತ್ತಮ.

ವಾಚನಿಕ ಮಧ್ಯಮ

ಭಗವಂತನ ವಾಚನಕ ಸ್ತುತಿಗಳು ಆತ್ಮಸಾಕ್ಷಿಕವಾಗದೆ ಬೇರೆ ಮಹಾತ್ಮನ ಅನುಭವ ವೇದ್ಯವಾಗಿದ್ದು ಅವನಿಂದ ಮಾಡಲ್ಪಟ್ಟ ಸ್ತುತಿಯು ಪರದೃಷ್ಟವಾಗಿದೆ ಎಂಬಂಶದಲ್ಲಿ ಮಾತ್ರ ಮಧ್ಯಮ.

ಪರಕೃತವಾದ ಸ್ತುತಿಗಳು ವೇದದಲ್ಲಿ ಅಥವಾ ಪುರಾಣಗಳಲ್ಲಿ ಹೇಳಿರುವ ಭಗವಂತನ ಮಹಿಮೆಯಾಗಿರಬಹುದು. ಅಥವಾ ವೇದ ಮತ್ತು ಪುರಾಣಗಳಲ್ಲಿ ಹೇಳಿದ, ಮಹಾತ್ಮರಿಂದ ರಚಿತವಾದ ಅಥವಾ ಅಪರೋಕ್ಷ ಜ್ಞಾನಿಗಳಾದ ವಾದಿರಾಜರು ವ್ಯಾಸರಾಯರು, ಇವರ ಸ್ತುತಿಗಳಿಂದಾಗಲೀ ಪುರಂದರ ದಾಸರಂತಹವರಿಂದ ರಚಿತವಾದ ದೇವರನಾಮ-ಸುಳಾದಿ-ಉಗಾಭೋಗದಿಂದಗಾಲೀ ವಾಚನಿಕವಾಗಿ ಸ್ತುತಿಸಬಹುದು. ಇದು ವಾಚನಿಕ ಮಧ್ಯಮವೆನಿಸಿದೆ.

ವಾಚನಿಕ ಅಧಮ

ದೇವತಾಪುರುಷರಲ್ಲದೆ ಕೇವಲ ಮಾನವರಿಂದ ರಚಿತವಾದ ಸ್ತುತಿಗಳಿಂದ ಭಗವಂತನು ಸ್ತೋತ್ರ ಮಾಡುವುದು ವಾಚನಿಕ ಅಧಮ. ಮಾನವರು ಭಕ್ತಿಯಲ್ಲದೆಯೂ ಕೀರ್ತಿಗಾಗಿ, ಪಾಂಡಿತ್ಯ ಪ್ರದರ್ಶನಕ್ಕಾಗಿಯೂ ಮಾಡಿರಬಹುದೆಂದೇ ಅಧಮವಾಗಿದೆ.

ಯತ್ತು ಮಾನುಷವಾಕ್ಯೇನ ನಮನಂ ಕ್ರಿಯತೇ ಸದಾ।
ಸ ವಾಚನಿಕೋಽಧಮೋ ಜ್ಞೇಯೋ ನಮಸ್ಕಾರೇಷು ಪುತ್ರಕ॥

ಮಾನಸಿಕ ಉತ್ತಮಾಧ್ಯಮ ಮಧ್ಯಮ

ಇಷ್ಟರಾದ ದೇವರು, ತಂದೆ, ತಾಯಿ, ಗುರುಗಳಲ್ಲಿ ಮಾಡುವ ಮಾನಸಿಕ ನಮನವು ಉತ್ತಮವಾಗಿದೆ. ಮಧ್ಯಮದಲ್ಲಿ ಮಧ್ಯಮವು, ಅಧಮರಲ್ಲಿ ಅಧಮವೆನಿಸಿದೆ. ಇವುಗಳಲ್ಲೆಲ್ಲಾ ಅಂತರ್ಯಾಮಿಯಾದ ಭಗವಂತನಿಗೆ ನಮನ.

ಈ ಮೂರು ಕಾಯಿಕ, ವಾಚಿಕ, ಮಾನಸಿಕ ಮತ್ತು ಅವುಗಳ ಒಳಭೇದಗಳಲ್ಲಿ ಕಾಯಿಕವೇ ಉತ್ತಮವೆನಿಸಿದೆ. ಕಾಯಿಕನಮನದಿಂದ ದೇವತೆಗಳು ತೃಪ್ತರಾಗುವರು.

ಯಾವುದೇ ದೇವತೆಗಳನ್ನೂ (ಉದಾ: ಗಣಪತಿ, ರುದ್ರ, ನಂದಿ ಇತ್ಯಾದಿ) ಪೂಜಿಸಿದರೂ ನಮಸ್ಕರಿಸಿದರೂ ಅದು ಅವರಲ್ಲಿ ನಿಯಾಮಕನಾಗಿರುವ ಭಗವಂತನಿಗೆ ಸಲ್ಲುತ್ತದೆ ಎಂಬ ಭಾವನೆ ಇರಲೇಬೇಕು.

ತ್ರಿವಿಧೇ ಚ ನಮಸ್ಕಾರೇ ಕಾಯಿಕಶ್ಚೋತ್ತಮಃ ಸ್ಮೃತಃ।
ಕಾಯಿಕೈಸ್ತು ನಮಸ್ಕಾರೈಃ ದೇವಾಸ್ತುಷ್ಯಂತಿ ನಿತ್ಯಶಃ॥

ಪ್ರಣಾಮ

ಈ ಮೇಲೆ ಹೇಳಿದ ಕಾಯಿಕವನ್ನೇ ದೇಹವನ್ನು ದಂಡಾಕಾರವಾಗಿ ಭೂಮಿಯಲ್ಲಿ ಬೀಳಿಸಿ ತಲೆಯಲ್ಲಿ ಗುಣಕಚಿಹ್ನೆಯಂತೆ (x) ಬಲಗೈಯ ಮೇಲೆ ಬರುವಂತೆಯೂ ಎಡ ಹಸ್ತ ಕೆಳಗೆ ಬರುವಂತೆಯೂ, ಭಗವಂತನ ಬಲಗಾಲನ್ನು ಬಲದ ಕೈಯಿಂದಲೂ ಎಡಗಾಲನ್ನು ಮುಟ್ಟುವಂತೆ ಮಾಡುವ ನಮಸ್ಕಾರವೇ ಪ್ರಣಾಮ.

ದೊಡ್ಡವರಿಗೆ ಅಭಿವಾದನವನ್ನು ಮಾಡುವಾಗಲೂ ಹೀಗೆ ವ್ಯತ್ಕ್ರಮ ದಿಂದ ಕೈಗಳನ್ನು ಹಿಡಿದು ಬಲಗೈಯಿಂದ ಬಲಪಾದವನ್ನು, ಎಡದಿಂದ ಎಡಪಾದವನ್ನು ಮುಟ್ಟಬೇಕು.

ಅಯಮೇವ ನಮಸ್ಕಾರೋ ದಂಡಾದಿಪ್ರತಿಪತ್ತಿಭಿಃ।
ಪ್ರಣಾಮ ಇತಿ ವಿಜ್ಞೇಯಃ ಸ ಪೂರ್ವಪ್ರತಿಪಾದಿತಃ॥ (ಕಾಲಿಕಾ ಪುರಾಣ70)

ಹೀಗೆ ತಮ್ಮ ದೇಹವನ್ನು ದೊಡ್ಡವರ ಮುಂದೆ ಬೀಳಿಸುವುದರ ಮೂಲಕ ತಾವೇ ದೊಡ್ಡವರು, ನಾನಾದರೂ ನಿಮಗಿಂತ ನೀಚ. ನಿಮ್ಮ ಮಹಿಮೆಗಳ ಮುಂದೆ ನಾನೆಷ್ಟರವನು? ಎಂಬ ಅನುಸಂಧಾನವೇ ನಮಸ್ಕಾರ.

''ಸ್ವಾಪಕರ್ಷಬೋಧಕ, ಪರೋತ್ಕರ್ಷಬೋಧಕ ಕಾಯಿಕವ್ಯಾಪಾರಃ ನಮಸ್ಕಾರ'' ಎಂಬ ದುರ್ಗಾದಾಸನ ಮಾತು ನಮಸ್ಕಾರದ ಪೂರ್ಣ ಕಲ್ಪನೆಯನ್ನು ನೀಡುತ್ತದೆ.

7. ಪ್ರಣಾಮದ ವಿಧಗಳು

ನಮಸ್ಕಾರಗಳು ಹಿಂದೆ ಹೇಳಿದ ಅರ್ಥದಲ್ಲೇ ಪುನಃ ನಾಲ್ಕು ವಿಧಗಳನ್ನು ಹೀಗೆ ಸಂಗ್ರಹಿಸಬಹುದು.

೧. ಭಕ್ತಿಪೂರ್ವಕವಾಗಿ ಕೈಜೋಡಿಸಿ ನಮಸ್ಕರಿಸುವುದು ಭಕ್ತಿನಮನ

೨. ಅಷ್ಟಾಂಗ ನಮಸ್ಕಾರ

೩. ಪಂಚಾಂಗ ನಮಸ್ಕಾರ

೪. ಅಭಿವಾದನ ಎಂದು

ದೊಡ್ಡವರಾಗಲೀ, ಗುರುಗಳಾಗಲೀ, ದೇವಸ್ಥಾನವಾಗಲೀ ಗೋವು, ವಿಪ್ರ ಇವರುಗಳು ಎದುರಾದಾಗ ಭಕ್ತಿಪೂರ್ವಕವಾಗಿ ನಮಸ್ಕರಿಸಬೇಕು. ಇದೆ ಭಕ್ತಿ ನಮನ.

ಇದರಲ್ಲಿ ನಮಸ್ಕರಿಸುವ ಹಸ್ತಗಳು ಹೃದಯ ಅಥವಾ ತಲೆಯ ಮೇಲಿರುತ್ತದೆ ಭಗವಂತನ ಪ್ರೀತ್ಯುದ್ಧೇಶಕವಾಗಿರುತ್ತದೆ.

ಅಷ್ಟಾಂಗ ನಮಸ್ಕಾರ

ಭುಜಗಳು, ಪಾದಗಳು, ಮಂಡಿಗಳು, ಎದೆ, ಹಣೆ, ಕಣ್ಣು, ಮನಸ್ಸು ಮಾತು ಈ ಅವಯವಗಳಿಂದ (ಎಂಟು) ಮಾಡುವ ನಮಸ್ಕಾರವೆ ಸಾಷ್ಟಾಂಗ ನಮಸ್ಕಾರ. ಇದನ್ನೆ ದಂಡಪ್ರಣಾಮ.

ದೋಭ್ರ್ಯಾಂ ಪದ್ಭ್ಯಾಂ ಚ ಜಾನುಭ್ಯಾಂ ಉರಸಾ ಶಿರಸಾ ದೃಶಾ।
ಮನಸಾ ವಚಸಾ ಚೈವ ಪ್ರಣಾಮೋ ಅಷ್ಟಾಂಗ ಈರಿತಃ॥

- ವೈದ್ಯನಾಥೀಯ

ಸಾಷ್ಟಾಂಗದಲ್ಲಿ ದೇಹದ ಪ್ರಧಾನ ಅವಯವಗಳು ಭೂಮಿಯಲ್ಲಿ ಬಿದ್ದಿರಬೇಕು. ದೃಷ್ಟಿಯ ಭಗವಂತನ ಮೂರ್ತಿಯನ್ನೇ ನೋಡುತ್ತಿರಬೇಕು. ಆಭರಣಗಳನ್ನಲ್ಲ. ಮನಸ್ಸು ಭಗವಂತನಲ್ಲೇ ಲೀನವಾಗಿರಬೇಕು. ಹೀಗೆ ಮಾಡಿದಾಗ ದೇಹದ ಯಾವುದೇ ಭಾಗವಾಗಲೀ ದೇವರನ್ನು ಬಿಟ್ಟು ಇರಲಾರದು. ಆದ್ದರಿಂದಲೇ ಭಗವಂತನಿಗೆ ಮಾಡುವ ಈ ಸಾಷ್ಟಾಂಗ ಪ್ರಣಾಮ ಉಳಿದವುಗಳಿಗಿಂತ ಉತ್ತಮವೆನಿಸಿದೆ.

ಸಾಷ್ಟಾಂಗ ಪ್ರಣಾಮದಲ್ಲಿ ಮಾತ್ರ ನಮ್ಮನ್ನು ಮತ್ತು ನಮ್ಮೆಲ್ಲ ಇಂದ್ರಿಯಗಳನ್ನು ಭಗವಂತನಿಗೆ ಪೂರ್ಣವಾಗಿ ಅರ್ಪಿಸಲು ಸಾಧ್ಯವಿದೆ.

8. ಪಂಚಾಂಗ ನಮಸ್ಕಾರ

ಪಂಚಾಂಗದಲ್ಲಿ ಜಾನುಗಳು, ಹಸ್ತಗಳು, ತಲೆ, ಮಾತು, ಬುದ್ಧಿ ಈ ಐದು ಅಂಗಗಳನ್ನೊಗೊಂಡ ಪ್ರಣಾಮವು ಪಂಚಾಂಗ ಪ್ರಣಾಮವಾಗಿದೆ.

ಜಾನುಭ್ಯಾಂ ಚೈವ ಪಾಣಿಭ್ಯಾಂ ಶಿರಸಾ ವಚಸಾ ಧಿಯಾ।
ಪಂಚಾಂಗಕಃ ಪ್ರಣಾಮಃಸ್ಯಾತ್ ಪೂಜಾಸು ಪ್ರವರೌ ಇಮೌ॥

ಇದೊಂದು ಸ್ತ್ರೀಯರು ಮಾಡುವ ಪ್ರಣಾಮ ಪದ್ಧತಿಯಾಗಿದೆ. ಸ್ಥಳಾವಕಾಶ - ಕಾಲವಕಾಶಗಳು ಇಲ್ಲದಿರುವಾಗ ಪುರುಷರೂ ಮಾಡುವರು. ಈ ಪ್ರಣಾಮದಲ್ಲಿ ಪಾಪಗಳ ಉಪಯೋಗವಿಲ್ಲ. ಆದ್ದರಿಂದ ಪಾದಗಳನ್ನು ಎತ್ತಿ ನಮಸ್ಕರಿಸುವರು. ದಂಡಪ್ರಾಣಾಮದಲ್ಲಾದರೂ ''ಪದ್ಭ್ಯಾಂ ಕರಾಭ್ಯಾಂ'' ಎಂದಿರುವುದರಿಂದ ಪಾದಗಳ ಉಪಯೋಗವಿದೆ. ದೇಹ, ಮಾತು, ಮನಸ್ಸು, ಬುದ್ಧಿ, ತಲೆ ಇವುಗಳನ್ನು ಭಗವಚ್ಛಕ್ತಿಗೆ ಪೂರ್ಣವಾಗಿ ಅರ್ಪಿಸುವುದು ಪಂಚಾಂಗ ನಮಸ್ಕಾರ.

ದೇಹವನ್ನು ಬೀಳಿಸಿದಾಗ ಪರರ ಉತ್ಕರ್ಷವನ್ನು ಒಪ್ಪಿಕೊಂಡು, ದೇಹಮಾತ್ರವಲ್ಲ ಮಾತೂ (ಜಿಹ್ವೇಂದ್ರಿಯ) ನಿಮ್ಮನ್ನೇ ಗಾನ ಮಾಡುತ್ತಿದೆ ಎಂದು ವಾಚಾ ಸ್ತೋತ್ರ ಮಾಡಿ, ಮನಸ್ಸು ತಮ್ಮತ್ತಲೆ ಬಾಗಿದೆ. ಬುದ್ಧಿಯಲ್ಲಿ ನಿಮ್ಮ ಮಹಿಮಾಜ್ಞಾನ ತುಂಬಿದೆ ಇಂಥಹ ಭಗವಂತನಿಗೆ ನನ್ನನ್ನೇ ಅರ್ಪಿಸುವೆನು ಎಂಬುದೇ ಪಂಚಾಂಗ ನಮಸ್ಕಾರದ ಪಂಚಾಂಗ.

ಪದ್ಭ್ಯಾಂಕರಾಭ್ಯಾಂ ಜಾನುಭ್ಯಾಂ ಮೂರ್ಧ್ನಾ ಚ ಮನಸಾ ಸಹ।
ಪಂಚಾಂಗೈಃ ಕಥಿತಃ ಸ್ತ್ರೀಣಾಂ ಪ್ರಣಾಮಃ ಪಾಪಹಿಂಸಕಃ॥

ಪಂಚಾಂಗ ನಮಸ್ಕಾರದಲ್ಲಿ ತಲೆ, ಹಸ್ತ, ಭುಜಗಳನ್ನು ಮಂಡಿಯ ಸಮೀಪ ಬರುವಂತೆ ನಮಸ್ಕರಿಸಬೇಕು. ತ್ರ್ಯಂಗ-ಹಸ್ತಗಳನ್ನು ಮುಕುಲದಂತೆ ತಲೆಯ ಮೇಲೆ ಜೋಡಿಸಿದರೆ ತ್ರ್ಯಂಗ ನಮಸ್ಕಾರವು.

ಹಸ್ತೌ ಬದ್ಧ್ವಾ ತು ಮುಕುಲಃ ಮೂರ್ಧ್ನಿ ದೇಶೆ ನಿಯಾ ಜಯೇತ್।

ಏಕಾಂಗಂ- ತಲೆಯಿಂದ ಮಾತ್ರ ಬಗ್ಗಿಸಿ ಮಾಡುವ ನಮಸ್ಕಾರವೇ ಏಕಾಂಗ.

ಏಕಾಂಗಂ ತು ನಮಸ್ಕಾರಂ ಶಿರಸೈವ ಕೃತಂ ಭವೇತ್।
ಕಾಯೇನ ಮನಸಾ ವಾಚಾ ಬುದ್ಧ್ಯಾತ್ಮಭ್ಯಾಂ ತತಃ ಪರಮ್।
ಪಂಚಾಂಗೇನ ಕೃತಂ ಭಕ್ತ್ಯಾ ಪ್ರಣಾಮೋ ಪಂಚಾಂಗ ಈರಿತಃ॥

ಇದು ಸ್ತ್ರೀಯರು ಮಾಡಬೇಕಾದ ನಮಸ್ಕಾರ.

7. ಅಭಿವಾದನ - ಪಾದಗ್ರಹಣ

ನಮಸ್ಕರಿಸುವವನು ನಮಸ್ಕಾರ್ಯರ ಪಾದವನ್ನು ಮುಟ್ಟಿ ಸ್ವಗೋತ್ರೋಚ್ಚಾರಣಪೂರ್ವಕವಾಗಿ ಮಾಡುವ ಪ್ರಣಾಮವು ಅಭಿವಾದನ ವೆನಿಸಿದೆ. ಗುರುಶಬ್ದ ವಾಚ್ಯರಲ್ಲಿ ಅಭಿವಾದನ ವಿಹಿತವಾಗಿದೆ.

ಗುರುಗಳಿಗೆ ಶಿಷ್ಯನು ಮಾಡಬೇಕಾದದ್ದು ಅಭಿವಾದನ, ಶಿಷ್ಯನು ತನ್ನ ಎರಡು ಕಿವಿಗಳನ್ನು ಮುಟ್ಟುತ್ತಾ ಅಂದರೆ ಬಲಗಿವಿಯಿಂದ ಬಲಗಿವಿಯನ್ನು, ಎಡಗೈಯಿಂದ ಎಡಗಿವಿಯನ್ನು ಸ್ಪರ್ಶಿಸಿ ನಾಮ, ಗೋತ್ರಗಳನ್ನು ಹೇಳುತ್ತಾ ವ್ಯತ್ಕ್ರಮವಾಗಿ ಅವರ ಪಾದವನ್ನು ಅಂದರೆ ಬಲಹಸ್ತದಿಂದ ಬಲಪಾದ ಮುಟ್ಟುವಂತೆಯೂ, ಎಡಹಸ್ತ ಎಡಪಾದವನ್ನು ಸ್ಪರ್ಶಿಸುವಂತೆ ಗಣಕ ಚಿಹ್ನೆ (x) ಯಂತೆ ಸ್ಪರ್ಶಿಸುವುದೇ ಅಭಿವಾದನ.

ಶ್ರೋತ್ರೇ ಪಿಧಾಯ ಪಾಣಿಭ್ಯಾಂ ನಾಮಗೋತ್ರೇ ಚ ಪ್ರಬ್ರುವನ್।
ವ್ಯುತ್ಕ್ರಮೇಣ ಚ ತತ್ಪಾದೌ ಗೃಹ್ಣೀಯಾದ್ ಪುಣ್ಯಕಾಂಕ್ಷಯಾ॥

ಮತ್ತೊಂದು ಪದ್ಧತಿ

ಗಣಕಚಿಹ್ನೆಯಂತೆ ಬಲಗೈಯಿಂದ ಎಡದ ಕಿವಿಯನ್ನು ಎಡಹಸ್ತದಿಂದ ಬಲಗಿವಿಯನ್ನು ಸ್ಪರ್ಶಿಸಿ ನಮಸ್ಕರಿಸುವಾಗ ಮಾತ್ರ ಬಲಗೈ ಮೇಲೆ ಬರುವಂತೆ ಮಾಡಿಕೊಂಡು ಬಲಹಸ್ತದಿಂದ ಬಲಪಾದವನ್ನೂ ಎಡಹಸ್ತದಿಂದ ಎಡಪಾದವನ್ನೂ ಮುಟ್ಟುವ ಸಂಪ್ರದಾಯವೂ ಇದೆ.

ಸವ್ಯೇನ ಸವ್ಯಃ ಸ್ಪ್ರಷ್ಟವ್ಯೋ ದಕ್ಷಿಣೇನ ತು ದಕ್ಷಿಣಮ್।
ಗುರೂನ್ ದೃಷ್ಟ್ವಾ ಸಮುತ್ತಿಷ್ಠೇತ್ ಅಭಿವಾದ್ಯ ಕೃತಾಂಜಲಿಃ॥

ಗುರುಗಳು ಎದುರಾದಾಗ ಅಭಿವಾದನ ಮಾಡಲೇಬೇಕು. ಗುರುಗಳು ದೇವಸ್ಥಾನ, ಬ್ರಾಹ್ಮಣ ಇವರನ್ನು ನೋಡಿಯೂ ನಮಸ್ಕರಿಸದ ಅಧಮನಿಗೆ ಕಾಲಸೂತ್ರ ಎಂಬ ನರಕವು ಚಂದ್ರಸೂರ್ಯರಿರುವ ತನಕ ಇರುತ್ತದೆ.

"ದೇವಂ ಗುರುಂ ವಿಪ್ರಂ ದೃಷ್ಟ್ವಾ ನ ನಮೇದ್ ಯಸ್ತು ಸಂಭ್ರಮಾತ್।
ಸ ಕಾಲಸೂತ್ರಂ ವ್ರಜತಿ ಯಾವಚ್ಚಂದ್ರದಿವಾಕರೌ॥

ಮತ್ತೊಂದು ಪ್ರಣಾಮವಾದರೂ ಹೀಗೆ ತಿಳಿಸುತ್ತೆ. ಬ್ರಾಹ್ಮಣನನ್ನು ಗುರುವನ್ನು ನೋಡಿಯೂ ನಮಸ್ಕರಿಸದಿದ್ದರೆ ಅಂಥಹ ನರಾಧಮನು ಜೀವನಪರ್ಯಂತ ಅಶುಚಿಯಾದ ಯವನನಾಗುವನು. ಅವನನ್ನು ಮುಟ್ಟಬಾರದು.

ಬ್ರಾಹ್ಮಣಂ ಗುರುಂ ದೃಷ್ಟ್ವಾ ನ ನಮೇದ್ ಯೋ ನರಾಧಮಃ।
ಯಾವಜ್ಜೀವನಪರ್ಯಂತಂ ಅಶುಚಿರ್ಯವನೋ ಭವೇತ್॥

ಯವನ ಎಂದರೆ ಮಿಶ್ರಣ ಅಯೋಗ್ಯ ಎಂದೇ ಅರ್ಥ. (ಯು ಅಮಿಶ್ರಣೆ ಎಂಬ ಧಾತು)

ದೇವಹೇಲನ

ಮಾರ್ಗದಲ್ಲಿ ಒಬ್ಬ ದಂಡೀ ಎಂದರೆ ಸನ್ಯಾಸಿಯು ಪ್ರಾಪ್ತನಾದಾಗ ಅವನನ್ನು ನಮಸ್ಕರಿಸದವನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲೇಬೇಕು.

ದೇವತಾಯತನಂ ದೃಷ್ಟ್ವಾ ದೃಷ್ಟ್ವಾತು ದಂಡಿನಸ್ತಥಾ।
ನಮಸ್ಕಾರಂ ನ ಕುರ್ಯಾದ್ ಯಃ ಪ್ರಾಯಶ್ಚಿತ್ತೀ ಭವೇನ್ನರಃ॥

ವಾಹನಗಳಲ್ಲಿ ಬೇರೆ ಬೇರೆ ಸ್ಥಳಗಳಿಗೆ ಪ್ರಯಾಣ ಮಾಡುವಾಗ ಅನೇಕ ದೇವಾಲಯಗಳು ಹೋಗುತ್ತಿರುತ್ತವೆ. ಅವುಗಳ ಅಂತರ್ಯಾಮಿ ಯಾದ ಭಗವಂತನಿಗೆ ನಮಸ್ಕರಿಸಲೇಬೇಕು. ಇಲ್ಲದಿದ್ದರೆ ಮಹಾಪಾಪವಿರುತ್ತದೆ.

ವೇದಬಾಹ್ಯರಾದ ಶೂದ್ರಾದಿಗಳು ಪ್ರತಿಷ್ಠಾಪಿಸಿದ ದೇವಸ್ಥಾನ ಪ್ರಾಪ್ತವಾದರೆ ನಮಗೆ ನಿಶ್ಚಯವಿದ್ದಲ್ಲಿ ನಮಸ್ಕರಿಸಬೇಕಿಲ್ಲ. ದಾರಿಯಲ್ಲಿ ನಿಶ್ಚಯವಿರುವ ಸಂಭವ ಕಡಮೆ. ಆದ್ದರಿಂದ ಅಂತರ್ಯಾಮಿವಿವಕ್ಷೆ ಮಾಡಿದಾಗ ದೋಷಪ್ರಸಕ್ತಿ ಇರುವುದಿಲ್ಲ. ಆದ್ದರಿಂದಲೇ ಇಂಥ ದಾರಿಯಲ್ಲಿ ಮಾಡುವ ದೇವಹೇಲನದಿಂದ ಹಯಗ್ರೀವನು ನಮ್ಮನ್ನು ರಕ್ಷಿಸಲಿ ಎಂದು. ನಾರಾಯಣಮರ್ಮದಲ್ಲಿ ತಿಳಿಸಲಾಗಿದೆ.

"ಹಯಶೀರ್ಷೋಽಮಾಂ ಪಥಿ ದೇವಹೇಲನಾತ್" -ನಾರಾಯಣವರ್ಮ

ಅಭಿವಾದನಾರ್ಹರು - ಗುರುಶಬ್ಧವಾಚ್ಯರು

ಪುರುಷರಲ್ಲಿ ಉಪಾಧ್ಯಾಯ, ತಂದೆ, ಜ್ಯೇಷ್ಠಸೋದರರು, ರಾಜ, ಸೋದರಮಾವ, ಹೆಣ್ಣು ಕೊಟ್ಟ ಮಾವ, ಆಪದ್ರಕ್ಷಕ, ತಾಯಿಯ ತಂದೆ, ತಂದೆಯ ತಂದೆ (ಪಿತಾಮಹ), ಬಂಧುಗಳಲ್ಲಿ ವಯೋವೃದ್ಧ, ಚಿಕ್ಕಪ್ಪ ಇವರುಗಳು ಗುರು ಎನಿಸಿದ್ದಾರೆ. ಅಭಿವಾದನ ಅರ್ಹರು.

ಉಪಾಧ್ಯಾಯಃ ಪಿತಾ ಜ್ಯೇಷ್ಠೋ ಭ್ರಾತಾ ಚೈವ ಮಹೀಪತಿಃ।
ಮಾತುಲಃ ಶ್ವಶುರಃ ತ್ರಾತಾ, ಮಾತಾಮಹ ಪಿತಾಮಹೌ।
ಬಂಧುರ್ಜ್ಯೇಷ್ಠಃ ಪಿತೃವ್ಯಶ್ಚ ಪುಂಸ್ಯೇತೇ ಗುರವಃ ಸ್ಮೃತಾಃ॥

ಸ್ತ್ರೀಯರಲ್ಲಿ ಗುರುಶಬ್ಧ ವಾಚ್ಯರು

ತಾಯಿ, ತಾಯಿಯ ತಾಯಿ (ಅಜ್ಜಿ), ಗುರುವಿನ ಪತ್ನಿ, ತಂದೆಯ ತಾಯಿ, ತಂದೆ ತಾಯಿಯರ ಸೋದರಿಯರು (ಚಿಕ್ಕಮ್ಮ ಅತ್ತೆ, ದೊಡ್ಡ ಅಜ್ಜಿ, ಹಾಲು ಕೊಟ್ಟು ಪೋಷಿಸಿದ ದಾದಿ (ಧಾತ್ರಿ) ಇವರು ಸ್ತ್ರೀಯರಲ್ಲಿ ಗುರುಶಬ್ದವಾಚ್ಯರೆನಿಸಿದ್ದು ಅಭಿವಾದನಾರ್ಹರು.

ಮಾತಾ ಮಾತಾಮಹೀ ಗುರ್ವೀ ಪಿತುರ್ಮಾತುಶ್ಚ ಸೋದರಾಃ।
ಶ್ವಶ್ರೂಃ ಪಿತಾಮಹೀ ಜ್ಯೇಷ್ಠಾ ಧಾತ್ರೀ ಚ ಗುರವಃ ಸ್ತ್ರಿಯಾಂ॥

ನೇರವಾಗಿ ಹಾಕಿಸಿಕೊಳ್ಳಬಾರದು ಆದರೆ ಮುತ್ತೈದೆ ಸ್ತ್ರೀಯರು ನೇರವಾಗಿ ಮಂತ್ರಾಕ್ಷತೆಯನ್ನು ಹಾಕಬಹುದು. ಈ ಗುರುಶಬ್ದವಾಚ್ಯರಿಗೆ ಯಾವಾಗಲೂ ಯಾವ ಅವಸ್ಥೆಯಲ್ಲಿರಲಿ ಗೌರವದಿಂದ ನಮಸ್ಕರಿಸಬೇಕು.

ಸರ್ವೇ ಚಾಪಿ ನಮಸ್ಕಾರ್ಯಾಃ ಸರ್ವಾವಸ್ಥಾಸು ಸರ್ವದಾ।

8. ಪತಿವ್ರತೆಯ ನಮಸ್ಕಾರ

ಪತಿವ್ರತೆಯಾದ ಸುಮಂಗಲಿಯು ಬೇರೆ ಬ್ರಾಹ್ಮಣರಿಗೆ ನಮಸ್ಕರಿಸುವಾಗ ಅವರ ಪಾದವನ್ನು ಮುಟ್ಟಬಾರದು. ದೂರದಿಂದಲೇ ಅಭಿವಾದನವನ್ನು ಮಾಡಬೇಕು. ಬೇರೆಯವರಿಗೆ ನಮಸ್ಕರಿಸುವಾಗಲೂ ತನ್ನ ಪತಿಯ ಅಂತರ್ಯಾಮಿಯಾದ ಭಗವಂತನನ್ನೇ ನಮಸ್ಕರಿಸಬೇಕು. ಈ ನಿಯಮವನ್ನು ಕಂಠದಲ್ಲಿ ಪ್ರಾಣವಿರುವವರೆಗೂ ಅನುಸರಿಸಬೇಕು.

9. ಮಂತ್ರಾಕ್ಷತೆ ಸ್ವೀಕಾರ

ಪ್ರವಚನಕ್ಕೆ ಹೋಗಿದ್ದಾಗ ಪ್ರವಚನನಾಂತರದಲ್ಲಿ ಮಂತ್ರಾಕ್ಷತೆಯನ್ನು ಸೆರಗಿನ ತುದಿಯಲ್ಲಿ ತೆಗೆದುಕೊಂಡು ಅದನ್ನು ತನ್ನ ತಲೆಯ ಮೇಲೆ ತಾನೇ ಹಾಕಿಕೊಳ್ಳದೆ ಮನೆಗೆ ಬಂದು ತನ್ನ ಗಂಡನ ಕೈಯಲ್ಲಿ ನೀಡಿ ತಾನು ಪತಿಗೆ ನಮಸ್ಕರಿಸಿ ಗಂಡನ ಹಸ್ತದಿಂದಲೇ ಮಂತ್ರಾಕ್ಷತೆಯನ್ನು ಹಾಕಿಸಿಕೊಳ್ಳಬೇಕು. ಸುಮಂಗಲೀ ಸ್ತ್ರೀಯರು ತನ್ನ ಗಂಡನ ಹೊರತು ಬೇರೆ ಯಾವ ಬ್ರಾಹ್ಮಣನಿಂದಲೂ ಮಂತ್ರಾಕ್ಷತೆಯನ್ನು ತಂದೆಯಿಂದಲೂ ಮತ್ತು ವಿವಾಹವಾದ ಮೇಲೆ ಹಾಕಿಸಿಕೊಳ್ಳಬಾರದು ಕನ್ಯೆಯಾಗಿರುವಾಗ ಹಾಕಿಸಿಕೊಳ್ಳಬಹುದು.

ಅಭಿವಾದನ ಮಾಡಬಾರದ ಸ್ಥಳ ಮತ್ತು ಅವಸ್ಥೆಗಳು

ಸಭೆಯಲ್ಲಿ, ಯಜ್ಞಶಾಲೆಯಲ್ಲಿ ದೇವಾಲಯದಲ್ಲಿ ಪ್ರತ್ಯೇಕವಾಗಿ

ಒಬ್ಬ ಗುರುವನ್ನು ಮಾತ್ರ ಉದ್ದೇಶಿಸಿ ಅಭಿವಾದನ ಮಾಡಬಾರದು. ಪುಣ್ಯ ಕ್ಷೀಣವಾಗುತ್ತದೆ.

ಸಭಾಯಾಂ ಯಜ್ಞ ಶಾಲಾಯಾಂ ದೇವತಾಯತನೇಷು ಚ।
ಪ್ರತ್ಯೇಕಂ ತು ನಮಸ್ಕಾರಃ ಹಂತಿ ಪುಣ್ಯಂ ಪುರಾಕೃತಮ್।

ಏಕೆಂದರೆ ಸಭೆಯಲ್ಲಿ ಅನೇಕ ಪಂಡಿತರು, ಜ್ಞಾನಿವರ್ಯರು, ಸೇರಿಸಬಹುದು, ಇವರ ಮಧ್ಯದಲ್ಲಿ ತನಗೆ ಗೊತ್ತಿರುವ ತನ್ನ ಗುರುವನ್ನು ಮಾತ್ರ ನಮಿಸುವುದು ಎಂದರೆ ಉಳಿದವರನ್ನು ತಿರಸ್ಕರಿಸಿದಂತೆಯೆ.

ತನ್ನ ಗುರುಗಳಿಗೆ ನಮಸ್ಕರಿಸುವ ರಭಸದಲ್ಲಿ ಮತ್ತೊಬ್ಬರನ್ನೂ ಅಗೌರವಿಸಿದರೆ ಪುಣ್ಯ ಸಂಪಾದನೆಗಿಂತ ಪಾಪ ಸಂಘಟನೆ ಅಧಿಕವಾದೀತು. ಸಭೆಯು ಮುಗಿದ ನಂತರ ಗೌರವ ಸಲ್ಲಿಸಬಹುದು.

ಗುರುಗಳಾದರೂ ಕೆಲವು ಅವಸ್ಥೆಗಳಲ್ಲಿ ಅಭಿನಂದನೆಗೆ ಅನರ್ಹರಾಗಿರುವರು. ಗುರುಗಳು ದೇವರಿಗಾಗಿ ಎರಡೂ ಹಸ್ತಗಳಲ್ಲಿ ಹೂಗಳನ್ನು ತರುತ್ತಿರುವಾಗ, ನೀರಿನ ಕೊಡ ತರುತ್ತಿರುವಾಗ, ತೈಲಾಭ್ಯಂಗ ಮಾಡುತ್ತಿರುವಾಗ, ನೀರಿನ ಮಧ್ಯೆ ಸ್ನಾನಮಾಡುತ್ತಿರುವಾಗ ಶಿಷ್ಯನು ನಮಸ್ಕರಿಸಬಾರದು, ಗುರುವು ಆಶೀರ್ವಾದ ಮಾಡಲೂಬಾರದು. ಮಾಡಿದರೆ ಇಬ್ಬರೂ ನರಕ ಭಾಗಿಯಾಗುವರು.

ಪುಷ್ಪಹಸ್ತೋ ವಾರಿಹಸ್ತೋ ತೈಲಾಭ್ಯಂಗೋ ಜಲೇ ಸ್ಥಿತಃ।
ಆಶೀಃಕರ್ತಾ ನಮಸ್ಕರ್ತಾ ಉಭಯೋರ್ನರಕಂ ವ್ರಜೇತ್॥

10. ನಮಸ್ಕಾರ ಅನರ್ಹ ಬ್ರಾಹ್ಮಣನ ಅವಸ್ಥೆಗಳು

ವಿಪ್ರಂ ಸ್ನಾನಂ ಕುರ್ವಂತಂ ಸಮಿತ್ಕುಶಕರಂ ತಥಾ।
ಉದಪಾತ್ರಧರಂ ಚೈವ ಭುಂಜಂತಂ ನಾಭಿವಾದಯೇತ್॥

- ನಾರದೀಯ

ದೂರಸ್ಥಂ ಜಲಮಧ್ಯಸ್ಥಂ ಧಾವಂತಂ ಮದಗರ್ವಿತಮ್.
ಕ್ರೋಧವಂತಂ ವಿಜಾನೀಯಾತ್ ನಮಸ್ಕಾರಂ ಚ ವರ್ಜಯೇತ್॥

ಸ್ನಾನ ಮಾಡುತ್ತಿರುವಾಗ ಊಟಮಾಡುತ್ತಿರುವಾಗ ಕೋಪಿಯಾಗಿರುವಾಗ, ಅಶುಚಿಯಾಗಿರುವಾಗ, ಶ್ರಾದ್ಧ, ದಾನ, ವ್ರತ, ತರ್ಪಣ, ಮಾಡುತ್ತಿರುವಾಗ ಹಾಗು ಮೃತಾಶೌಚದಲ್ಲಿ ನಮಸ್ಕರಿಸಬಾರದು.

ಕೋಪಾದಿ ಅವಸ್ಥೆಗಳಲ್ಲಿ ಆಶೀರ್ವಾದದ ಬದಲು ವಿಪರೀತ ಫಲವೆ ದೊರೆಯುತ್ತದೆ, ಶ್ರಾದ್ಧಾದಿ ಸಮಯಗಳಲ್ಲಿ ಅವರ ಮನಸ್ಸು ಬೇರೆಡೆ ಇರುತ್ತದೆ. ನಮಸ್ಕರಿಸಿದಾಗ ಆಶೀರ್ವಾದ ಮಾಡಲು ಸಾಧ್ಯವಾಗಲಾರದು ಎಂದೇ ಈ ಸ್ಥಳ ಮತ್ತು ಅವಸ್ಥೆಗಳಲ್ಲಿ ಅಭಿವಾದನ ಮಾಡಬಾರದು. ಆದರೆ ಅಶೌಚವಿರುವ ವಿಪ್ರನನ್ನು ನಮಸ್ಕರಿಸಬಾರದು. ಆಶೌಚವಿರುವಾಗ ಯಾರೂ ಯಾರಿಗೂ ನಮಸ್ಕರಿಸಬಾರದು.

ನಮಸ್ಕರಿಸಿದಾಗ ಆಶೀರ್ವಾದ ಮಾಡಲೇಬೇಕು

ಶಿಷ್ಯನು ಗುರುವಿಗೆ ನಮಸ್ಕರಿಸಿದಾಗ ಯಥಾಯೋಗ್ಯವಾಗಿ ಆಶೀರ್ವದಿಸಬೇಕು. ಬ್ರಾಹ್ಮಣನು ನಮಸ್ಕರಿಸಿದರೆ **"ಆಯುಷ್ಮಾನ್ ಭವ ದೇವದತ್ತಾ"** ಎಂದು ನಾಮದ ಕಡೆಯ ಅಕ್ಷರವನ್ನು ಪ್ಲುತವಾಗಿ ಹೇಳಬೇಕು. ಇದು ದೀರ್ಘಕಾಲ ಬದುಕಿರು ಎಂದು ಸೂಚಿಸುತ್ತದೆ.

ಕ್ಷತ್ರಿಯನಾದರೆ ಅವನ ಅವಶ್ಯಕತೆ ತಿಳಿದು ಅದರಂತೆ ಆಶೀರ್ವದಿಸಬೇಕು. ವಿವಾಹಯೋಗ್ಯ ಕನ್ಯೆಯು ನಮಸ್ಕರಿಸಿದಾಗ ಬ್ರಹ್ಮಜ್ಞಾನಸಿದ್ಧಿರಸ್ತು ಎಂಬುದು ಆಶೀರ್ವಾದವಾದರೂ ಕಾಲ ಪ್ರಜ್ಞೆಯ ಮೌಢ್ಯವನ್ನು ತಿಳಿಸುತ್ತದೆ. ಕಲ್ಯಾಣ ಪ್ರಾಪ್ತಿರಸ್ತು ಎಂಬುದೆ ಆ ಸಮಯಕ್ಕೆ ಯೋಗ್ಯವಾದ ಆಶೀರ್ವಾದ ಹಾಗೆಯೆ ರೋಗಿಯು ಬಂದಾಗ **"ನಿರಾಮಯಂ ಭೂಯಾತ್"** ಎಂದೇ ಹೇಳಬೇಕು. ಅಂತೆಯೆ ಬ್ರಾಹ್ಮಣನಿಗೆ **"ಮಂಗಳಂ ಭೂಯಾತ್"** ಎಂದು ಕ್ಷತ್ರಿಯನಿಗೆ **"ಆಯುಷ್ಮಾನ್ ಭವ"** ಎಂದು ವೈಶ್ಯನಿಗೆ "ಅಭಿವೃದ್ಧಿರ್ಭೂಯಾತ್" ಎಂದು ಶೂದ್ರನಿಗೆ "ನಿರಾಮಯಂ ಭೂಯಾತ್" ಎಂದು ಸಾಮಾನ್ಯವಾಗಿ ಆಶೀರ್ವದಿಸುವುದು.

ಆಶೀರ್ವದಿಸದಿದ್ದರೆ ದೋಷ

ನಮಸ್ಕಾರವನ್ನು ಮಾಡಿದಾಗ ನಮಸ್ಕಾರ ಮಾಡಿಸಿಕೊಂಡವರು ಆಶೀರ್ವಾದವನ್ನು ಮಾಡಲೇಬೇಕು. ಆಶೀರ್ವಾದವನ್ನು ಮಾಡಿದಿದ್ದರೆ ನಮಸ್ಕರಿಸಿದವರು ಪಾಪಕ್ಕೆ ಇವನೂ ಪಾಲುಗಾರನಾಗುವನು ಮತ್ತು ಆಶೀರ್ವಾದ ಮಾಡದವನ ಆಯುಸ್ಸು ನಮಸ್ಕರಿಸಿದಾತನಿಗೆ ಬರುತ್ತದೆ.

ಅಭಿವಾದನ ಮಾಡುವ ಮಾಡುವ ಮೊದಲೇ ಆಶೀರ್ವಾದ ಮಾಡಲು ಪ್ರಾರಂಭ ಮಾಡಿರಬೇಕು. ನಮಸ್ಕಾರ ಮಾಡಿದ ನಂತರ ಆಶೀರ್ವಾದ ಸರಿಯಲ್ಲ.

ಅಭಿವಾದಯತಃ ಪೂರ್ವಮಾಶಿಷಃ ನ ಪ್ರಯಚ್ಛತಿ।
ಯದ್ದುಷ್ಕೃತ್ಯಂ ಭವೇತ್ತಸ್ಯ ತಸ್ಮಾದ್ಭಾಗಂ ಪ್ರಪದ್ಯತೇ॥

ಮಾರ್ಕಂಡೇಯರು ದೀರ್ಘಾಯುಷ್ಮಂತರಾಗಲು ಸರ್ವರಿಗೂ ನಮಸ್ಕರಿಸು ಎಂಬ ನಾರದರ ಉಪದೇಶವೇ ಕಾರಣವಾಗಿದೆ.

ಪ್ರತಿವ್ರತೆಯಾದ ಸುಶೀಲೆಯು ತನ್ನ ಪತಿಯನ್ನು ಸೆಳೆದೊಯ್ಯಲು ಬಂದಿದ್ದ ಚಿತ್ರಗುಪ್ತನು ಕಂಡುಕೂಡಲೇ ನಮಸ್ಕರಿಸಿ ದೀರ್ಘ ಸುಮಂಗಲೀ ಭವ ಎಂಬ ಚಿತ್ರ ಗುಪ್ತನ ಆಶೀರ್ವಾದದಿಂದ ಪತಿಗೆ ದೀರ್ಘಾಯುಸ್ಸನ್ನು ತಂದುಕೊಟ್ಟಳು.

ಅಭಿವಾದೇ ಕೃತೇ ಯಸ್ತು ನ ಕರೋತ್ಯಭಿವಾದನಂ।
ಆಶಿಷಂ ವಾ ನ ಕುರುತೇ ಸ ಯಾತಿ ನರಕಾನ್ ಬಹೂನ್॥

ಬ್ರಹ್ಮದೇವರಿಗೆ ಪ್ರಣಾಮಗೈದ ಭೃಗುಋಷಿಗಳು "ನಿನಗೆ ಲೋಕದಲ್ಲಿ ಪೂಜೆಯು ಇಲ್ಲದಿರಲಿ" ಎಂದು ಶಪಿಸಿದ್ದು ಬ್ರಹ್ಮದೇವರು ಆಶೀರ್ವಾದಾದಿಗಳನ್ನು ಮಾಡದೆ ಸುಮ್ಮನೆ ತಟಸ್ಥರಾಗಿ ಇದ್ದದ್ದೆ ಕಾರಣವಾಗಿದೆ. ಆಶೀರ್ವಾದಿಸದಿದ್ದವನಿಗೆ ನಮಸ್ಕರಿಸಬಾರದೆಂದೇ ಶಾಸ್ತ್ರ ನಿಯಮವಾಗಿದೆ.

ವೇದಾಧ್ಯಯನಾದಿಗಳಲ್ಲಿ ಅಭಿವಾದನ ಕ್ರಮ ಪಂಡಿತರ ಸಭೆ, ಪುಣ್ಯಕ್ಷೇತ್ರ, ಪುಣ್ಯತೀರ್ಥ ವೇದಾಧ್ಯಯನ ಸಮಯದಲ್ಲಿ ನಮಸ್ಕರಿಸುವಾಗ.

ಸಭಾಯೈ ನಮಃ ಎಂದು ಹೇಳಬೇಕೇ ವಿನಹ ಪ್ರತ್ಯೇಕವಾಗಿ ಅಭಿವಾದನ ಸಲ್ಲದು.

ಚಪ್ಪಲೀಧರಿಸಿ ನಮಸ್ಕಾರ ನಿಷಿದ್ಧ

ಚಪ್ಪಲಿ ಧರಿಸಿ, ಮುಂಡಾಸು, ಟೋಪಿ ಧರಿಸಿಕೊಂಡು, ಕೈಗಳನ್ನು ಜೋಡಿಸದೆ, ಯಾರನ್ನೂ ಅಭಿವಾದನ ಮಾಡಬಾರದು.

ನ ಸೋಪಾನತ್ಕ ವೇಷ್ಟಿತಶಿರಾ ಅವಹಿತಪಾಣಿರ್ವಾ ಅಭಿವಾದಯೀತ॥

11. ಒಂದು ಕೈಯಿಂದ ನಮಸ್ಕರಿಸಬಾರದು

ಈಗಿನ ಪದ್ಧತಿಯಂತೆ ಒಂದು ಹಸ್ತದಿಂದಲೇ ನಮಸ್ಕಾರ ವಿಧಿಬದ್ಧವದಂತೆ ತೋರುತ್ತದೆ. ಆದರೆ ಶಾಸ್ತ್ರಗಳು ಒಂದು ಹಸ್ತದಿಂದ ಪ್ರಣಾಮವನ್ನು ನಿಷೇಧಿಸಿದೆ.

ಭಗವಂತನಿಗೆ ಎಂದೂ, ಯಾವ ಸಂದರ್ಭದಲ್ಲೂ ಒಂದು ಹಸ್ತದಿಂದ ನಮಸ್ಕರಿಸಬಾರದು. ನಮಸ್ಕರಿಸಿದವನಿಗೆ ದಂಡ (ಶಿಕ್ಷೆ) ಯೆಂದರೆ ಆ ಹಸ್ತವನ್ನೇ ಕತ್ತರಿಸುವುದು.

ಏಕೇನ ಪಾಣಿನಾ ಯೋ ವೈ ಪ್ರಣಮೇದ್ ದೇವಮಚ್ಯುತಂ।
ತಸ್ಯ ದಂಡಃ ಕರಚ್ಛೇಧಃ ಸ್ಮೃತಿಷು ಪ್ರತಿಪಾದಿತಃ॥

ವಿಷ್ಣುವನ್ನು ಒಂದು ಕೈಯಿಂದ ನಮಸ್ಕರಿಸಿದರೆ ಹಾಗೂ ಬ್ರಾಹ್ಮಣನಿಗೆ ಒಂದು ಕೈಯಿಂದ ನಮಸ್ಕರಿಸಿದರೆ ಕರವನ್ನು ಕತ್ತರಿಸಬೇಕು.

ಕರೇಣ್ಯೈಕೇನ ದೇವೇಶಂ ಯೋ ವಿಷ್ಣುಂ ಬ್ರಾಹ್ಮಣಮಚ್ಯುತಂ।
ಯೋ ಮೋಹಾತ್ ಪ್ರಣಮೇತ್ ತಸ್ಯ ಕರಚ್ಛೇದೋ ನ ಸಂಶಯಃ॥

ಜನ್ಮದಿಂದ ಆರಂಭಿಸಿ ಯಾವ ಪುಣ್ಯ ಕಾರ್ಯಗಳನ್ನು ಮಾಡಿರುವನೋ ಆ ಪುಣ್ಯಗಳೆಲ್ಲವೂ ಏಕ ಹಸ್ತದಿಂದ ನಮಸ್ಕರಿಸಿದರೆ ನಾಶವಾಗುವುವು.

ಜನ್ಮಪ್ರಭೃತಿ ಯತ್ಕಿಂಚಿತ್ ಪುಮಾನ್ ವೈ ಧರ್ಮಮಾಚರೇತ್।
ಸರ್ವಂ ತನ್ನಿಷ್ಫಲಂ ಯಾತಿ ಏಕಹಸ್ತಾಭಿವಾದನಮ್॥ - ವಿಷ್ಣುಸ್ಮೃತಿ

ಆದ್ದರಿಂದ ಭಗವಂತನಿಗೆ ಎರಡೂ ಕೈಗಳಿಂದ ನಮಸ್ಕರಿಸಬೇಕು.

ತಸ್ಮಾದ್ ಉಭಾಭ್ಯಾಂ ಪಾಣಿಭ್ಯಾಂ ಪ್ರಣಮೇತ್ ಸ್ವಾಮಿನಂ ಪರಂ।

ಜ್ಞಾನವೃದ್ಧರು, ವಯೋವೃದ್ಧರು ಬಂದಾಗ ನಮ್ಮ ಪ್ರಾಣಗಳು ಮೇಲಕ್ಕೆ ಹಾರುತ್ತವೆ. ಬಂದ ವೃದ್ಧರಿಗೆ ಎದುರುಗೊಳ್ಳುವಿಕೆ ಮತ್ತು ಅಭಿವಾದನ (ಪಾದಮುಟ್ಟಿ ನಮಸ್ಕರಿಸುವುದು) ಇವುಗಳಿಂದ ಸ್ವಸ್ಥಾನಕ್ಕೆ ತರಬಹುದು.

ಊರ್ಧ್ವಂ ಪ್ರಾಣಾಃ ಹ್ಯುತ್ಕ್ರಾಮಂತಿ ಯೂನೇ ಸ್ಥವಿರ ಆಗತೇ।
ಪ್ರತ್ಯುತ್ಥಾನಾಭಿವಾದಾಭ್ಯಾಂ ಪುನಸ್ತಾನ್ ಪ್ರತಿಪದ್ಯತೇ।

ಶೂದ್ರನಿಗೆ ಬ್ರಾಹ್ಮಣನ ಆಶೀರ್ವಾದ

ಶೂದ್ರನು, ಬ್ರಾಹ್ಮಣನನ್ನು ನೋಡಿದ ಕೂಡಲೇ ನಮಸ್ಕರಿಸಬೇಕು. ಆದರೆ ಶೂದ್ರನು ಕುಳಿತುಕೊಂಡು ನಮಸ್ಕರಿಸಿದಾಗ ಬ್ರಾಹ್ಮಣನು ದೀರ್ಘಾಯುಷ್ಮಾನ್ ಭವ ಎಂದು ಆಶೀರ್ವದಿಸಿದರೆ ಇಬ್ಬರೂ ನರದಲ್ಲಿ ಬೀಳುವರು.

ಉಪವಿಶ್ಯ ನಮೇತ್ ಶೂದ್ರೋ ದೀರ್ಘಾಯುರ್ಬ್ರಾಹ್ಮಣೋ ವದೇತ್।
ಸ ಶೂದ್ರೋ ನರಕಂ ಯಾತಿ ಬ್ರಾಹ್ಮಣೋ ಯಾತ್ಯಧೋಗತಿಮ್॥

12. ನಮಸ್ಕಾರದ ಫಲ

ದೊಡ್ಡವರನ್ನು ನಮಸ್ಕರಿಸಿದಾಗ ಆಯುಸ್ಸು, ವಿದ್ಯೆ, ಕೀರ್ತಿ ಶಾರೀರಿಕ ಬಲಗಳು ಪ್ರಾಪ್ತವಾಗುತ್ತದೆ. ಒಂದು ನಮಸ್ಕಾರವನ್ನು ಮಾಡಿದರೂ ಸಾಕು ಹತ್ತು ಅಶ್ವಮೇಧಯಾಗದ ಫಲವನ್ನು ಹೇಳಲಾಗಿದೆ. ಅಲ್ಲದೆ ಅಶ್ವಮೇಧಯಾಗವನ್ನು ಮಾಡಿದವನಾದರೂ ಭೂಮಿಯಲ್ಲಿ ಪುನಃ ಜನಿಸುವನು. ಆದರೆ ನಮಸ್ಕರಿಸದವನು ಪುನಃ ಜನ್ಮವನ್ನು ಎತ್ತುವುದಿಲ್ಲ.

ಏಕೋಽಪಿ ಕೃಷ್ಣಪ್ರಣಾಮಃ ದಶಾಶ್ವಮೇಧಾವಭೃಥೇನ ತುಲ್ಯಃ।
ದಶಾಶ್ವಮೇಧೀ ಪುನರೇತಿ ಜನ್ಮ ಕೃಷ್ಣಪ್ರಣಾಮೀ ನ ಪುನರ್ಭವಾಯ॥
— ಶಾಂತಿ 46–123

ಒಂದು ಹಸ್ತದಿಂದ ವಿಷ್ಣು ಮುಂತಾದ ದೇವತೆಗಳನ್ನು ನಮಸ್ಕರಿಸುವುದು. ವಿಷ್ಣುವಿಗೆ ಒಂದೇ ಒಂದು ಪ್ರದಕ್ಷಿಣೆ ಮಾಡುವುದು. ನಡುರಾತ್ರಿಯಲ್ಲಿ ಆಶೌಚವಿರುವಾಗ, ಅಲಂಕಾರಾದಿಗಳನ್ನು ಮಾಡುತ್ತಿರುವಾಗ ಭಗವಂತನ ದರ್ಶನವನ್ನು ಮಾಡಿದರೆ ಹಿಂದೆ ಸಂಗ್ರಹವಾಗಿದ್ದ ಪುಣ್ಯಗಳೆಲ್ಲವೂ ನಾಶವಾಗುವುದು.

ಏಕಹಸ್ತಪ್ರಣಾಮಶ್ಚ ಏಕಾ ಚೈವ ಪ್ರದಕ್ಷಿಣಾ।
ಅಕಾಲದರ್ಶನಂ ವಿಷ್ಣೋಃ ಹಂತಿ ಪುಣ್ಯಂ ಪುರಾ ಕೃತಮ್।

ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ।
ಚತ್ವಾರಿ ತಸ್ಯ ವರ್ಧಂತೇ ಆಯುರ್ವಿದ್ಯಾಯಶೋ ಬಲಮ್॥

ಧರ್ಮರಾಜನು ಅಭಿವಾದನಕ್ಕೆ ಮಾದರಿಯಾಗಿದ್ದನು (ದ್ವಾನೆ) ಯುದ್ಧ ಪ್ರಾರಂಭಕ್ಕಿಂತ ಮೊದಲು ಪಿತಾಮಹರಾದ ಭೀಷ್ಮಾಚಾರ್ಯರು, ದ್ರೋಣ, ಕೃಪ, ಶಲ್ಯ ಇವರುಗಳನ್ನು ಅಭಿವಾದನ ಮಾಡಿ ಆಯುಷ್ಮಂತನಾಗು ವಿಜಯೀ ಭವ ಎಂದು ಆಶೀರ್ವಾದವನ್ನು ಪಡೆದು ವಿಜಯಿಯಾದನು, ಮಹಾಭಾರತ ಉಲ್ಲೇಖಿಸಿದೆ.

ನಮಸ್ಕಾರವೂ ಕೂಡ ದೈಹಿಕ ಯಜ್ಞವೆನಿಸಿದೆ. ಅಲ್ಲದೆ ಇತರ ಯಜ್ಞಗಳಿಗಿಂತಲೂ ಶ್ರೇಷ್ಠವಾಗಿದೆ. ಭಕ್ತಿಯಿಂದ ಮಾಡಿರುವ ಕೇವಲ ಒಂದು ನಮಸ್ಕಾರದಿಂದಲೇ ಪವಿತ್ರೀಕೃತಗಾತ್ರನಾಗಿ ಹರಿಯನ್ನು ಸೇರುವನು.

ನಮಸ್ಕಾರಃ ಸ್ಮೃತೋ ಯಜ್ಞಃ ಸರ್ವಯಜ್ಞೇಷು ಚೋತ್ತಮಃ।
ನಮಸ್ಕಾರೇಣ ಚೈಕೇನ ನರಃ ಪೂತೋ ಹರಿಂ ವ್ರಜೇತ್।

ಸ್ಕಾಂದ ಪುರಾಣದ ಪ್ರಕಾರ, ಯಾರು ಭೂಮಿಯಲ್ಲಿ ಮಂಡಿಯೂರಿ, ಭೂಮಿಗೆ ಶಿರಸ್ಸನ್ನು ಸ್ಪರ್ಶಿಸಿ, ಭಗವಂತನನ್ನು ನಮಿಸುವ ವ್ಯಕ್ತಿಯು ಅಶ್ವಮೇಧಯಾಗದ ಫಲವನ್ನು ಪಡೆಯುವನು.

ಭೂಮಿಮಾಪೀಡ್ಯ ಜಾನುಭ್ಯಾಂ ಶಿರ ಆರೋಪ್ಯ ವೈ ಭುವಿ।
ಪ್ರಣಮೇದ್ ಯೋ ಹಿ ದೇವೇಶಂ ಸೋಽಶ್ವಮೇಧ ಫಲಂಲಭೇತ್॥

ಅದೇ ಪುರಾಣವೇ ಸಾಷ್ಟಾಂಗ ಪ್ರಣಾಮ ಮಾಡುತ್ತಾ ನಮಸ್ಕರಿಸುವವನು ನೂರು ಯಾಗ ಮಾಡಿದ ಗತಿಕ್ಕಿಂತ ಉತ್ತಮ ಗತಿಯನ್ನು ಹೊಂದುವನು.

ಪ್ರಣಮ್ಯ ದಂಡವದ್ ಭೂಮೌ ನಮಸ್ಕಾರೇಣ ಯೋಽರ್ಚಯೇತ್।
ಸ ಯಾಂ ಗತಿಮಾಪ್ನೋತಿ ನ ತಾಂ ಕ್ರತುಶತೈರಪಿ॥

ಶತಕೋಟಿ ತೀರ್ಥಸ್ನಾನ, ನೂರುಕೋಟಿ ತೀರ್ಥವನ್ನು ದರ್ಶನದಿಂದ ಬಂದ ಪುಣ್ಯವು ನಾರಾಯಣನಿಗೆ ಭಕ್ತ್ಯಾದರ ಪೂರ್ವಕವಾಗಿ ಮಾಡುವ ನಮಸ್ಕಾರದ ಹದಿನಾರನೇ ಒಂದಂಶ ಪುಣ್ಯಕ್ಕೆ ಸಮವಾಗಲಾರದು.

ತೀರ್ಥಕೋಟಿ ಸಹಸ್ರಾಣಿ ತೀರ್ಥಕೋಟಿ ಶತಾನಿ ಚ।
ನಾರಾಯಣ ಪ್ರಣಾಮಸ್ಯ ಕಲಾಂ ನಾರ್ಹಂತಿ ಷೋಡಶೀಮ್॥

ಭಕ್ತಿಯ ಸ್ಥಾನ

ನಮಸ್ಕಾರವು ಭಕ್ತಿರಹಿತವಾದರೆ ನಿಷ್ಫಲವಾಗುತ್ತದೆ. ಭಜತೇ ಇತಿ ಭಕ್ತಿ. ಎಂಬ ನಿಷ್ಪತ್ತಿಯಂತೆ ಸೇವಿಸಲು ಯೋಗ್ಯವಾದದ್ದೆ ಭಕ್ತಿ. ಭಕ್ತಿಯು ಭಜಸೇವಾಯಾಂ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಭಕ್ತಿ ಎಂದರೆ ಸೇವೆ.

ಭಜ ಇತ್ಯೇಷ ವೈ ಧಾತುಃ ಸೇವಾಯಾಂ ಪರಿಕೀರ್ತಿತಃ।
ತಸ್ಮಾತ್ ಸೇವಾ ಬುಧೈಃ ಪ್ರೋಕ್ತಾ ಭಕ್ತಿಃ ಸಾಧನಭೂಯಸೀ॥
– ಗರುಡ ಪುರಾಣ

ಭಗವಂತನಲ್ಲಿ ಮಾಡುವ ಅತ್ಯುತ್ತಮ ಸ್ನೇಹವೇ ಭಕ್ತಿ "ಸಾ ಪರಾ **ಅನುರಕ್ತಿಃ ಈಶ್ವರೇ**"

ಭಕ್ತಿಯು ದೃಢವಾಗಲು ಭಗವಂತನ ಮಹಾತ್ಮ್ಯಜ್ಞಾನವೂ ಆವಶ್ಯಕವಾಗಿದೆ. "ಮಹಾತ್ಮಜ್ಞಾನ ಪೂರ್ವಕಃ ಸುದೃಢಃ ಸ್ನೇಹಃ ಭಕ್ತಿಃ"

ಇಂಥಹ ಭಕ್ತಿಯನ್ನು ದೇವತೆ ಹಾಗು ಗುರುಗಳಲ್ಲಿ ಆಚರಿಸಬೇಕು. ಇಂತಹ ಭಕ್ತಿಯಲ್ಲಿ ಎಂಟು ವಿಧವಿದ್ದು ಈ ಎಂಟು ವಿಧವಾದ ಭಕ್ತಿಯನ್ನು ಭಗವಂತನಲ್ಲಿ ಹಾಗು ವೇದಾದಿ ಮಂತ್ರ ಉಪದೇಶಿಸಿದ ಗುರುಗಳಲ್ಲಿ ಮಾಡಬೇಕು.

ದೇವತಾಯಾಶ್ಚ ಮಂತ್ರೇ ಚ ತಥಾ ಮಂತ್ರಪ್ರದೇ ಗುರೌ।
ಭಕ್ತಿರಷ್ಟವಿಧಾ ಯಸ್ಯ ತಸ್ಯ ವಿಷ್ಣುಃ ಪ್ರಸೀದತಿ॥– ಗೌತಮೀಯ ತಂತ್ರ

ಎಂಟು ವಿಧ ಭಕ್ತಿಯಾದರೂ ೧. ವಿಷ್ಣು ಭಕ್ತರಲ್ಲಿ ವಾತ್ಸಲ್ಯ ೨. ಅವರು ಹೇಳಿದ ಪೂಜೆಯನ್ನು ಅನುಮೋದಿಸುವುದು ೩. ನಿತ್ಯ ಪೂಜಿಸುವುದು, ೪. ಗೌರವಭಾವದಿಂದ ಪೂಜಿಸುವುದು, ೫. ಪೂಜೆಯಲ್ಲಿ ದಂಭಾಚಾರವಿಲ್ಲದಿರುವುದು, ೬. ಅದರ ಮಹಾತ್ಮ್ಯಶ್ರವಣದಲ್ಲಿ ಆಸಕ್ತಿ, ೭. ಹಾಗೆ ಪೂಜಾದಿಗಳನ್ನು ಮಾಡುವಾಗ ರೋಮಾಂಚವಾಗುವುದು. ನಿತ್ಯವು ಅವರು ಮಾಡಿರುವ ಅನುಗ್ರಹವನ್ನು ಸ್ಮರಿಸುವುದು.

ತದ್ಭಕ್ತಜನವಾತ್ಸಲ್ಯಂ ಪೂಜಾಯಾಶ್ಚಾನುಮೋದನಮ್।
ಸುಮನಾ ಅರ್ಚಯೇನ್ ನಿತ್ಯಂ ತದರ್ಥೇ ದಂಭವರ್ಜನಮ್।

ತತ್ಕಥಾಶ್ರವಣೇ ರಾಗಃ ತದರ್ಥೇ ಚಾಂಗ ವಿಕ್ರಮಾ।

ತದನುಸ್ಮರಣಂ ನಿತ್ಯಂ ಯಸ್ಮಿನ್ ಮ್ಲೇಚ್ಛೋಽಪಿ ವರ್ತತೇ॥

ಇದಲ್ಲದೆ ಭಗವಂತನಿಗೆ ಸಮಸ್ತಜಗತ್ತಿಗೂ ರಕ್ಷಕವೆಂಬ ಭಾವನೆ ಹೊಂದಿರಬೇಕು. ಅವನಿಗಿಂತ ಪತಿ ಬೇರೆಯವರಿಲ್ಲ ಎಂಬ ಭಾವನೆಯನ್ನು ಹೊಂದಿರಬೇಕು. ಅವನಿಗೆ ಸಮನಾಗಲಿ ಅಧಿಕವಾಗಲಿ ಇಲ್ಲವೇ ಇಲ್ಲ ಎಂಬ ಭಾವನೆಯಿಂದ ನಾನು ಇಂಥಹ ಭಗವಂತನಿಗೆ ಮಣಿದಿರುವೆನು. ಭಗವಂತನು ಭಕ್ತ ಪರಾಧೀನನು, ನನ್ನನ್ನು ರಕ್ಷಿಸಿಯೇ ತೀರುತ್ತಾನೆ ಎಂಬ ಭಾವನೆ ಭಕ್ತಿಗೆ ಪುಷ್ಟಿ ನೀಡುತ್ತದೆ. ಹೀಗೆ ಭಕ್ತಿಸಹಿತವಾಗಿ ನಮಸ್ಕಾರ ಪ್ರದಕ್ಷಿಣೆಯನ್ನು ಮಾಡಬೇಕು.

ನಮಸ್ಕರಿಸುವಾಗ ಭಗವಂತನ ಮಹಿಮಾದ್ಯೋತಕವಾದ ಸ್ತುತಿಗಳಿಂದ ನಮಸ್ಕರಿಸಬೇಕು. ವಿಷ್ಣುದೇವಾಲಯಗಳಲ್ಲಿ ಹಗಲು ಹಾಗು ಸಂಜೆ ಎರಡು ಹೊತ್ತುಗಳಲ್ಲೂ ನಮಸ್ಕರಿಸಬೇಕು ಇದರಿಂದ ಅಶ್ವಮೇಧ ಫಲವು.

ವಿಷ್ಣೋರಾಯತನೇ ನಿತ್ಯಂ ಸಾಯಂ ಪ್ರಾತರ್ದಿನೇ ದಿನೇ।

ಪ್ರದಕ್ಷಿಣಂ ಸ್ವಯಂ ಕುರ್ಯಾತ್ ಅಶ್ವಮೇಧ ಫಲಂ ಭವೇತ್॥

ನಮಸ್ಕರಿಸುವಾಗ ಮೊದಲು ಏನನ್ನು ಮಾತನಾಡದೆ ಧ್ಯಾನ ಮಾಡುತ್ತಾ ಪ್ರತಿದಿಕ್ಕಿನಲ್ಲಿಯೂ ನಮಸ್ಕರಿಸಬೇಕು. ಸ್ತ್ರೀಯರ ಜೊತೆಗೆ ಮಾತನಾಡುತ್ತಾ ಪ್ರದಕ್ಷಿಣೆ ಹಾಕಬಾರದು, ಸ್ತ್ರೀಯರೂ ಕೂಡ ಪುರುಷ ಹಾಗು ಸ್ತ್ರೀಯರೊಂದಿಗೆ ಹರಟುತ್ತಾ ನಗುತ್ತಾ ಪ್ರದಕ್ಷಿಣೆ ಹಾಕದೆ ಭಗವಂತನ ಧ್ಯಾನಮಾಡುತ್ತಾ ನಿಧಾನವಾಗಿ ಪ್ರದಕ್ಷಿಣೆ ಬರಬೇಕು.

ಕುರ್ಯಾತ್ ಸ್ತ್ರೀಷು ಸಲ್ಲಾಪಂ ನ ಚೋಚ್ಚೈಃ ಪ್ರಲಪೇತ್ ಸದಾ।

ವಿಷ್ಣುವಿಗೆ ಪ್ರದಕ್ಷಿಣೆ

ಮೂರು ಪ್ರದಕ್ಷಿಣೆ, ನಮಸ್ಕಾರ ಹಾಕಿ ಪುನಃ ಒಂದು ಪ್ರದಕ್ಷಿಣೆ ಹಾಕಿದರೆ ವಿಷ್ಣುಲೋಕ ಖಂಡಿತ ಸಿಗುತ್ತದೆ.

ಪ್ರದಕ್ಷಿಣತ್ರಯಂ ಕೃತ್ವಾ ಚತುರ್ದಿಕ್ಷು ಪ್ರಣಮ್ಯ ಚ।

ಭಗವಂತನಿಗೆ ಒಂದು ಪ್ರದಕ್ಷಿಣೆ ಹಾಗು ಒಂದು ನಮಸ್ಕಾರವನ್ನು ಹಾಕಿದರೂ ಪೃಥಿವೀ ಪ್ರದಕ್ಷಿಣೆಯ ಫಲವು ಲಭಿಸುತ್ತದೆ.

ಭಕ್ತಿಯಿಂದ ನಮಸ್ಕಾರ-ಪ್ರದಕ್ಷಿಣೆ ಮಾಡಿದ ಪುರುಷನಿಗೆ ಅಗ್ನ್ಯಾಧಾನ ಮಾಡಿದ ಫಲವು ಲಭಿಸುತ್ತದೆ. ಅಲ್ಲದೆ ಭಕ್ತಿಯಿಂದ ಕೂಡಿದ ಪ್ರದಕ್ಷಿಣೆಯು ಹಂಸಯುಕ್ತ ವಿಮಾನದಿಂದ ವಿಷ್ಣುಲೋಕಕ್ಕೆ ಕೊಂಡೊಯ್ಯುತ್ತದೆ.

ಭಗವಂತನಿಗೆ ನಮಿಸದವನು ಶವಸದೃಶ

ನಮ್ಮ ಕರ್ಮಗಳಿಗೂ ಪ್ರೇರಕನಾದ, ಅನಿಮಿತ್ತ ಬಂಧುವಾದ ಭಗವಂತನಿಗೆ ದಿವಸಕ್ಕೆ ಒಂದು ಬಾರಿಯಾದರೂ ನಮಿಸದವನು ಶವಪ್ರಾಯವೆನಿಸಿರುವನು. ಅವನ ಜೊತೆ ಮಾತನಾಡಬಾರದು. ಅವನನ್ನು ಎಳೆದು ತನ್ನಿ ಎಂದು ಯಮಧರ್ಮನು ಆಜ್ಞಾಪಿಸಿರುವನು.

ಸಕೃದ್ವಾ ನ ನಮೇದ್ ಯಸ್ತು ವಿಷ್ಣವೇ ಶರ್ಮಕಾರಿಣೇ।
"ಶವಪ್ರಾಯ ನೋ ನಮತಿ ಏಕದಾಪಿ ತಾನಾನಯಧ್ವಂ" ಎಂದು

ಭಕ್ತನು ಭಗವಂತನಿಗೆ ದಂಡಪ್ರಣಾಮ ಮಾಡಿದನೆಂದರೆ ಅವನು ಪುನಃ ಎದ್ದಾಗ ಅವನ ಜೊತೆಗೆ ಪಾಪವು ಏಳುವುದಿಲ್ಲ.

ವಿಷ್ಣೋಃ ದಂಡಪ್ರಣಾಮಾರ್ಥಂ ಭಕ್ತೇನ ಪತತಾ ಭುವಿ।
ಪಾತಿತಂ ಪಾತಕಂ ಕೃತ್ಸ್ನಂ ನೋತ್ತಿಷ್ಠತಿ ಪುನಃ ಸಹ॥

ಅಭಿವಾದನ ಮಾಡಿದಾಗ ಆಶೀರ್ವಾದವನ್ನು ಮಾಡದವನು ಶೂದ್ರನಂತೆ ತಿಳಿದು ಪುನಃ ಅವನಿಗೆ, ಅಭಿವಾದನ ಮಾಡಬಾರದು.

ಯೋ ನ ವೇತ್ತಿ ಅಭಿವಾದಸ್ಯ ವಿಪ್ರಃ ಪ್ರತ್ಯಭಿವಾದನಮ್।
ನಾಭಿವಾದ್ಯಸ್ಸ ವಿದುಷಾ ಯಥಾಶೂದ್ರಸ್ತಥೈವ ಸಃ॥

ಅಭಿವಾದನವನ್ನು ಮಾಡಿದಾಗ ಪ್ರತ್ಯಭಿವಾದನವನ್ನು ಗೊತ್ತಿದ್ದರೂ ಮಾಡಿದ್ದರೆ ಸ್ಮಶಾನದಲ್ಲಿ ವೃಕ್ಷವಾಗಿ ಜನಿಸುವನು.

ಅಭಿವಾದೇ ಕೃತೇ ಯಸ್ತು ತಂ ವಿಪ್ರಂ ನಾಭಿವಾದಯೇತ್।
ಶ್ಮಶಾನೇ ಜಾಯತೇ ವೃಕ್ಷೋ ಕಂಕಗೃಧ್ರೋಪಸೇವಿತಃ॥

13. ನಮಸ್ಕಾರ ಮಾಡುವ ಕ್ರಮ

ನಮಸ್ಕಾರವನ್ನು ಕ್ರಮಬದ್ಧವಾಗಿ ನಿಯಮಾದಿಂದ ಮಾಡಬೇಕು. ಮೊದಲು ಎಡಗಾಲಿನ ಮಂಡಿಯನ್ನೂರಬೇಕು. ನಂತರ ಎರಡು ಕೈಗಳಿಂದಲೂ ಭೂಮಿಯನ್ನು ಸ್ಪರ್ಶಿಸಿ ಬಲಗಾಲಿನ ಮಂಡಿಯನ್ನು ಊರಿ, ತನ್ನ ಹಣೆಯನ್ನು ಭೂಮಿಗೆ ತಗುಲಿಸಬೇಕು. ನಂತರ ದಂಡಾಕಾರವಾಗಿ ಭೂಮಿಯಲ್ಲಿ ದೇಹವನ್ನು ಬೀಳಿಸಿ ಆ ತಲೆಯಲ್ಲಿ ಕೈಗಳನ್ನು ಜೋಡಿಸಿ ಅಂಜಲಿ ಮುದ್ರೆಯಿಂದ ನಮಸ್ಕರಿಸಬೇಕು. ಈ ಸಮಯದಲ್ಲಿ ಎರಡೂ ಕೈಗಳೂ ವ್ಯತ್ಕ್ರಮವಾಗಿರಬೇಕು. [X]

ಸವ್ಯಜಾನುಂ ನಿಧಾಯಾದೌ ಕರಾಭ್ಯಾಂ ಭುವಂ ಸ್ಪೃಶನ್।
ಜಾನುನಾ ದಕ್ಷಿಣೇನಾಪಿ ಲಲಾಟೇನ ಭುವಂ ಸ್ಪೃಶೇತ್॥
ಪತಿತ್ವಾ ದಂಡವತ್ ಪಶ್ಚಾತ್ ಮೂರ್ಧ್ನಿ ಬದ್ಧಾಂಜಲೀ ತಥಾ।
ಉತ್ತಿಷ್ಠೇಚ್ಚ ಪುನರ್ನತ್ವಾ ಜಾನುಭ್ಯಾಂ, ಚ ಸ್ತುತಿಂ ಪಠನ್॥
ವಿಷ್ಣುಧ್ಯಾನೇನ ಸಂಯುಕ್ತೋ ನಮಸ್ಕಾರ ಇತೀರಿತಃ। **- ವರಾಹ**

ನಮಿಸಿದಾಗ

ಚಂಡಾಲನು ''ನಿನಗೆ ಸುರೆಯು ಲಭಿಸಲಿ'' ಎಂದಾದರೂ ಆಶೀರ್ವದಿಸಬೇಕೇ ವಿನಹ ಸುಮ್ಮನೆ ಇರಬಾರದು.

ತಸ್ಮಾತ್ ಪೂರ್ವಾಭಿಭಾಷೀ ಸ್ಯಾಚ್ಚಂಡಾಲಸ್ಯಾಪಿ ಧರ್ಮವಿತ್।
ಸುರಾಂ ಪಿಬೇತಿ ವಕ್ತವ್ಯಂ ಏವಂ ಧರ್ಮೋ ನ ಹೀಯತೇ॥

ಗುರು ಪತ್ನಿಯರ ಅಭಿವಾದನದ ರೀತಿ

ಗುರು ಪತ್ನಿಯು ಯುವತಿ ಆಗಿದ್ದರೆ ಪಾದಗ್ರಹಣವನ್ನು ಮಾಡದೆ ಪಾದದ ಮುಂದಿರುವ ಭೂಮಿಯನ್ನು ಮಾತ್ರ ಮುಟ್ಟಬೇಕು. ನಾಮ ಗೋತ್ರವನ್ನು ಉಚ್ಚರಿಸಬೇಕು. ಆದರೆ ಕಾಲನ್ನು ಮುಟ್ಟಬಾರದು.

ಕಾಮಂ ತು ಗುರುಪತ್ನೀನಾಂ ಯುವತೀನಾಂ ಯುವಾ ಭುವಿ।
ವಿಧಿವದ್ ವಂದನಂ ಕುರ್ಯಾತ್ ಅಸಾವಹಮಿತಿ ಬ್ರುವನ್॥

ನಮಸ್ಕಾರಕ್ಕೆ ಅಯೋಗ್ಯ ವ್ಯಕ್ತಿಗಳು

ಪಾಖಂಡಿ (ವೇದದೂಷಕ), ಪತಿತ, ಮಹಾಪಾತಕಿ, ಮೂರ್ಖ, ನಾಸ್ತಿಕ, ಕೃತಘ್ನ (ಉಪಕಾರ ಮರೆತವನು) ಸೂತಕವಿರುವವನು ಗೊತ್ತಿರದ ವ್ಯಕ್ತಿ, ತಪಸ್ಸು ಮಾಡುತ್ತಿರುವ ಯೋಗಿ, ವಯಸ್ಸಿನಲ್ಲಿ ಚಿಕ್ಕವನು ಇವರು ನಮಸ್ಕಾರಕ್ಕೆ ಅನರ್ಹರು.

ಪಾಖಂಡಂ ಪತಿತಂ ವ್ರಾತ್ಯಂ ಮಹಾಪಾತಕಿನಂ ಶಠಮ್।
ನಾಸ್ತಿಕಂ ಕೃತಘ್ನಂ ಚ ನಾಭಿವಾದಯೇತ್ ಕಥಂಚನ॥
ಯೋಗಿನಂ ಚ ತಪಃಸಕ್ತಂ ಕನಿಷ್ಠಂ ನಾಭಿವಾದಯೇತ್॥

14. ಸ್ತ್ರೀಯರಲ್ಲಿ ನಮಸ್ಕಾರ ಅನರ್ಹರು

ರಜಸ್ವಲೆಯನ್ನು, ಸೂತಕವುಳ್ಳವಳು, ಗಂಡನನ್ನು ಕೊಂದವಳು, ಗರ್ಭಪಾತ ಮಾಡಿಸಿದವಳು, ಇವರನ್ನು ನಮಸ್ಕರಿಸಿದರೆ ಒಂದು ದಿವಸ ಉಪವಾಸ ಮಾಡಿ ಶುದ್ಧನಾಗಬೇಕು.

ಉದಕ್ಯಾಂ ಸೂತಿಕಾಂ ನಾರೀಂ ಭರ್ತೃಘ್ನೀಂ ಗರ್ಭಪಾತನೀಮ್।
ಅಭಿವಾದ್ಯ ದ್ವಿಜೋ ಮೋಹಾತ್ ಅಹೋರಾತ್ರೇಣ ಶುಧ್ಯತಿ॥

ತಾಯಿಗೆ ಮಾಡಲೇಬೇಕಾದ ನಮಸ್ಕಾರ

ಉಪಾಧ್ಯಾಯನಿಗಿಂತಲೂ ಹತ್ತುಪಟ್ಟು ಆಚಾರ್ಯನು ಅಧಿಕನು. ಆಚಾರ್ಯನಿಗಿಂತಲೂ ನೂರುಪಟ್ಟು ತಂದೆಯು ಅಧಿಕನು, ತಂದೆಗಿಂತಲೂ ಸಹಸ್ರಪಟ್ಟು ಅಧಿಕಳು ತಾಯಿ. ಆದ್ದರಿಂದ ತಾಯಿಗೆ ಎಂದೂ ಅವಮಾನ ಮಾಡಬಾರದು.

ಉಪಾಧ್ಯಾಯಾತ್ ದಶಾಚಾರ್ಯಾ ಆಚಾರ್ಯಾಣಾಂ ಶತಂ ಪಿತಾ।
ಸಹಸ್ರಂ ತು ಪಿತುರ್ಮಾತಾ ಗೌರವೇಣಾತಿರಿಚ್ಯತೇ।

ಆದ್ದರಿಂದಲೇ ಸನ್ಯಾಸಿಯು ಆಶ್ರಮದಿಂದ ಜ್ಯೇಷ್ಠನಾದರೂ ತಾಯಿಯನ್ನು ಸನ್ಯಾಸಿಯೂ ನಮಸ್ಕರಿಸಬೇಕು.

ದೇವಾಲಯಗಳಲ್ಲಿ ಸಿಕ್ಕ ಕಡೆ ನಮಸ್ಕರಿಸುವುದು ಅಯುಕ್ತವಾಗಿದೆ. ದೇವರ ಬಲಭಾಗದಲ್ಲಿಯೇ ನಮಸ್ಕರಿಸಬೇಕು. ಹಿಂದುಗಡೆ, ದೇವರ ಎಡಭಾಗದಲ್ಲಿ ದೇವರ ಸಮೀಪದಲ್ಲಿ, ಗರ್ಭಗೃಹದಲ್ಲಿ ಜಪ ಹೋಮ, ನಮಸ್ಕಾರಗಳನ್ನು ಮಾಡಬಾರದು.

ಅಗ್ರೇ ಪೃಷ್ಠೇ, ವಾಮಭಾಗೇ ಸಮೀಪೇ ಗರ್ಭಮಂದಿರೇ।
ಜಪಹೋಮ ನಮಸ್ಕಾರಾನ್ ನ ಕುರ್ಯಾತ್ ಕೇಶವಾಲಯೇ॥

ದೇವರ ಮುಂದೆಯೆ ನಮಸ್ಕರಿಸಿದರೆ ದೇವರ ಮುಂದೆ ಇರುವ ಗರುಡ, ನಂದಿ, ಮೂಷಕ ಇವುಗಳಿಗೆ ಪಾದ ತೋರಿಸಿದಂತಾಗಿ ಪಾಪ ಘಟಿಸುತ್ತದೆ. ದೊಡ್ಡವರ ತಿರಸ್ಕಾರ ಮರಣಕ್ಕೆ ನಾಂದಿ (ಆಹ್ವಾನ)

"ಅಗ್ರೇ ಮೃತ್ಯುಂ ಅವಾಪ್ನೋತಿ"

ಇದಲ್ಲದೆ ದೇವರ ಮುಂದೆಯೇ ಬಲಿಪೀಠ, ಧ್ವಜಸ್ತಂಭ ಗಳಿರುವುದರಿಂದ ಅಲ್ಲಿ ಸನ್ನಿಹಿತರಾಗಿರುವ ದೇವತೆಗಳಿಗೆ ಕಾಲನ್ನು ತೋರಿಸಿದಂತಾಗುತ್ತದೆ.

ದೇವರ ಪೃಷ್ಠಭಾಗದಲ್ಲಿ ನಮಸ್ಕರಿಸಿದಾಗ ಮನಸ್ಸಿನಲ್ಲಿ ಪೃಷ್ಠದ ಸ್ಮರಣೆ ಉಂಟಾಗಿ ಭಕ್ತಿಯು ಲೋಪವಾಗುವ ಸಂಭವವು ಇಲ್ಲದಿಲ್ಲ. ಹೀಗೆ ವಿರುದ್ಧ ಭಾವನೆ ಬರುವುದು ಸಹಜವಾದ್ದರಿಂದ ಮತ್ತು ದೇವರ ಮುಂಭಾಗದಲ್ಲಿರುವಂತೆಯೆ ಸಾಮಾನ್ಯವಾಗಿ ದೇವರ ಹಿಂದೆಯೂ ಪರಿವಾರ ದೇವತೆಗಳು ಇರುವರು. ಅವರಿಗೆ ಪಾದವನ್ನು ತೋರಿಸಿದಂತಾಗುವುದು ಆದ್ದರಿಂದಲೇ ಹಿಂದೆ ನಮಸ್ಕರಿಸಿದರೆ ಸಂಪತ್ತಿನ ನಾಶವಾಗಿ ಅರ್ಥಪಾತವಾಗುತ್ತದೆ ಎಂದು ಶಾಸ್ತ್ರ ಎಚ್ಚರಿಸಿದೆ.

"ಪೃಷ್ಠೇ ತು ಅಪಜಯಃ ಸ್ಯಾತ್"।

ದೇವರ ಎಡಭಾಗದಲ್ಲಿಯೂ ನಮಸ್ಕರಿಸಬಾರದು. ಸಂಪತ್ತಿನ ನಾಶವಾಗುವ ಸಂಭವವಿರುತ್ತದೆ.

"ವಾಮಭಾಗೇ ಭವೇನ್ನಾಶಃ"

ದೇವರ ಎಡಭಾಗದಲ್ಲಿ ವಾಯುವಿನಿಂದ ಅಭಿಮನ್ಯವಾದ ಗದೆ ಇರುತ್ತದೆ. ಶತ್ರುಗಳ ನಾಶಕ್ಕಾಗಿ ಇರುವ ಆಯುಧಕ್ಕೆ ತಲೆಯೂ ಸಿಗಬಾರದು. ನಮ್ಮ ತಲೆಯೂ ಹೋದೀತು. ಬಲಭಾಗದ ಪ್ರದಕ್ಷಿಣೆ ಪ್ರಶಸ್ತ ಎಂದು ತಿಳಿಸಲು ಹೊರಟ ಮಾತುಗಳಿವು. ಈ ವಿಚಾರವನ್ನೆ

"ದಕ್ಷಿಣೇ ಸರ್ವಕಾಮದಃ" ಎನ್ನಲಾಗಿದೆ.

ಬಲಭಾಗದಲ್ಲಿ ಸರ್ವ ಇಷ್ಟಾರ್ಥಗಳು ನೆರವೇರುವುವು. ಎಂದರ್ಥ. ಕೆಲವು ಸಂದರ್ಭಗಳಲ್ಲಿ ದೇವರ ಬಲಭಾಗದಲ್ಲಿ ಎಣ್ಣೆ ನೀರು, ಕಸ ಮುಂತಾದುವು ಇರಬಹುದು. ಆದರೂ ಬಲಭಾಗದಲ್ಲೆ ನಮ್ಮ ಇಷ್ಟಸಿದ್ಧಿಗಾಗಿ ನಮಸ್ಕರಿಸಬೇಕು. ವಸ್ತುತಃ ವಿಷ್ಣುವಿನ ಮೂರ್ತಿ ನೋಡಿದ ಕೂಡಲೇ ಸ್ಥಾನದ ಬಗ್ಗೆ ವಿಚಾರ ವಿಮರ್ಶೆ ಮಾಡದೇನೆ ನಮಸ್ಕರಿಸಬೇಕೆಂದಿದೆ.

ಸ್ಥಾನಾಪೇಕ್ಷಾ ನ ಕರ್ತವ್ಯಾ ದೃಷ್ಟ್ವಾರ್ಚಾಂ ದ್ವಿಜಸತ್ತಮಾಃ॥

ಇದು ನಿಷ್ಕಾಮನಾ ವಿಷಯವಾಗಿದೆ. ಎಂದರೆ ನಿಷ್ಕಾಮನೆಯಿಂದ ನಮಸ್ಕರಿಸುವ ವ್ಯಕ್ತಿಗೆ ಸ್ಥಾನಾಪೇಕ್ಷಾ ಇರುವುದಿಲ್ಲ. ಭಕ್ತಿಯಿಂದ ಭಗವಂತನ ಪ್ರೀತಿಗೋಸುಗ ಮಾಡುವ ನಮಸ್ಕಾರ ಪ್ರೀತಿಯನ್ನುಂಟುಮಾಡುವುದು. ಸಂತಾನಾಪೇಕ್ಷೆ, ಮನೆ, ಸಂಪತ್ತು ಮುಂತಾದ ಕಾಮನೆಗಳಿಗಾಗಿ ನಮಸ್ಕರಿಸುವಾಗ ವಿಧಿಬದ್ಧವಾಗಿ ನಮಸ್ಕರಿಸಿದರೆ ಫಲಾಧಿಕ್ಯ ಮತ್ತು ಶೀಘ್ರಫಲ ದೊರೆಯುತ್ತದೆ.

15. ಯಾವ ದೇವರಿಗೆ ಎಷ್ಟೆಷ್ಟು ನಮಸ್ಕಾರಗಳು

ಪ್ರಣಾಮವನ್ನು ದಂಡಾಕಾರವಾಗಿಯೆ ಮಾಡಬೇಕು. ನಲವತ್ತೆಂಟು ಮುವ್ವತ್ತಾರು, ಇಪ್ಪತ್ತನಾಲ್ಕು, ಹನ್ನೆರಡು ಅಥವಾ ಐದಕ್ಕೆ ಕಡಮೆ ಇಲ್ಲದಂತೆ ಎಷ್ಟಾದರೂ ಭಗವಂತನಿಗೆ ನಮಸ್ಕರಿಸಬಹುದು. ಎಂದಿದೆ ವರಾಹ ಪುರಾಣ.

ಪ್ರಣಾಮಾನ್ ದಂಡವತ್ ಕುರ್ಯಾತ್ ಚತ್ವಾರಿಂಶತ್ತಥಾಷ್ಟ ಚ।

ಷಡ್‌ತ್ರಿಂಶದ್ ವಾ ಚತುರ್ವಿಂಶತ್ ಷೋಡಶ ದ್ವಾದಶಾಪಿ ವಾ।

ತ್ರೀಣಿ ಪಂಚಾಪಿ ಸಪ್ತಾಪಿ ನವ ದ್ವಾದಶ ಸಂಖ್ಯಯಾ।

ಈ ಮೇಲಿನ ಸಂಖ್ಯೆಗಳ ಆಧಿಕ್ಯವು ಆಯಾಯ ನಮಸ್ಕಾರದ ಸಂಖ್ಯೆಗೆ ಪ್ರಾಧಾನ್ಯ ನೀಡಲಾಗಿದೆ. ಎಂದೇ ಅವರೋಹಣ ಕ್ರಮದಲ್ಲಿ (ಎಂದರೆ ಆಧಿಕ್ಯದಿಂದ ನ್ಯೂನ ಸಂಖ್ಯೆಗೆ ಬರುವುದು) ತಿಳಿಸಲಾಗಿದೆ.

ನಲವತ್ತೆಂಟು ಭಗವಂತನ ರೂಪಗಳಿಗೆ ನಲವತ್ತೆಂಟು ನಮಸ್ಕಾರ, ವಿಹಿತವಾಗಿದೆ. ಇದು ಕೇಶವಾದಿ ಇಪ್ಪತ್ತನಾಲ್ಕು ರೂಪಗಳ ಚಿಂತನೆಗೆ ಅನುಕೂಲವಾಗಿದ್ದು ಆ ರೂಪಗಳ ಅನುಗ್ರಹ ಸಂಪಾದಿಸಲು ಸಾಧನವಾಗಿವೆ.

ನಲವತ್ತೆಂಟು ರೂಪಗಳು

ಕೇಶವಾದಿ ೨೪ ರೂಪಗಳನ್ನು ಅನುಲೋಮವಾಗಿ ಹಾಗೂ ವಿಲೋಮವಾಗಿ ಉಚ್ಚರಿಸಿದಾಗಿ ಕೇಶವ-ಶ್ರೀಕೃಷ್ಣ, ನಾರಾಯಣ-ಶ್ರೀಹರಿ, ಮಾಧವ-ಉಪೇಂದ್ರ ಹೀಗೆ ನಲವತ್ತೆಂಟು ರೂಪಗಳು ಚಿಂತನೆ ಹಾಗೂ ಅವುಗಳಿಗೆ ನಮಸ್ಕರಿಸಿದಂತಾಗುತ್ತದೆ ಆದ್ದರಿಂದ ಈ ನಮಸ್ಕಾರವು ಪ್ರಧಾನವಾದದ್ದು.

ಇಪ್ಪತ್ತನಾಲ್ಕು ನಮಸ್ಕಾರಗಳು ಕೇಶವಾದಿ ಚತುರ್ವಿಂಶತಿ ರೂಪಗಳ ಅನುಗ್ರಹ ಸಂಪಾದಿಸಲು ಸಾಧನವಾಗಿದೆ.

ಹನ್ನೆರಡು ರೂಪಗಳಾದರೂ ಕೇಶವಾದಿ ಹನ್ನೆರಡು ರೂಪಗಳನ್ನು ಹದಿನಾರು ನಮಸ್ಕಾರದಲ್ಲಿ ಕೇಶವಾದಿ ಹನ್ನೆರಡು ಮತ್ತು ನಾಲ್ಕು ವ್ಯಾಹೃತಿ ಪ್ರತಿಪಾದ್ಯ ನಾಲ್ಕು ರೂಪಗಳು ಸೇರುತ್ತವೆ.

ಹೀಗೆ ಹತ್ತು, ಐದು, ನಾಲ್ಕು ನಮಸ್ಕಾರಗಳೂ ಸೇರಿವೆ. ಹತ್ತು ನಮಸ್ಕಾರಗಳು ದಶಾವತಾರದ ಅನುಗ್ರಹ ಸಂಪಾದನೆಗೆ ಕಾರಣವಾಗಿದೆ. ಐದು ಜ್ಞಾನೇಂದ್ರಿಯಗಳೂ, ಐದು ಕರ್ಮೇಂದ್ರಿಯಗಳಿಗೆ ನಿಯಾಮಕವಾದ ಮತ್ಸ್ಯಾದಿ ಹತ್ತು ರೂಪಗಳು, ಹತ್ತು ಇಂದ್ರಿಯಗಳಿಂದ ಮಾಡಿದ ಪಾಪಗಳನ್ನು ಪರಿಹರಿಸಿ ಸುಖವನ್ನು ನೀಡುವುವು. **(ಶಂಖ-ಸುಖಂ, ದದಾತಿ ದಶ).**

ಅನ್ಯದೇವತೆಗಳಿಗೆ ನಮಸ್ಕಾರ

ವಿನಾಯಕನು ಭಗವಂತನ ಜ್ಞಾನಿಯಾಗಿರುವನು, ಭಗವಂತನ ವಿಶ್ವಂಭರ ಮೂರ್ತಿಯನ್ನು ಧ್ಯಾನಿಸಿ ಗಜವಕ್ತ್ರನಾಗಿರುವನು. ಇವನಿಗೆ ನಮಸ್ಕಾರ

ಮಾಡುವಾಗ ಒಂದಕ್ಕೆ ಕಡಿಮೆ ಇಲ್ಲದಂತೆ ಮಾಡಬೇಕು. ಅಂತರ್ಯಾಮಿ ವಿವಕ್ಷೆ ಇದ್ದಾಗ್ಗೆ ಎಷ್ಟು ಬೇಕಾದರೂ ಹಾಕಬಹುದು.

ಸೂರ್ಯನಿಗೆ ನಮಸ್ಕರಿಸುವಾಗ ಎರಡಕ್ಕೆ ಕಡಿಮೆ ಇಲ್ಲದೆ ಏಳಕ್ಕೆ ಅಧಿಕವಾಗದಂತೆ ನಮಸ್ಕರಿಸಬೇಕು. ಸೂರ್ಯನಾರಾಯಣನಿಗಾದರೆ ಸಂಖ್ಯೆಯ ನಿಯಮವಿಲ್ಲ, ಶಂಕರನಿಗೆ ಅರ್ಧಪ್ರದಕ್ಷಿಣೆ ಮಾತ್ರ ವಿಹಿತವಾಗಿದೆ. ಶಿವಲಿಂಗದ ಮೇಲೆ ಸಾಲಿಗ್ರಾಮವಿದ್ದರೆ ವಿಷ್ಣುವಿಗೆ ವಿಧಿಸಿದಂತೆ ಮೂರಕ್ಕೆ ಕಡಿಮೆ ಇಲ್ಲದಂತೆ ನಮಸ್ಕರಿಸಬೇಕು.

ನಾರಾಯಣನಿಗೆ ನಾಲ್ಕು ನಮಸ್ಕಾರ ವಿಹಿತವಾಗಿದೆ. ಇದೂ ಪೂಜಾ ನಂತರದಲ್ಲಿ ನಾಲ್ಕು ನಮಸ್ಕಾರಗಳಿಗೆ ಕಡಿಮೆ ಇಲ್ಲದಂತೆ ಎಷ್ಟು ಬೇಕಾದರೂ ಹಾಕಬಹುದು. ದುರ್ಗೆಗೆ ಐದು ನಮಸ್ಕಾರಗಳು ಸ್ಕಂಧನು ಷಷ್ಠೀತಿಥಿಗೆ ದೇವತೆಯಾದ್ದರಿಂದ ಹಾಗೂ ಷಣ್ಮುಖನಾದ್ದರಿಂದಲೂ ಆರು ನಮಸ್ಕಾರ ಅಶ್ವತ್ಥಕ್ಕೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡುವಾಗ ಏಳಕ್ಕೆ ಕಡಿಮೆಯಾದಂತೆ ಮಾಡಬೇಕು.

ವಿನಾಯಕನಿಗೆ ಒಂದು ನಮಸ್ಕಾರ
ಸೂರ್ಯದೇವನಿಗೆ ಎರಡು ನಮಸ್ಕಾರ
ಶಂಕರನಿಗೆ ಮೂರು ನಮಸ್ಕಾರ
ನಾರಾಯಣನಿಗೆ ನಾಲ್ಕು ನಮಸ್ಕಾರ
ದುರ್ಗಾದೇವಿಗೆ ಐದು ನಮಸ್ಕಾರ
ಸ್ಕಂಧನಿಗೆ ಆರು ನಮಸ್ಕಾರ
ಅಶ್ವತ್ಥವೃಕ್ಷಕ್ಕೆ ಏಳು ನಮಸ್ಕಾರ

ಏಕಂ ವಿನಾಯಕೇ, ದ್ವೇ ಸೂರ್ಯೇ, ತ್ರೀಣಿ ಶಂಕರೇ।
ಚತ್ವಾರಿ ಕೇಶವಸ್ಥಾನೇ, ದುರ್ಗಾಸ್ಥಾನೇ ತು ಪಂಚಮಂ।
ಷಷ್ಠಂ ಸ್ಕಂದೇ ಇತಿ ಪ್ರೋಕ್ತಂ ಸಪ್ತಾಶ್ವತ್ಥ ಪ್ರದಕ್ಷಿಣಮ್।
ತಾವದೇವ ನಮಸ್ಕಾರಾಃ ಸರ್ವೇಷಾಂ ಚ ವಿಧೀಯತೇ।

ಇದರರ್ಥ ಆ ಸಂಖ್ಯೆಯು ಆಯಾಯಾ ದೇವತೆಗಳಿಗೆ ಪ್ರೀತ್ಯಾಸ್ಪದವಾಗಿದ್ದು ಶೀಘ್ರವಾಗಿ ಅನುಗ್ರಹೋನ್ಮುಖರಾಗಲು ಈ ಸಂಖ್ಯೆಗಳು ಉಪಯುಕ್ತವಾಗಿದೆ.

ಮೇಲೆ ಹೇಳಿದ ಗಣಪತ್ಯಾದಿ ದೇವತೆಗಳನ್ನು ಪೂಜಿಸಿದ ನಂತರ ಪೂರ್ಣಫಲ ಪ್ರಾಪ್ತವಾಗಲು ಹೇಳಿದ ಸಂಖ್ಯೆಯಷ್ಟು ಪ್ರದಕ್ಷಿಣೆ ಮತ್ತು ಅಷ್ಟೆ ನಮಸ್ಕಾರಗಳನ್ನು ಹಾಕಬೇಕು, ಅಧಿಕವಾದರೆ ಅಧಿಕಫಲ, ಕಡಿಮೆಯಾಗಬಾರದು ಎಂಬಲ್ಲಿ ತಾತ್ಪರ್ಯ.

ಕೇಶವನಿಗೆ ಪೂಜಾನಂತರ ನಾಲ್ಕು ನಮಸ್ಕಾರಗಳಿಗೆ ಕಡಿಮೆಯಾಗದಂತೆ ಐದು, ಎಂಟು, ಹತ್ತು ನೂರು ಹೀಗೆ ನಮಸ್ಕಾರವನ್ನು ಮಾಡಬೇಕು ಪ್ರದಕ್ಷಿಣೆಯೂ ನಾಲ್ಕು.

ಚತಸ್ರಭ್ಯೋಧಿಕಾಃ ಕಾರ್ಯಾ ಪೂಜಾಂತೇ ಚ ಪ್ರದಕ್ಷಿಣಾಃ।

16. ನಮಸ್ಕಾರದ ವಿಧಗಳು

ಕಾಲಿಕಾ ಪುರಾಣವು ೭ ರೀತಿಯ ನಮಸ್ಕಾರಗಳನ್ನು ತಿಳಿಸಿದೆ. ''ಸಪ್ತದಾ ನತಿ ಲಕ್ಷಣಮ್''

೧. ತ್ರಿಕೋಣಾಕಾರ

೨. ಷಟ್ಕೋಣ

೩. ಅರ್ಧಚಂದ್ರಾಕಾರ

೪. ಪ್ರದಕ್ಷಿಣೆ

೫. ದಂಡಾಕಾರ

೬. ಅಷ್ಟಾಂಗ

೭. ಉಗ್ರ ನಮಸ್ಕಾರ


ಪ್ರದಕ್ಷಿಣೆಯು ನಮಸ್ಕಾರದ ಒಂದು ವಿಧ ಹೊರತು ಪ್ರತ್ಯೇಕವಿಲ್ಲ.

ತ್ರಿಕೋಣಮಥ ಷಟ್ಕೋಣಂ ಅರ್ಧಚಂದ್ರ ಪ್ರದಕ್ಷಿಣಮ್।
ದಂಡಮಷ್ಟಾಂಗಮುಗ್ರಂ ಚ ಸಪ್ತಧಾ ನತಿಲಕ್ಷಣಮ್॥

17. ತ್ರಿಕೋಣಾಕಾರ ನಮಸ್ಕಾರ

ಪೂಜಕನು ಉತ್ತರಾಭಿಮುಖನಾಗಿ ಕುಳಿತು ಪೂಜಿಸುವಾಗ ದಕ್ಷಿಣದಲ್ಲಿ ಕುಳಿತ್ತಿರುತ್ತಾನೆ.


ಪೂಜಕನು ತಾನು ಕುಳಿತಿದ್ದ ದಕ್ಷಿಣ ದಿಕ್ಕಿನಿಂದ ಆರಂಭಿಸಿ ನೇರವಾಗಿ ವಾಯುವ್ಯ ಮೂಲೆಗೆ ಬಂದು, ವಾಯುವ್ಯದಿಂದ ನೇರ ಈಶಾನ್ಯ ದಿಕ್ಕಿಗೆ ಬರಬೇಕು. ಈಶಾನ್ಯದಿಂದ ಪುನಃ ತನ್ನ ಸ್ವಸ್ಥಾನ ದಕ್ಷಿಣಕ್ಕೆ ನೇರವಾಗಿ ಬಂದಾಗ ಒಂದು ತ್ರಿಕೋಣವು ಏರ್ಪಡುತ್ತದೆ.



ತ್ರಿಕೋಣಾಕಾರದ ಪ್ರದಕ್ಷಿಣೆಯು ದೇವಿಯ ಪೂಜೆಯಲ್ಲಿ ವಿಹಿತವಾಗಿದೆ. ದೇವಿಯ ಪೂಜೆ ಮಾಡುವಾಗ ಪೂಜಕನು ಉತ್ತರ ಅಥವಾ ಐಶಾನ್ಯ ದಿಕ್ಕಿಗೆ ಮುಖಮಾಡಿರಬೇಕು.

ಐಶಾನೀ ವಾಥ ಕೌಬೇರೀ ದಿಕ್ ಕಾಮಾಕ್ಯಾಪ್ರಪೂಜನೇ।
ಪ್ರಶಸ್ತಾ ಸ್ಥಂಡಿಲಾದೌ ಚ ಸರ್ವಮಾರ್ತೇಷು ಸರ್ವತಃ॥

ಪೂರ್ವಾಭಿಮುಖವಾಗಿ ಪೂಜಿಸುವಾಗ ಪಶ್ಚಿಮದಿಂದಾರಂಭಿಸಿ ಈಶಾನ್ಯಕ್ಕೆ ಬಂದು, ಈಶಾನ್ಯದಿಂದ ಆಗ್ನೇಯಕ್ಕೆ ಬಂದು, ಅಲ್ಲಿಂದ ಪಶ್ಚಿಮಕ್ಕೆ ಹೋಗುವಾಗ ಒಂದು ತ್ರಿಕೋಣ ಪ್ರದಕ್ಷಿಣೆಯಾಗುತ್ತದೆ.



ತ್ರಿಕೋಣಾದಿವ್ಯವಸ್ಥಾಂ ಚ ಯದಿ ಪೂರ್ವಮುಖೇ ಯಜೇತ್।
ಪಶ್ಚಿಮಾತ್ ಶಾಂಬವೀಂ ಗತ್ವಾ ವ್ಯವಸ್ಥಾಂ ನಿರ್ದಿಶೇತ್ ತದಾ॥

ಯದೋತ್ತರಾಮುಖಃ ಕುರ್ಯಾತ್ ಸಾಧಕೋ ದೇವಪೂಜನಂ।
ತದಾ ಯಾಮ್ಯಾತ್ತು ವಾಯವ್ಯಾಂ ಗತ್ವಾ ಕುರ್ಯಾತ್ತು ಸಂಸ್ಥಿತಿಮ್॥

ದಕ್ಷಿಣಾದ್ ವಾಯುವೀಂ ಗತ್ವಾ ನಮಸ್ಕಾರಃ ತ್ರಿಕೋಣವತ್।
ತ್ರಿಕೋಣೋ ಯೋ ನಮಸ್ಕಾರಃ ತ್ರಿಪುರಾಪ್ರೀತಿದಾಯಕಃ॥
ತ್ರಿಕೋಣಾಕಾರಾ ಸರ್ವತ್ರ ನತಿಃ ಶಕ್ತೇಃ ಸಮೀರಿತಾ।

ಪೂಜಕನು ಯಾವಾಗಲೂ ಉತ್ತರಾಭಿಮುಖನಾಗಿಯೇ ಪೂಜಿಸಬೇಕು. ಎಂಬ ನಿಯಮವಿದೆ. ಈ ದಿಕ್ಕಿಗೆ ಅಭಿಮಾನಿ ಕುಬೇರ ಮತ್ತು ರುದ್ರದೇವರು ಇವರು ಮನೋಭಿಮಾನಿಗಳಾಗಿದ್ದು ನಮ್ಮ ಮನಸ್ಸು ಸಂಪತ್ತಿನ ಕಡೆಗೆ ವಾಲದಂತೆ ಭಗವಂತನಲ್ಲೆ ಮನಸ್ಸಿರುವಂತೆ ಮಾಡುವರು. ಆದ್ದರಿಂದ ಉತ್ತರ ಅಥವಾ ಪೂರ್ವ ಶ್ರೇಷ್ಠವಾಗಿದೆ. ಪೂರ್ವಕ್ಕೆ ಅಬಿಮಾನಿ ಇಂದ್ರದೇವರು. ಇವರು ಸ್ಥೂಲ ದೇಹದ ಮನಸ್ಸಿಗೆ ಅಭಿಮಾನಿಯೂ ಹೌದು. ಸ್ಥೂಲದೇಹದ ಮನಸ್ಸಿನ ನಿಯಂತ್ರಣ ಅವರಿಗೆ ಸೇರಿದೆ. ಮನಸ್ಸು ಭಗವಂತನಲ್ಲಿ ಸ್ಥಿರವಾಗಿರಲು ಇಂದ್ರದೇವರ ಅನುಗ್ರಹಬೇಕು. ಆದ್ದರಿಂದ ಪೂರ್ವಾಭಿಮುಖವಾಗಿ ಮಾಡಿದ ಕಾರ್ಯಕ್ಕೆ ಫಲಾಧಿಕ್ಯವಿದೆ.


ಉತ್ತರಾಭಿಮುಖನಾಗಿ ಸಾಧಕನು ಕುಳಿತಾಗ ದಕ್ಷಿಣದಲ್ಲಿ ಕುಳಿತಿರುತ್ತಾನೆ. ಸಾಧಕನು ದಕ್ಷಿಣ ದಿಕ್ಕಿನಿಂದ ನೇರವಾಗಿ ವಾಯುವ್ಯ

ಮೂಲೆಗೆ ಬಂದು, ಪುನಃ ವಾಯುವ್ಯದಿಂದ ಈಶಾನ್ಯ ದಿಕ್ಕಿಗೆ ಬಂದು ಪುನಃ ದಕ್ಷಿಣಕ್ಕೆ ವಾಪಸ್ಸು ಬಂದಾಗ ತ್ರಿಕೋಣವು ಏರ್ಪಡುತ್ತದೆ. ಇತರ ದಿಕ್ಕಿನಲ್ಲಿ ನಿಲ್ಲುವುದು, ನಮಸ್ಕಾರಗಳನ್ನು ಮಾಡದೆ ನೇರವಾಗಿ ಅಸಾಧ್ಯವಾದರೂ ಮಾನಸಿಕವಾಗಿ ತ್ರಿಕೋಣಕಾರವಾಗಿ ಹೋಗುವುದು ಸಾಧ್ಯವಿದೆ.

ಈ ತ್ರಿಕೋಣಾಕಾರವಾಗಿ ನಮಸ್ಕಾರವನ್ನು ಮಾಡುವುದು ಪಾರ್ವತಿಗೆ ಪ್ರಿಯವಾದದ್ದು.

ತ್ರಿಕೋಣೋ ಯೋ ನಮಸ್ಕಾರಃ ತ್ರಿಪುರಾ ಪ್ರೀತಿದಾಯಕಃ।

18. ಷಟ್ಕೋಣ ನಮಸ್ಕಾರ



ದಕ್ಷಿಣದಿಂದ ವಾಯುವ್ಯ ದಿಕ್ಕಿಗೂ, ವಾಯುವ್ಯದಿಂದ ಐಶಾನೀ ದಿಕ್ಕಿಗೂ, ಈಶಾನ್ಯದಿಂದ ದಕ್ಷಿಣಕ್ಕೆ ಮರಳಿದರೆ ಹಿಂದಿನಂತೆ ತ್ರಿಕೋಣವಾಗುತ್ತದೆ. ಪುನಃ ಆಗ್ನೇಯದಿಂದ ಪ್ರಾರಂಭಿಸಿ ನೈರುತ್ಯಕ್ಕೆ ಬಂದು, ನೈರುತ್ಯದಿಂದ ಉತ್ತರ ದಿಕ್ಕಿನಲ್ಲಿ ನಿಂತು ಉತ್ತರದಿಂದ ಪುನಃ ಆಗ್ನೇಯಕ್ಕೆ ಮರಳಿದಾಗ ಮತ್ತೊಂದು ತ್ರಿಕೋಣವಾಗಿ ಷಟ್ಕೋಣ ಸಿದ್ಧವಾಗುತ್ತದೆ. ಇದು ಶಿವ-ದುರ್ಗೆಯರಿಗೆ ಪ್ರೀತ್ಯಾದಾಯಕವಾಗಿದೆ.


19. ಅರ್ಧಚಂದ್ರ

ದಕ್ಷಿಣದಿಂದ ಪ್ರಾರಂಭಿಸಿ ವಾಯುವ್ಯಕ್ಕೆ ಹೋಗಿ ಪುನಃ ದಕ್ಷಿಣಕ್ಕೆ ವಾಪಸ್ಸು ಬರುವುದು ಅರ್ಧಚಂದ್ರ.

ದಕ್ಷಿಣಾದ್ ವಾಯವೀಂ ಗತ್ವಾ ತಸ್ಮಾದ್ ವ್ಯಾವೃತ್ಯ ದಕ್ಷಿಣಮ್।
ಗತ್ವಾ ಯೋಽಸೌ ನಮಸ್ಕಾರಃ ಸೋಽರ್ಧಚಂದ್ರಃ ಪ್ರಕೀರ್ತಿತಃ।

ಅರ್ಧಚಂದ್ರ ರುದ್ರದೇವರಿಗೆ ಪ್ರಿಯವಾದದ್ದು


ಈ ಅರ್ಧಚಂದ್ರ ಪ್ರದಕ್ಷಿಣೆಯು (ನಮಸ್ಕಾರವು) ದುಷ್ಟಶಕ್ತಿಗಳನ್ನು ದೂರ ಮಾಡಲು ಮಾಡಲಾಗುವುದು. ಮಾಯಾ, ಮಾಟ ಮದ್ದು ಇವುಗಳಿಂದ ಮುಕ್ತವಾಗಲು ನಮ್ಮ ಇಷ್ಟದೈವವನ್ನು ಕುರಿತು ಅರ್ಧಚಂದ್ರ ಪ್ರದಕ್ಷಿಣೆಯನ್ನು ಮಾಡಿ ದುಷ್ಟಶಕ್ತಿಗಳಿಗೆ ಅರ್ಧಚಂದ್ರವನ್ನು ಮಾಡು (ಕತ್ತು ಹಿಡಿದು ತಳ್ಳು) ಎಂದು ಕೇಳಬೇಕು. ಸಮಯಾಭಾವದಲ್ಲಿ ಕಡೇಪಕ್ಷ ಈ ಅರ್ಧಚಂದ್ರ ನಮಸ್ಕಾರವನ್ನಾದರೂ ಮಾಡಿ ಫಲ ಪಡೆಬಹುದು.



20. ವರ್ತುಲಾಕೃತಿ=ಪ್ರದಕ್ಷಿಣ ನಮಸ್ಕಾರ

ದಕ್ಷಿಣದಿಂದ ಪ್ರಾರಂಭಿಸಿ ಗರ್ಭಗುಡಿಯನ್ನು ಕೇಂದ್ರ ಬಿಂದುವನ್ನಾಗಿಸಿ ವರ್ತುಲಾಕಾರವಾಗಿ ಪುನಃ ಯಥಾಸ್ಥಾನವನ್ನು ಬಂದು ಸೇರುವುದು. ಪ್ರದಕ್ಷಿಣೆ ಎನಿಸಿದೆ.

ಸಕೃತ್ ಪ್ರದಕ್ಷಿಣಂ ಕೃತ್ವಾ ವರ್ತುಲಾಕೃತಿ ಸಾಧಕಃ।
ನಮಸ್ಕಾರಃ ಕಥ್ಯತೇಽಸೌ ಪ್ರದಕ್ಷಿಣ ಇತಿ ದ್ವಿಜೈಃ॥



21. ಪ್ರದಕ್ಷಿಣೆಯಲ್ಲಿ ನಿಯಮಗಳು

ಪ್ರದಕ್ಷಿಣೆಯನ್ನು ಮಾಡುವಾಗ ಜೋರಾಗಿ ಮಾತನಾಡುವುದು ಸಾಂಸಾರಿಕ ವಿಷಯವನ್ನು ಚರ್ಚಿಸುವುದು, ನಗುವುದು ಇವೇ ಮೊದಲಾದವು ನಿಷಿದ್ಧವಾಗಿ ದೇವರ ಮಂತ್ರವನ್ನು ಹೊರತು ಬೇರೆ ಯಾವ ಮಾತನ್ನು ಆಡಬಾರದು.

ಮೊದಲು ನಮಸ್ಕಾರವನ್ನು ಮಾಡಬೇಕು ಮೌನಿಯಾಗಿದ್ದು ಭಗವಂತನ ಚಿತ್ರವು ಹೃದಯದಲ್ಲಿ ತುಂಬಿಕೊಂಡು ಧ್ಯಾನ ಮಾಡುತ್ತಾ ಪ್ರದಕ್ಷಿಣೆಯನ್ನು ಮಾಡಬೇಕು.

ನಮೇತ್ ಪೂರ್ವಂ ಪ್ರತಿದಿಶಂ ವಾಗ್ಯತೋ ಧ್ಯಾನತತ್ಪರಃ।
ಅಸಂಸಕ್ತೋ ವದನ್ ಕಿಂಚನ್ಮಂತ್ರಂ ಕುರ್ಯಾತ್ ಪ್ರದಕ್ಷಿಣಮ್॥

ನ ಕುರ್ಯಾತ್ ಸ್ತ್ರೀಷು ಸಲ್ಲಾಪಂ ನ ಚೋಚ್ಚೈಃ ಪ್ರಲಪೇತ್ ಸದಾ।

ಭಗವಂತನಿಗೆ ಮೂರು ಪ್ರದಕ್ಷಿಣೆ - ಮೂರು ನಮಸ್ಕಾರ ಮಾಡಿ ಪುನಃ ಪ್ರದಕ್ಷಿಣೆ ಹೀಗೆ ನಾಲ್ಕು ಪ್ರದಕ್ಷಿಣೆಯನ್ನು ಮಾಡಿದರೆ ವಿಷ್ಣು ಲೋಕ ಪ್ರಾಪ್ತಿ.

ಪ್ರದಕ್ಷಿಣತ್ರಯಂ ಕೃತ್ವಾ ನಮಸ್ಕೃತ್ವಾ ಜನಾರ್ಧನಂ।
ಪುನಃ ಪ್ರದಕ್ಷಿಣಂ ಕೃತ್ವಾ ವಿಷ್ಣುಲೋಕೇ ಮಹೀಯತೇ॥

ವಿಷ್ಣುವಿಗೆ ಮೂರಕ್ಕೆ ಕಡಿಮೆ ಇಲ್ಲದೆ ನಮಸ್ಕಾರವನ್ನು ಮಾಡಬೇಕು. ಶಕ್ತಿಯಿದ್ದರೆ ಅಧಿಕ ಸಂಖ್ಯೆಯಲ್ಲಿಯೂ ನಮಸ್ಕರಿಸಬಹುದು.

ಅವಶ್ಯಂ ಚ ಪ್ರಣಾಮಾನ್ ತ್ರೀನ್ ಶಕ್ತಶ್ಚೇದ್ ಅಧಿಕಾಧಿಕಾನ್।

ಒಂದು ಬಾರಿ ನಮಸ್ಕಾರವನ್ನು ಮಾಡಿದಾಗ ಕೈ, ತಲೆಗಳನ್ನು ಎತ್ತಲು ಅಸಮರ್ಥನಾದಾಗ ಪುನಃ ನಮಸ್ಕರಿಸಲು ಅಶಕ್ತನಾದರೆ ಪ್ರತಿಸಾರಿಯೂ ನಿಂತುಕೊಂಡು ದಂಡ ಪ್ರಮಾಣವನ್ನು ಮಾಡಬಹುದು.

ಸಕೃದ್ ಭೂಮೌ ನಿಪತಿತಃ ನ ಶಕ್ತಃ ಪ್ರಣಮೇನ್ ಮುಹುಃ।
ಉತ್ಥಾಯೋತ್ಥಾಯ ಕರ್ತವ್ಯಂ ದಂಡವತ್ ಪ್ರಣಿಪಾತನಮ್॥

22. ದಂಡಾಕಾರ ನಮಸ್ಕಾರ

ತಾನು ನಿಂತಿರುವ ಸ್ಥಾನದಿಂದ ಸ್ವಲ್ಪ ಹಿಂದಕ್ಕೆ ಹೋಗಿ ಪ್ರದಕ್ಷಿಣೆ ಹಾಕದೆ ಭೂಮಿಯಲ್ಲಿ ದಂಡಾಕಾರವಾಗಿ ಮಲಗಿ ನಮಸ್ಕರಿಸಿದರೆ ದಂಡಾಕಾರ ನಮಸ್ಕಾರವಾಗುತ್ತದೆ. ಇದು ಚಿರಪರಿಚಿತವಿರುವುದು.

ದಂಡಾಕಾರದ ನಮಸ್ಕಾರವಾದರೂ ಸಕಲದೇವತೆಗಳಿಗೂ ಪ್ರಿಯವೆನಿಸಿದೆ.

ತ್ಯಕ್ತ್ವಾ ಸ್ವಮಾಸನ (ಸ್ವಮಾನನ) ಸ್ಥಾನಂ ಪಶ್ಚಾದ್ಗತ್ವಾ ನಮಸ್ಕೃತಿಃ।
ಪ್ರದಕ್ಷಿಣಂ ವಿನಾ ಯಾತು ನಿಪತ್ಯ ಭುವಿ ದಂಡವತ್।
ದಂಡ ಇತ್ಯುಚ್ಯತೇ ದೇವೈಃ ಸರ್ವದೇವೌಘ ಮೋದದಃ॥

23. ಅಷ್ಟಾಂಗ ನಮಸ್ಕಾರ

ಹಿಂದೆ ಪ್ರಸಕ್ತವಾದಂತೆ ದೇಹವನ್ನು ಭೂಮಿಯಲ್ಲಿ ಬೀಳಿಸಿ ಕ್ರಮವಾಗಿ ಹೃದಯ, ಗದ್ದ, ಮುಖ, ನಾಸಿಕ, ಹಣೆ, ಬ್ರಹ್ಮರುದ್ರ, ಎರಡು ಕಿವಿಗಳು ಇವುಗಳನ್ನು ಭೂಸ್ಪರ್ಶ ಮಾಡುವುದು ಅಷ್ಟಾಂಗ ನಮಸ್ಕಾರ ಎನಿಸಿದೆ.

ಪೂರ್ವವದ್ ದಂಡವದ್ ಭೂಮೌ ನಿಪತ್ಯ ಹೃದಯೇನ ತು।
ಚಿಬುಕೇನ, ಮುಖೇನಾರ್ಥ ನಾಸಯಾ ಆಲಿಕೇನ ಚ॥
ಬ್ರಹ್ಮರುದ್ರೇಣ ಕರ್ಣಾಭ್ಯಾಂ ಯದ್ ಭೂಮಿಸ್ಪರ್ಶನಂ ಕ್ರಮಾತ್।
ತದಷ್ಟಾಂಗ ಇತಿ ಪ್ರೋಕ್ತೋ ನಮಸ್ಕಾರೋ ಮನೀಷಿಭಿಃ॥

24. ಉಗ್ರ ನಮಸ್ಕಾರ

ನಮಸ್ಕಾರದ ಏಳು ವಿಧಗಳಲ್ಲಿ ಕಡೆಯದಾದ ಹಾಗೂ ಪ್ರಧಾನವಾದ ನಮಸ್ಕಾರವೆಂದರೆ ಉಗ್ರ ನಮಸ್ಕಾರ.

ಉಗ್ರವೆಂಬ ಹೆಸರು ನಾವು ಮಾಡುವ ನಮಸ್ಕಾರದ ಉಗ್ರತೆಯನ್ನು ತೋರಿಸುತ್ತದೆ ವಿನಹ ಉಗ್ರವಾದ ದೇವತೆಗಳಿಗೆ ಮಾಡುವ ನಮಸ್ಕಾರವನ್ನಲ್ಲ.

ಉಗ್ರದ ಲಕ್ಷಣ ಮತ್ತು ಶ್ರೇಷ್ಠತೆ

ಮೂರು ಪ್ರದಕ್ಷಿಣೆಗಳನ್ನು ಮೊದಲು ಮಾಡಿದ ನಂತರ ನಡುನೆತ್ತಿಯಿಂದ (ಬ್ರಹ್ಮರುದ್ರ) ದಿಂದ ಭೂಸ್ಪರ್ಶ ಮಾಡುವ ನಮಸ್ಕಾರ ಉಗ್ರವೆನಿಸಿದೆ.

ಪ್ರದಕ್ಷಿಣತ್ರಯಂ ಕೃತ್ವಾ ಸಾಧಕೋ ವರ್ತುಲಾಕೃತಿಃ।
ಬ್ರಹ್ಮರಂಧ್ರೇಣ ಸಂಸ್ಪರ್ಶಃ ಕ್ಷಿತೇರ್ಯಃ ಸ್ಯಾನ್ನಮಸ್ಕೃತೌ।
ಸ ಉಗ್ರ ಇತಿ ದೇವೋಘ್ಯೈಃ ಉಚ್ಯತೆ ವಿಷ್ಣುತುಷ್ಟಿದಃ॥

ನದಗಳಲ್ಲಿ ಸಮುದ್ರದಂತೆ, ಎರಡು ಕಾಲುಗಳುಳ್ಳವರಲ್ಲಿ ಬ್ರಾಹ್ಮಣನಂತೆ, ನದಿಗಳಲ್ಲಿ ಜಾಹ್ನವಿಯಂತೆ, ದೇವತೆಗಳಲ್ಲಿ ವಿಷ್ಣುವು ಹೇಗೆ ಶ್ರೇಷ್ಠನೂ ಹಾಗೆ ನಮಸ್ಕಾರಗಳಲ್ಲಿ ಉಗ್ರವು ಉತ್ತಮವಾಗಿದೆ. ಉಗ್ರವು ಚತುರ್ವರ್ಗ ಫಲವನ್ನು ಕೂಡಲೇ ಪಡೆಯುವ ವಿಧಾನವಾಗಿದೆ. ನಾರಾಯಣನಿಗೆ, ಮಹಾಮಾಯಿಗೆ (ಲಕ್ಷ್ಮೀ) ಮತ್ತು ಸರ್ವದೇವತೆಗಳಿಗೂ ಪ್ರೀತಿಕರವಾದ ನಮಸ್ಕಾರವೆ ಉಗ್ರ ನಮಸ್ಕಾರ.

"ನದಾನಾಂ ಸಾಗರೋ ಯಾದೃಗ್ ದ್ವಿಪದಾಂ ಬ್ರಾಹ್ಮಣೋ ಯಥಾ।
ನದೀನಾಂ ಜಾಹ್ನವೀ ಯಾದೃಗ್ ದೇವಾನಾಮಿವ ಚಕ್ರಧೃಕ್॥
ನಮಸ್ಕಾರೇಷು ಸರ್ವೇಷು ತಥೈವೋಗ್ರಃ ಪ್ರಶಸ್ಯತೇ।
ತ್ರಿಕೋಣಾದ್ಯೈಃ ನಮಸ್ಕಾರೈಃ ಕೃತೈರೇವ ತು ಭಕ್ತಿತಃ॥
ಚತುರ್ವರ್ಗೋ ಲಭೇತ್ ಭಕ್ತೋ ನ ಚಿರಾದೇವ ಸಾಧಕಃ।
ಸರ್ವೇಷಾಮಪಿ ದೇವಾನಾಂ ಅನ್ಯೇಷಾಮಪಿ ಭೈರವ॥
ಯೋಽಪ್ಯಾವುಗ್ರೋ ನಮಸ್ಕಾರಃ ಪ್ರೀತಿದಃ ಸತತಂ ಹರೇಃ।
ಮಹಾಮಾಯಾಪ್ರೀತಿಕರಃ ನಮಸ್ಕರಣೋತ್ತಮಃ॥

- ಕಾಲಿಕಾ ಪುರಾಣ

25. ಪ್ರದಕ್ಷಿಣೆ ಹೇಗೆ ಮಾಡಬೇಕು?

ಪ್ರದಕ್ಷಿಣೆಯು ಹಿಂದೆ ನೋಡಿದಂತೆ ನಮಸ್ಕಾರದ ಒಂದು ಪ್ರಭೇದವಾಗಿದೆ. ವರ್ತುಲಾಕಾರವಾಗಿ ಪ್ರದಕ್ಷಿಣೆ ಬಂದರೂ ನಮಸ್ಕಾರದ ಒಂದು ಭೇದವನ್ನು ಮಾಡಿದಂತಾಗುತ್ತದೆ.

ಪ್ರದಕ್ಷಿಣೆ ಮತ್ತು ನಮಸ್ಕಾರ ಎಂದು ಬೇರೆಯಾಗಿ ನಾವು ತಿಳಿದಿದ್ದರಿಂದ ಪ್ರದಕ್ಷಿಣೆ ಮತ್ತು ನಮಸ್ಕಾರಗಳು ಬೇರೆ ಬೇರೆಯಾಯಿತು. ಪ್ರದಕ್ಷಿಣೆ ಹಾಕಿ ನಮಸ್ಕರಿಸಿದರೆ ಅಧಿಕಸ್ಯ ಅಧಿಕಂ ಫಲಂ ಎಂಬಂತೆ ಫಲಾಧಿಕ್ಯವಿದೆ.

ಪ್ರದಕ್ಷಿಣೆ ನಮಸ್ಕಾರದ ರೀತಿ

ತುಂಬು ಗರ್ಭಿಣಿಯು ಜಲದಿಂದ ಪೂರ್ಣವಾದ ಮಡಕೆಯನ್ನು ಹೊತ್ತು ತರುತ್ತಿದ್ದರೆ ಹೇಗೆ ಅವಳ ಗತಿ ಅತೀ ನಿಧಾನವಾಗಿರುತ್ತದೆಯೋ ಹಾಗೆ ನಿಧಾನವಾಗಿ ಪ್ರದಕ್ಷಿಣೆಯನ್ನು ಮಾಡಬೇಕು ಓಡಬಾರದು.

ಆಸನ್ನ ಪ್ರಸವಾ ನಾರೀ ಜಲಪೂರ್ಣಂ ಯಥಾ ಘಟಮ್।
ಉದ್ವಹಂತೀ ಶನೈರ್ಯಾತಿ ತಥಾ ಕುರ್ಯಾತ್ ಪ್ರದಕ್ಷಿಣಮ್।

- ಬ್ರಹ್ಮಾಂಡ

ಆದರೆ ನಮ್ಮಲ್ಲಿ ಅಷ್ಟು ತಾಳ್ಮೆ ಸಂಯಮವನ್ನು ಊಹಿಸುವುದು ಕಷ್ಟವಾಗಿದೆ ಯಾವುದಾದರೂ ಕಾರ್ಯನಿಮಿತ್ತವಾಗಿ ಬಂದು ದೇವಾಲಯಕ್ಕೆ ಬಂದರೂ ನಮ್ಮ ದೃಷ್ಟಿ ಇರುವುದು ನಮ್ಮ ಕಾರ್ಯದತ್ತ. ಹೀಗಾಗಿ ಇದನ್ನು ವಿವೇಚಿಸುವುದು ಸಾಧ್ಯವಿಲ್ಲ. ಹೀಗಾಗಿ ಪ್ರದಕ್ಷಿಣೆಯಲ್ಲಿ ನಿಧಾನಗತಿಯ ಗತಿವಿಧಾನವನ್ನು ಗಮನಿಸುವುದಿಲ್ಲ.

ಅಷ್ಟು ವೇಗವಾಗಿ ಚಲಿಸಿದರೆ ನಮ್ಮ ಮನಸ್ಸೂ ವೇಗವಾಗಿ ಚಲಿಸಿ ಮನಸ್ಸೂ ಚಂಚಲವಾಗುತ್ತದೆ. ''ಮರ್ಕಟಸ್ಯ ಸುರಾಪಾನಂ'' ಎಂಬಂತೆ ಆಗುತ್ತದೆ. ಆದ್ದರಿಂದ ನಿಧಾನವಾಗಿ ಪ್ರದಕ್ಷಿಣೆಯನ್ನು ಮಾಡಬೇಕು.

26. ಪ್ರದಕ್ಷಿಣೆಯ ನಾಲ್ಕು ಅಂಶಗಳು

ಪ್ರದಕ್ಷಿಣೆ ಬರುವಾಗ ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ಕೈಗಳನ್ನು ಬೀಸದೆ (ಜೋರಾಗಿ ಬೀಸುತ್ತಾ ನಡೆಯದೆ) ಬಾಯಿಯಲ್ಲಿ ನಿರಂತರ ಸ್ತೋತ್ರ ಪಠಿಸುತ್ತಾ ವರ್ತುಲಾಕಾರವಾಗಿ ಸುತ್ತು ಬರುವುದು ಪ್ರದಕ್ಷಿಣೆಯಲ್ಲಿ ಇರಬೇಕಾದ ನಾಲ್ಕು ಅಂಗಗಳು.

ಪದೇ ಪದಾಂತರಂ ಗತ್ವಾ ಕರೌ ಚಲನವರ್ಜಿತೌ।
ವಾಚಾ ಸ್ತುತಿಃ ಹೃದಿ ಧ್ಯಾನಂ ಚತುರಂಗಂ ಪ್ರದಕ್ಷಿಣಮ್॥

ಪ್ರದಕ್ಷಿಣೆ ಯಾರಿಗೆ ಎಷ್ಟೆಷ್ಟು?

ಹಿಂದೆ ಹೇಳಿದ ನಮಸ್ಕಾರದಂತೆಯೇ ಆಯಾಯ ದೇವತೆಗಳಿಗೆ ಅಷ್ಟೆ ಪ್ರದಕ್ಷಿಣೆಯು ವಿಹಿತವಾಗಿದೆ ಅದರಂತೆ.

ವಿನಾಯಕನಿಗೆ ಒಂದೇ ಪ್ರದಕ್ಷಿಣೆ

ಸೂರ್ಯದೇವನಿಗೆ ಎರಡು ಪ್ರದಕ್ಷಿಣೆ
ರುದ್ರದೇವನಿಗೆ ಮೂರು ಪ್ರದಕ್ಷಿಣೆ
ಕೇಶವನಿಗೆ ನಾಲ್ಕು ಪ್ರದಕ್ಷಿಣೆ
ದುರ್ಗಾದೇವಿಗೆ ಎಂಟು ಪ್ರದಕ್ಷಿಣೆ
ಷಣ್ಮುಖನಿಗೆ ಆರು ಪ್ರದಕ್ಷಿಣೆ
ಅಶ್ವತ್ಥವೃಕ್ಷಕ್ಕೆ ಏಳು ಪ್ರದಕ್ಷಿಣೆ

27. ಲಕ್ಷ್ಮೀದೇವಿಗೆ ನಮಸ್ಕಾರ ಪ್ರದಕ್ಷಿಣೆ

ಲಕ್ಷ್ಮೀದೇವಿಗೆ ನೂರೆಂಟು ನಮಸ್ಕಾರಗಳು ವಿಹಿತವಾಗಿದೆ. ನಮಸ್ಕರಿಸುವಾಗ ನೂರೆಂಟು ಪ್ರದಕ್ಷಿಣೆಯನ್ನು ಮಾಡಬೇಕು. ಇದರಿಂದ ಸಕಲೇಷ್ಟ ಸಿದ್ಧಿಯಾಗುವುದು. ಅಂತ್ಯದಲ್ಲಿ ಸಂಸಾರದಿಂದ ಬಿಡುಗಡೆಯೂ ಆಗುವುದು.

ಅಷ್ಟೋತ್ತರಶತಂ ಯಸ್ತು ದೇವ್ಯಾಃ ಕುರ್ಯಾತ್ ಪ್ರದಕ್ಷಿಣಂ।
ಸರ್ವಾನ್ ಕಾಮಾನ್ ಸಮಾಸಾದ್ಯ ಪಶ್ಚಾನ್ಮೋಕ್ಷಮವಾಪ್ನುಯಾತ್॥

ಮನಸ್ಸಿನಿಂದಲೂ ಪ್ರದಕ್ಷಿಣೆ

ನೂರೆಂಟು ನಮಸ್ಕಾರ, ಪ್ರದಕ್ಷಿಣೆಯು ಅಸಾಧ್ಯವಾದಾಗ ಒಂದು ಕಡೆ ಕುಳಿತೇ ಮನಸ್ಸಿನಿಂದಲೇ ಪ್ರದಕ್ಷಿಣೆಯನ್ನು ಮಾಡಿದರೂ ಫಲವು ಲಭಿಸುವುದು ಹಾಗೂ ನರಕದ ದರ್ಶನವೂ ತಪ್ಪುವುದು.

ಮನಸಾಪಿ ಚ ಯೋ ದದ್ಯಾತ್ ದೇವ್ಯೇ ಭಕ್ತ್ಯಾ ಪ್ರದಕ್ಷಿಣಂ।
ಪ್ರದಕ್ಷಿಣತ್ರಯೇಣೈವ ನರಕಾಣಿ ನ ಪಶ್ಯತಿ॥

28. ವಿನಾಯಕ ತತ್ವ

ಗಣಪತಿಯು ಆಕಾಶತತ್ವದ ಅಭಿಮಾನಿ. ದೈನಂದಿನ ಕಾರ್ಯಕ್ರಮಗಳನ್ನು ನಡೆಸಲು, ಕೈಕಾಲುಗಳನ್ನು ಚಾಚಲು ಈತನ ಅನುಗ್ರಹವಿಲ್ಲದಿದ್ದರೆ ಸಾಧ್ಯವಿಲ್ಲ. ಪಂಚಭೂತಗಳಲ್ಲಿ ಮೊದಲನೆಯದು ಆಕಾಶವೆ. ಆಕಾಶದಿಂದ ವಾಯುವಿನ ಉತ್ಪತ್ತಿ, ಆಕಾಶದ ಗುಣವಾದ ಶಬ್ದವನ್ನು ಎಲ್ಲೆಡೆ ಪಸರಿಸಲು ವಾಯುವನ್ನು ಸೃಷ್ಟಿಸಿತು. ಈ ಎರಡೂ ಕಾರಣಗಳಿಂದ ಆಕಾಶಾಭಿಮಾನಿಯಾದ ಗಣಪನು ಮೊಟ್ಟಮೊದಲ ಪೂಜೆಗೊಂಬ ಇಷ್ಟಮೂರುತಿಯಾಗಿದ್ದಾನೆ. ಆಕಾಶವು ನನ್ನಿಂದ ಅಭಿಮನ್ಯವಾಗಿದೆ ಎಂದು ತನ್ನ ಮಹೋದರದಿಂದ ಸೂಚಿಸಿದರೆ ವಿಶಾಲವಾದ ಮೊರದಗಲದ ಕಿವಿಯಿಂದ ಗಾಳಿ ಸೃಷ್ಟಿಸುತ್ತಾ ವಾಯುತತ್ವಕ್ಕೆ ಈ ಆಕಾಶತತ್ವವೆ ಜನಕ ಎಂದು ಸೂಚಿಸುವನು. ಸರ್ಪವನ್ನು ಹೊಟ್ಟೆಗೆ ಸುತ್ತುತ್ತಾ ಈ ಪವರ್ವನಾಶನವಾದ ಸರ್ಪದ (ಗಾಳಿಯೆ ಆಹಾರ) ಉದರ ತುಂಬುವುದು ಆಕಾಶದಿಂದ ಜನಿಸಿದ ವಾಯುವಿನಿಂದಲೇ ಎಂದು ಸೂಚಿಸುತ್ತಿರುವನು.

ಗಜವನ್ನು ರಕ್ಷಿಸಿದ ವಿಶ್ವಂಭರನ ಅನುಗ್ರಹ ಪಡೆದವನು ಮತ್ತು ನನ್ನ ಉಪಾಸ್ಯ ಮೂರುತಿಯ ಮುಖವು ನನ್ನಂತೆಯೆ ಗಜಮುಖ ಎಂದು ಗಜಮುಖದಿಂದ ಸೂಚಿಸುತ್ತಿರುವನು.

ದೇಹವು ವಕ್ರವಾಗಿದ್ದರೂ ಮನಸ್ಸು ನೇರವಾಗಿದ್ದರೆ ಭಗವಂತನು ಒಲಿಯುವನು ಎಂದು ವಕ್ರತುಂಡದಿಂದ ತೋರಿಸುತ್ತಿರುವನು.

29. ಗಣಪತಿಗೆ - ತುಳಸಿಯಿಂದ ಪೂಜೆ ಇಲ್ಲ

ಗಣಪತಿಯು ತುಳಸಿಯನ್ನು ಕುರಿತು ಎಲ್ಲಾ ದೇವತೆಗಳು ನಿನ್ನನ್ನು ಸ್ವೀಕರಿಸಿದರು. ನಾನು ಮಾತ್ರ ನಿನ್ನನ್ನು ಸ್ವೀಕರಿಸಲಾರೆ ಎಂದು ಹೇಳಿರುವನು ಎಂದು ಗಣೇಶಖಂಡ ಬ್ರಹ್ಮದೈವರ್ತದಲ್ಲಿ ಉಕ್ತವಾಗಿದೆ. ಸಾಮಾನ್ಯವಾಗಿ ಹರಿಗೆ ನಿವೇದಿಸಿದ ನಂತರವೇ ಅರ್ಪಿಸುವುದು ಪದ್ಧತಿ. ಹಾಗಾದರೆ ತುಳಸಿ ಪೂಜೆ ನನಗೆ ಬೇಡ ಎನ್ನಲು ಬಲವತ್ತರವಾದ ಕಾರಣ ಇರಬೇಕು. ಆ ಕಾರಣ ಯಾವುದು?

ಪುಷ್ಪಾಣಾಂ ಸಾರಭೂತಾ ತ್ವಂ ಭವಿಷ್ಯಸಿ ಮನೋಹರೇ
ಕಲಾಂಶೇನ ಮಹಾಭಾಗೇ ಸ್ವಯಂ ನಾರಾಯಣ ಪ್ರಿಯಾ
ಪ್ರಿಯಾ ತ್ವಂ ಸರ್ವದೇವಾನಾಂ ಕೃಷ್ಣಸ್ಯ ಚ ವಿಶೇಷತಃ।
ಅಶ್ವಮೇಧ ಸಹಸ್ರಸ್ಯ ಫಲಮಾಪ್ನೋತಿ ಮಾನವಃ।
ನ ಶಿವಂ ಕೇತಕೀಪುಷ್ಪೈಃ ನ ತುಲಸ್ಯಾ ವಿನಾಯಕಂ।
ನ ಗಂಧೈದ್ವಾರಕಾ ಚಕ್ರಂ ನಾಕ್ಷತೈಃ ವಿಷ್ಣುಮರ್ಚಯೇತ್॥

ಎಂದು ಗಣಪತಿಯೇ ತುಲಸಿಯನ್ನು ನಿಷೇಧ ಮಾಡಿದ್ದರಿಂದ ಗಣೇಶನಿಗೆ ತುಲಸಿಯು ನಿಷಿದ್ಧವಾಗಿದೆ.

ಶಿವನಿಗೆ ಕೇತಕಿ ಹೂವು ಹಾಗೂ ಶಂಖದಿಂದ ಅಭಿಷೇಕವು ನಿಷಿದ್ಧವಾಗಿದೆ. ಮಂತ್ರಾಕ್ಷತೆಯಿಂದ ವಿಷ್ಣುವನ್ನು ಪೂಜಿಸಬಾರದು. ಮಂತ್ರಾಕ್ಷತೆಯಿಂದ ವಿಷ್ಣುವನ್ನು ಅರ್ಚಿಸಬಾರದು ಎಂದರೆ ಸಾಲಿಗ್ರಾಮವನ್ನು ಮಂತ್ರಾಕ್ಷತೆಯಿಂದ ಪೂಜಿಸಬಾರದು ಎಂದರ್ಥ.

ನ ಶಿವಂ ಕೇತಕೀಪುಷ್ಪೈಃ ನ ತುಲಸ್ಯಾ ವಿನಾಯಕಂ।
ನ ಗಂಧೈರ್ದ್ವಾರಕಾಚಕ್ರಂ ನಾಕ್ಷತೈಃ ವಿಷ್ಣುಮರ್ಚಯೇತ್॥
ಅತ್ರ ವಿಷ್ಣುಪದಂ ಸಾಲಿಗ್ರಾಮ ಪರಂ" - ಹಿರಣ್ಯಕೇಶೀಗೃಹ್ಯಸೂತ್ರ

ವಿಷ್ಣು ಪ್ರದಕ್ಷಿಣೆ

ವಿಷ್ಣುವಿನ ದೇವಾಲಯದಲ್ಲಿ ಶ್ರೀನಿವಾಸ-ನರಸಿಂಹ, ನಾರಾಯಣ ಇತ್ಯಾದಿ ದೇವಾಲಯಗಳಲ್ಲಿ ಭಗವಂತನಿಗೆ ಮೊದಲು ಭಗವಂತನನ್ನು ನೋಡುವುದು - ನಂತರ ನಮಸ್ಕಾರ - ನಂತರ ನಾಲ್ಕು ದಿಕ್ಕಿನಲ್ಲಿಯೂ ನಾಲ್ಕು ನಮಸ್ಕಾರ ಹಾಗೂ ನಾಲ್ಕು ಪ್ರದಕ್ಷಿಣೆಯನ್ನು ಮಾಡಬೇಕು.

ಚತುಃ ಪ್ರದಕ್ಷಿಣಂ ಕೃತ್ವಾ ಚತುರ್ದಿಕ್ಷು ಪ್ರಣಮ್ಯ ಚ।

ವಿಷ್ಣುವಿಗೆ ಒಂದು ಬಾರಿ ಪ್ರದಕ್ಷಿಣೆಯಿಂದ ಅಶ್ವಮೇಧಯಾಗದ ಫಲವು ಬರುವುದು. ವಿಷ್ಣುವಿಗೆ ಮಾಡಿದ ಒಂದು ಆವರ್ತಿ ಪ್ರದಕ್ಷಿಣೆಯು ಪುನಃ ಸಂಸಾರಕ್ಕೆ ಆವರ್ತಿಯನ್ನು ಮಾಡದೆ ಪುನರಾವರ್ತಿ ಮೋಕ್ಷವನ್ನೇ ನೀಡುವುದು.

ವಿಷ್ಣುಂ ಪ್ರದಕ್ಷಿಣೀಕುರ್ವನ್ ಸಕೃದಾವರ್ತನೆ ನರಃ।
ತದೇವಾವರ್ತನಂ ತಸ್ಯ ಪುನಃ ನಾವರ್ತತೆ ಭವೇ॥ –ನಾರದೀಯ

ವಿಷ್ಣುವಿಗೆ ಗೋಪುರ ಸಹಿತವಾದ ಗರ್ಭಗೃಹವನ್ನು (ವಿಮಾನ) ಭಕ್ತಿಯಿಂದ ಪ್ರದಕ್ಷಿಣೆಯನ್ನು ಮಾಡಿದವನು ಸಾವಿರ ಅಶ್ವಮೇಧಯಾಗದ ಫಲವನ್ನು ಪಡೆಯುವನು.

ವಿಷ್ಣೋಃ ವಿಮಾನಂ ಯಃ ಕುರ್ಯಾತ್ ಸಕೃದ್ ಭಕ್ತ್ಯಾ ಪ್ರದಕ್ಷಿಣಂ।

30. ಶಿವ ಪ್ರದಕ್ಷಿಣೆ

ಶಂಕರನಿಗೆ ಪೂರ್ವೋಕ್ತ ಪ್ರಮಾಣದಂತೆ ಮೂರು ಪ್ರದಕ್ಷಿಣೆ ಮತ್ತು ಮೂರು ನಮಸ್ಕಾರಗಳು ವಿಹಿತವಾಗಿದೆ.

ಶಿವಭಕ್ತನಾದವನು ದೂರದ ಊರಿನಿಂದ ನಡೆದು ಬಂದು ಫಲಾಶೆ ಇಲ್ಲದೆ ಶಿವಾಂತರ್ಯಾಮಿ ಪ್ರೀತಿಗಾಗಿ ಪ್ರದಕ್ಷಿಣೆಯನ್ನು ಮಾಡಿದರೆ ಅವನು ಎಷ್ಟು ದೂರ ನಡೆದು ಬಂದಿದ್ದನೋ ಅಷ್ಟು ಹೆಜ್ಜೆ ಪ್ರದಕ್ಷಿಣೆಯನ್ನು ಮಾಡಿದ ಫಲವು ಲಭಿಸುವುದು. ನವವಿಧ ಭಕ್ತಿಯಲ್ಲಿ ಹೇಳಿರುವ ಪಾದಸೇವನೆ ಎಂದರೆ ಪಾದಾಭ್ಯಾಂ ಸೇವನಂ ಎಂಬಂತೆ ದೇವಸ್ಥಾನಗಳಿಗೆ ನಡೆದುಕೊಂಡು ಹೋಗುವುದೇ ಆಗಿದೆ.

ದೂರಮಾರ್ಗಾತ್ ಸಮಾಗಮ್ಯ ಫಲಾಶಾರಹಿತೋಽಪಿ ಯಃ।
ಕೃತ್ವಾ ಪ್ರದಕ್ಷಿಣೀಕೃತ್ಯ ಪ್ರಣಮೇತ್ ಶಿವಮುಚ್ಯುತಮ್।
ತಸ್ಮಾ ಮಾರ್ಗಾಪತ್ ಸಮುದ್ಭೂತಾ ಯಾ ಗತಿಶ್ಚಾಪಿ ಕೇಶವ।
ಪ್ರದಕ್ಷಿಣ ಫಲಂ ನೃಣಾಂ ದದಾತ್ಯೇವ ನ ಸಂಶಯಃ॥

ಪ್ರವಾಸ ಮಾಡುತ್ತಿರುವ ಕಾಲದಲ್ಲಿ ದಾರಿಯಲ್ಲಿ ಸಿಗುವ ಭಗವಂತನ ಪ್ರತೀಕ ಹಾಗು ಶಿವನ ಲಿಂಗಾದಿಗಳಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿದರೆ ಹಿಂದೆ ಹೇಳಿದ ಫಲಕ್ಕಿಂತ ಐದು ಪಟ್ಟು ಅಧಿಕವಾಗಿ ಲಭಿಸುತ್ತದೆ

ಪ್ರವಾಸೀ ಪಥಿ ಕೃತ್ವಾ ತು ಶಿವಲಿಂಗೇ ಪ್ರದಕ್ಷಿಣಂ।
ನಮಸ್ಕೃತ್ವಾ ತು ಪೂರ್ವೋಕ್ತಂ ಫಲಂ ಪಂಚಗುಣಂ ಭವೇತ್॥

ಉತ್ಸವದಲ್ಲಿ ಬಲಿಪ್ರದಕ್ಷಿಣೆ

ಉತ್ಸವ ಮೊದಲಾದ ಕಾಲದಲ್ಲಿ ದೇವಾಲಯದ ಸುತ್ತಲೂ ಇರುವ ಬಲಿಪೀಠದ ಮೇಲೆ ಹಾಕಿರುವ ಬಲಿಯನ್ನು ಯಾರು ಪ್ರದಕ್ಷಿಣೆ ಹಾಕುವರೋ ಅವರಿಗೆ ಹೆಜ್ಜೆ ಹೆಜ್ಜೆಗೂ ಅಶ್ವಮೇಧಯಾಗದ ಫಲವನ್ನು ಹೊಂದುವರು.

ಉತ್ಸವೇ ಬಲಿಕಾಲಂ ತು ಯಃ ಕರೋತಿ ಪ್ರದಕ್ಷಿಣಮ್।
ಪದೇ ಪದೇಽಶ್ವಮೇಧಸ್ಯ ಫಲಮಾಪ್ನೋತಿ ಮಾನವಃ॥

31. ಪ್ರದಕ್ಷಿಣ ಸಂಖ್ಯಾಫಲ

ಏಕವಿಂಶತಿ ಸಂಖ್ಯಾತಮುತ್ತಮಂ ತು ಪ್ರದಕ್ಷಿಣಮ್।
ಏಕ ಹಸ್ತನಮಸ್ಕಾರಃ ಹಂತಿ ಪುಣ್ಯಂ ಪುರಾತನಮ್॥
ಶತಂ ಸಹಸ್ರಮಯುತಂ ನಿಯುತಂ ಪ್ರಯುತಂ ತು ವಾ।
ಕೋಟಿಂ ವಾ ಕಾರಯೇದ್ ಯಸ್ತು ಸಿದ್ಧ್ಯರ್ಥಂ ತು ಪ್ರದಕ್ಷಿಣಮ್॥

ಇಪ್ಪತ್ತೊಂದು ಪ್ರದಕ್ಷಿಣೆ ನಮಸ್ಕಾರ ಉತ್ತಮವಾದದ್ದು. ಇದು ಗಣಪತಿಗೆ ಪ್ರಿಯವಾದದ್ದು.

ನೂರು, ಸಾವಿರ, ಹತ್ತು ಸಾವಿರ, ಲಕ್ಷ, ಹತ್ತು ಲಕ್ಷ, ಕೋಟಿ, ಸಂಖ್ಯೆಯಲ್ಲಿ ದೈಹಿಕ ಬಲವನ್ನು ಅನುಸರಿಸಿ ನಮಸ್ಕಾರ - ಪ್ರದಕ್ಷಿಣೆಯನ್ನು ಮಾಡಬಹುದು.

ಏಕಂ ವಿನಾಯಕೇ, ಕುರ್ಯಾತ್, ದ್ವೇ ಸೂರ್ಯೇ ತ್ರೀಣಿ ಶಂಕರೇ।
ಚತ್ವಾರಿ ದೇವ್ಯಾ ವಿಷ್ಣೋಶ್ಚ ಸಪ್ತಾಶ್ವತ್ಥಪ್ರದಕ್ಷಿಣಮ್॥

ವಿನಾಯಕನಿಗೆ ಒಂದರಿಂದ ೨೧ ರವರೆಗೂ ನಮಸ್ಕಾರ-ಪ್ರದಕ್ಷಿಣೆ ವಿಹಿತವಾಗಿದೆ. ಸೂರ್ಯನಿಗೆ ಎರಡು ನಮಸ್ಕಾರ ಎರಡು ಪ್ರದಕ್ಷಿಣೆ ಶಂಕರನಿಗೆ ಮೂರು ಪ್ರದಕ್ಷಿಣೆಗಳು, ಪಾರ್ವತಿ, ಲಕ್ಷ್ಮೀ, ನಾರಾಯಣ ಇವರುಗಳಿಗೆ ನಾಲ್ಕಕ್ಕೆ ಕಡಿಮೆ ಇರದಂತೆ ಪ್ರದಕ್ಷಿಣೆ ನಮಸ್ಕಾರವನ್ನು ಹಾಕಬೇಕು.

ರಾಜನ್ ಪ್ರದಕ್ಷಿಣ್ಯೈಕೇನ ಮುಚ್ಯತೇ ಬ್ರಹ್ಮಹತ್ಯಯಾ।
ದ್ವಿತೀಯೇನಾಧಿಕಾರೀ ಸ್ಯಾತ್ ತೃತೀಯೇನ್ಯೆಂದ್ರ ಸಂಸದಃ॥

ಒಂದು ಪ್ರದಕ್ಷಿಣೆಯಿಂದ ಬ್ರಹ್ಮಹತ್ಯೆಯಿಂದ ಪರಿಹಾರವು ಎರಡನೇ ಪ್ರದಕ್ಷಿಣೆಯಿಂದ ಅಧಿಕಾರ ಸಿದ್ಧಿಯು, ಮೂರನೇ ಪ್ರದಕ್ಷಿಣೆಯಿಂದ ಸ್ವರ್ಗಭೋಗ ಲಭಿಸುವುದು.

32. ಪ್ರದಕ್ಷಿಣೆ ಮಾಡುವ ಕ್ರಮ

ಪ್ರದಕ್ಷಿಣೆಯಲ್ಲಿ ಸವ್ಯ, ಅಪಸವ್ಯ, ಹಾಗು ಸವ್ಯಾಪಸವ್ಯ ಎಂದು ಮೂರು ವಿಧಗಳಿರುತ್ತವೆ. ಸವ್ಯ ಎಂದರೆ ಪ್ರದಕ್ಷಿಣಾಕಾರವಾಗಿ ಎಡದಿಂದ ಬಲಕ್ಕೆ ಚಲಿಸುವುದು. ಅಪಸವ್ಯ ಎಂದರೆ ಅಪ್ರದಕ್ಷಿಣೆ.

ಸವ್ಯಾಪಸವ್ಯ

ಶಿವನ ದೇವಸ್ಥಾನದಲ್ಲಿ ಶಿವನಿಗೆ ಪ್ರದಕ್ಷಿಣೆ ಹಾಕುವಾಗ ಸೋಮಸೂತ್ರವನ್ನು ದಾಟಬಾರದೆಂದು ನಿಯಮವಿರುವುದರಿಂದ ನಂದಿಯಿಂದ ಸೋಮಸೂತ್ರದವರೆಗೂ ಸವ್ಯದಿಂದಲೂ, ನಂತರ ಹಿಂದಕ್ಕೆ ಅಪಸವ್ಯ ಕ್ರಮದಿಂದಲೂ ಬರಬೇಕು. ಈ ಶಿವನ ಪ್ರದಕ್ಷಿಣೆ "ಸವ್ಯಾಪಸವ್ಯ" ಎನ್ನಲಾಗಿದೆ.

ಯಾವತ್ ಸೂತ್ರಾಂತಮೇವಂ ಸ್ಯಾತ್ ವರ್ಜಯೇತ್ತು ಪ್ರದಕ್ಷಿಣಂ।
ಶಂಭೋಃ ಪ್ರದಕ್ಷಿಣಂ ಕುರ್ಯಾತ್ ಸೋಮಸೂತ್ರಂ ನಂಘಯೇತ್॥

ಪ್ರದಕ್ಷಿಣತ್ರಯಂ ಕುರ್ಯಾತ್ ಶಿವಸ್ಯಾಯತನೇ ಬುಧಃ।
ಸವ್ಯಂ ವ್ರಜೇತ್ ತತೋಽಪಸವ್ಯಂ ಪ್ರಣಾಲಂ ನೈವ ಲಂಘಯೇತ್॥

ಸೋಮಸೂತ್ರಾದಿ ನಿಯಮ ಕೇವಲ ಶಿವನಿಗೆ ಮಾತ್ರವೆ ಹೊರತು ವಿಷ್ಣುವಿಗೆ ಅಲ್ಲ ಕೇವಲ ಸವ್ಯ ಪ್ರದಕ್ಷಿಣೆ ಹಾಗು ಯಾವ ದೇವಸ್ಥಾನದಲ್ಲಿ ಮೂರು ಸೋಮಸೂತ್ರಗಳಿರುವವೊ ಅಲ್ಲಿ ಸೋಮಸೂತ್ರಾದಿ ನಿಯಮವಿರುವುದಿಲ್ಲ, ಹಾಗು ವಿಷ್ಣುವಿನ ಮಂದಿರವಿದೆಯೋ ಅಲ್ಲಿಯೂ ಇರುವುದಿಲ್ಲ.

ಸೋಮಸೂತ್ರತ್ರಯಂ ಯತ್ರ ಯತ್ರ ವಾ ವಿಷ್ಣುಮಂದಿರಮ್।
ಅಪಸವ್ಯಂ ನ ಕುರ್ವೀತ ಕುರ್ಯಾದೇವ ಪ್ರದಕ್ಷಿಣಮ್॥

ಆದ್ದರಿಂದಲೇ ನಂಜನಗೂಡು ಕಾಶಿ, ಮುಂತಾದ ಶೈವ ದೇವಸ್ಥಾನಗಳಲ್ಲಿ ಮೂರಕ್ಕಿಂತಲೂ ಹೆಚ್ಚು ಸೋಮಸೂತ್ರಗಳಿರುವುದ-ರಿಂದಲೂ, ವಿಷ್ಣುವಿನ ದೇವಾಲಯವಿರುವುದರಿಂದಲೂ ಸೋಮಸೂತ್ರಾದಿ ನಿಯಮಗಳಿರುವುದಿಲ್ಲ. ಇದರಿಂದ ಯಾವ ಶಿವದೇವಾಲಯದಲ್ಲಿ ಕೇವಲ ಶಿವನ ಲಿಂಗವಿದ್ದು, ಸಾಲಿಗ್ರಾಮಾದಿಗಳಾಗಲೀ ಪಾರ್ವತಿ, ಗಣಪತಿ

ಮೊದಲಾದವರ ದೇವರು ಪ್ರತಿಮೆಗಳು ಇಲ್ಲದೆ ಮೂರು ಸೋಮಸೂತ್ರಗಳಿರುವುದಿಲ್ಲವೋ ಅಲ್ಲಿ ಮಾತ್ರ ''ಅರ್ಧಪ್ರದಕ್ಷಿಣೆ'' ಎಂದು ತಿಳಿಯಬೇಕು.

33. ಅಂಗಪ್ರದಕ್ಷಿಣೆ = (ಉರುಳು ಪ್ರದಕ್ಷಿಣೆ)

ಅಂಗ ಪ್ರದಕ್ಷಿಣೆಯು ಶಾಸ್ತ್ರದಲ್ಲಿ ಅಲ್ಲಲ್ಲಿ ಹೇಳಲಾಗಿದ್ದು ಕೆಲವು ದೇವತೆಗಳನ್ನು ಒಲಿಸಿಕೊಳ್ಳಲು ಅಂಗಪ್ರದಕ್ಷಿಣೆಯನ್ನು ವಿಧಿಸಲಾಗಿದೆ. ಇದನ್ನೇ 'ಉರುಳು ಸೇವೆ'' ಎನ್ನಲಾಗಿದೆ.

ಉರುಳು ಸೇವೆಯನ್ನು ಮಾಡುವುದರಿಂದ ದಂಡಾಕಾರವಾಗಿ ಮಲಗಿ ಕೈಗಳನ್ನು ಅಂಜಲಿ ಬದ್ಧನಾಗಿ ದಂಡನಮಸ್ಕಾರದಂತೆ ಪ್ರದಕ್ಷಿಣೆ ಬರಬೇಕು ಇದು ಶಿವನಿಗೆ ಅತಿಪ್ರಿಯ.

ಅಂಗಪ್ರದಕ್ಷಿಣಂ ಕುರ್ವನ್ ಕೃತ್ವಾ ಭೂಮೌ ನಿಜಾಂ ತನುಂ।
ದಂಡವತ್ ಬಾಹುಯುಗ್ಮೇನ ಸಹ ಬಧ್ವಾ ಕೃತಾಂಜಲಿಃ॥

ಕೃತ್ವಾ ದಂಡನಮಸ್ಕಾರಂ ಶಿವಾಗ್ರೇ ತು ಸಕೃನ್ನರಃ॥

ಉರುಳು ಪ್ರದಕ್ಷಿಣೆಯನ್ನು ಒಂದಾಗಲಿ, ಮೂರಾಗಲೀ, ಐದು, ಏಳು, ಹೀಗೆ ವಿಷಮ ಸಂಖ್ಯೆಯಲ್ಲಿ ಮಾಡಬೇಕು.

ಪ್ರದಕ್ಷಿಣಮಥೋ ಕುರ್ಯಾದ್ ಏಕಂ ವಾ ತ್ರಯಮೇವ ವಾ।
ಪಂಚ ವಾ ಸಪ್ತ ವಾ ಚೈವ ಸರ್ವಪಾಪನಿವೃತ್ತಯೇ॥

ಉರುಳು ಸೇವೆಯಾದ ಮೇಲೆ ಎದ್ದು ಪುನಃ ಪುನಃ ನಮಸ್ಕಾರವನ್ನು ಮಾಡಬೇಕು. ಇದರಿಂದ ಒಂದು ಉರುಳು ಪ್ರದಕ್ಷಿಣೆಗೆ ಸಾವಿರ ಪ್ರದಕ್ಷಿಣೆಯ ಫಲವು ಲಭಿಸುವುದು.

ಉತ್ಥಾಯ ಪ್ರಣತಿಂ ಭೂಯೋ ಭೂಯಃ ಕೃತ್ವಾ ಸಮಾಪಯೇತ್।
ಪ್ರದಕ್ಷಿಣಸಹಸ್ರಂ ಸ್ಯಾದ್ ಏಕಮೇವಂ ಪ್ರದಕ್ಷಿಣಮ್॥

34. ಸ್ತ್ರೀಯರು ಉರುಳು ಸೇವೆ ಮಾಡಬಾರದು

ಕೆಲವು ದೇವಾಲಯಗಳಲ್ಲಿ ತಮ್ಮ ಹರಕೆ ಸಲ್ಲಿಸಲೆಂದು ಸ್ತ್ರೀಯರು ಉರುಳು ಸೇವೆಯನ್ನು ಮಾಡುವ ಪದ್ಧತಿ ಇದೆ. ಆದರೆ ಸ್ತ್ರೀಯರಿಗೆ ಪಂಚಾಂಗ ನಮಸ್ಕಾರ ಅಥವಾ ಎದೆಯನ್ನು ಬಿಟ್ಟು ಸಪ್ತಾಂಗ ನಮಸ್ಕಾರ

ಶಾಸ್ತ್ರಗಳಲ್ಲಿ ವಿಹಿತವಾಗಿದೆ ಹೊರತು ಸಾಷ್ಟಾಂಗ ಪ್ರಣಾಮವು ವಿಹಿತವಾಗಿಲ್ಲ. ಉರುಳು ಸೇವೆಯೂ ಕೂಡ ಸಾಷ್ಟಾಂಗ ಪ್ರಣಾಮದ ವಿಶೇಷರೂಪವೆ ಆಗಿದೆ.

ಭೂಮಿಯು, ಬ್ರಾಹ್ಮಣನ ಗುದ, ಶಂಖ, ಸ್ತ್ರೀಯರ ಸ್ತನ ಮಂಡಲ, ರೇತಸ್ಸು, ಗಂಟು ಬಿಚ್ಚದಿರುವ ದರ್ಭೆ ಇವುಗಳನ್ನು ಸಹಿಸಲಾರಳು ಎಂದೇ ಸ್ತ್ರೀಯರು ಎದೆಯನ್ನು ಭೂಮಿಗೆ ತಗುಲಿಸಬಾರದು.

"ವಿಪ್ರಸ್ಯ ಗುದಂ ಶಂಖಂ ತರುಣೀಸ್ತನಮಂಡಲಂ।
ರೇತಃ ಪವಿತ್ರಗ್ರಂಥಿಂ ನ ಭೂಃ ಧಾರಯಿತುಂ ಕ್ಷಮಾ"॥

ನಮಸ್ಕಾರ ಪ್ರದಕ್ಷಿಣೆ ಸ್ಥಾನ ಫಲ

ಗರ್ಭಗೇಹೇ ನ ಕಸ್ಯೋಕ್ತಂ ದೀಕ್ಷಿತಸ್ಯೈವ ಬಾಹ್ಯಕೇ।
ಪ್ರದಕ್ಷಣಂ ನೃಣಾಂ ನೋಕ್ತಂ ಅಂತಮಂಡಲತಃ ಸದಾ॥

ಗರ್ಭಗುಡಿಯಲ್ಲಿ ಯಾರು ನಮಸ್ಕರಿಸಬಾರದು, ಅರ್ಚಕರು ದೀಕ್ಷಿತರು ಮಾತ್ರ ಗರ್ಭಗುಡಿಯ ಹೊರಗಿನ ಪ್ರಾಕಾರದಲ್ಲಿ ನಮಸ್ಕರಿಸಬಹುದು, ಅರ್ಚಕರು ದೀಕ್ಷಿತರು ಮಾತ್ರ ಗರ್ಭಗುಡಿಯ ಹೊರಗಿನ ಪ್ರಾಕಾರದಲ್ಲಿ ನಮಸ್ಕರಿಸಬಹುದು. ಪ್ರದಕ್ಷಿಣೆಯನ್ನು ಬರಬಹುದು.

ಇತರರು ಯಾರು ಗರ್ಭಗುಡಿಯ ಹೊರಗಿನ ಪ್ರಾಕಾರದಲ್ಲಿ ಪ್ರದಕ್ಷಿಣೆ ಬರಬಾರದು, ಅದರ ಮುಂದಿನ ಪ್ರಾಕಾರದಲ್ಲಿ ಇತರರು ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಬಹುದು.

ಅಂತಃ ಸಾರಕೃತಂ ಪ್ರೋಕ್ತಂ ಫಲಮೇಕಂ ಪ್ರದಕ್ಷಣಮ್।
ತ್ರಿಗುಣಂ ಮಧ್ಯಹಾರೇ ತು ಮರ್ಯಾದಾಯಂ ಚತುರ್ಗುಣಮ್।
ಮಹಾಮರ್ಯಾದಿಕಂ ಚೈವ ಕೃತಂ ಪಂಚಗುಣಂ ಭವೇತ್।
ಕ್ಷೇತ್ರಾವಧಿ ಕೃತಂ ಬಾಹ್ಯೇ ಭವೇಚ್ಛತಗುಣಂ ನೃಣಾಮ್

ಅರ್ಚಕರು, ದೀಕ್ಷಿತರು ಇವರಿಂದ ಭಿನ್ನರಾದ ಇತರ ವ್ಯಕ್ತಿಗಳು ಗರ್ಭಗುಡಿಯ ಹೊರಗಿನ ಪ್ರಾಕಾರದಲ್ಲಿ ಪ್ರದಕ್ಷಿಣೆಯನ್ನು ಹಾಕಿದರೆ ಒಂದೇ ಪ್ರದಕ್ಷಿಣೆಯ ಫಲವು. ಗರ್ಭಗುಡಿಯ ಹಾಗು ಹೊರಗಿನ ಪ್ರಾಕಾರ ಇವುಗಳ ಮಧ್ಯ ಪ್ರಾಕಾರದಲ್ಲಿ ಪ್ರದಕ್ಷಿಣೆ ಬಂದರೆ ಮೂರುಪಟ್ಟು ಫಲ. ನಾಲ್ಕನೇ ಪ್ರಾಕಾರದಲ್ಲಿ ಪ್ರದಕ್ಷಿಣೆಯನ್ನು ಮಾಡಿದರೆ ನಾಲ್ಕು ಪಟ್ಟು,

ದೇವಸ್ಥಾನದ ಐದನೆಯ ಪ್ರಾಕಾರದಲ್ಲಿ ಮಾಡಿದರೆ ಐದು ಪಟ್ಟು, ದೇವಸ್ಥಾನ ಹೊರಗಡೆ ಇರುವ ಪ್ರಾಕಾರವನ್ನು ಪ್ರದಕ್ಷಿಣೆ ಬಂದರೆ ಒಂದು ಪ್ರದಕ್ಷಿಣೆಗೆ ನೂರು ಪ್ರದಕ್ಷಿಣೆಯ ಫಲವು.

ತ್ರೀಣಿ ಶಂಕರೆ ಶಿವನಿಗೆ ಮೂರು ಪ್ರದಕ್ಷಿಣೆ

''ಪ್ರದಕ್ಷಿಣತ್ರಯಂ ಕುರ್ಯಾತ್ ಶಿವಸ್ಯಾಯತನೇ ಬುಧಃ'' ಆದರೆ ಬಹಳ ಪ್ರಮಾಣವಾಕ್ಯಗಳು ಶಿವನಿಗೆ ಅರ್ಧ ಪ್ರದಕ್ಷಿಣೆ ಎಂದಿವೆ. ರುದ್ರ ದೇವರಿಗೆ ಪ್ರದಕ್ಷಿಣೆ ಬರುವಾಗ ಸೋಮಸೂತ್ರದ (ನೀರು ಬೀಳುವ ಸ್ಥಳ) ವರೆಗೂ ಪ್ರದಕ್ಷಿಣೆ ಮಾಡಿ ಪುನಃ ಹಿಂದಕ್ಕೆ ಮರಳಿ ಬರಬೇಕು.

ಶಿವಂ ಪ್ರದಕ್ಷಿಣೀ ಕುರ್ವನ್ ಸೋಮಸೂತ್ರಂ ಲಂಘಯೇತ್।

ರುದ್ರದೇವರಿಗೆ ಪೂರ್ಣಪ್ರದಕ್ಷಿಣೆ ಮಾಡಿಸಿಕೊಳ್ಳುವುದ ಇಷ್ಟವಿಲ್ಲ. ಭಿನ್ನಭಕ್ತರಲ್ಲಿ ಶ್ರೇಷ್ಠರಾದ ರುದ್ರದೇವರು ಭಗವಂತನೊಬ್ಬನೇ ಪೂರ್ಣ, ಉಳಿದವರೆಲ್ಲರೂ ಅಪೂರ್ಣರೆ (ನಾನೂ ಸಹ) ಎಂದು ಅರ್ಧಪ್ರದಕ್ಷಿಣೆಯ ಮೂಲಕ ಹೊರಗೆಡಹಿದ್ದಾರೆ.

ಶಂಭುವಿಗೆ ಪ್ರದಕ್ಷಿಣೆ ಬರುವಾಗ ಸೋಮಸೂತ್ರವನ್ನು ದಾಟಬಾರದು. ದಾಟಿದರೆ ಒಂದು ಪ್ರದಕ್ಷಿಣೆಗೆ ಒಂದೇ ಪ್ರದಕ್ಷಿಣೆಯ ಫಲ, ಆದರೆ ಹಿಂದಕ್ಕೆ ಮರಳಿ ಹೋದರೆ ಸೋಮಸೂತ್ರದಿಂದ ಹಿಂದಕ್ಕೆ ಇಟ್ಟ ಒಂದೊಂದು ಹೆಜ್ಜೆಗೂ ಮುವತ್ತು ಸಾವಿರ ಪ್ರದಕ್ಷಿಣೆಯ ಫಲ.

ಶಂಭೋಃ ಪ್ರದಕ್ಷಿಣಂ ಕುರ್ಯಾತ್।
ಸೋಮಸೂತ್ರಂ ನ ಲಂಘಯೇತ್।
ಲಂಘನಾತ್ ಏಕಮೇಕಂ ಸ್ಯಾತ್।
ಅಲಂಘನೇಽಯುತತ್ರಯಮ್॥

ಮತ್ತೊಂದು ಪ್ರಮಾಣದಲ್ಲೂ ಒಂದು ಪ್ರದಕ್ಷಿಣೆ ಚಂಡಿಗೆ, ಸೂರ್ಯನಿಗೆ ಏಳು, ವಿನಾಯಕನಿಗೆ ಮೂರು ವಿಷ್ಣುವಿಗೆ ನಾಲ್ಕು, ಶಿವನಿಗೆ ಅರ್ಧಪ್ರದಕ್ಷಿಣೆ.

ಏಕಾ ಚಂಡ್ಯಾಂ, ರವೇಃ ತಿಸ್ರೋದದ್ಯಾತ್ ವಿನಾಯಕೇ।
ಚತಸ್ರೋ ವಿಷ್ಣವೇ ದೇಯಾಃ ಶಿವಸ್ಯಾರ್ಧಪ್ರದಕ್ಷಿಣಾ॥

ಈ ಮೇಲಿನ ಪ್ರಮಾಣಗಳಿಂದ ಶಿವನಿಗೆ ಅರ್ಧಪ್ರದಕ್ಷಿಣೆ ಎಂದು ಸಿದ್ಧವಾಯಿತು. ಹಾಗಾದರೆ ಮೂರು ಪ್ರದಕ್ಷಿಣೆ ಹೇಗೆ? ಎಂದರೆ ಪ್ರದಕ್ಷಿಣತ್ರಯ ಎಂದರೆ ಮೂರು ಅರ್ಧಪ್ರದಕ್ಷಿಣೆ ಎಂದರ್ಥ.

ಮೂರು ಪ್ರದಕ್ಷಿಣೆ

ಶಿವನ ದೇವಾಲಯದಲ್ಲಿ ಸಾಲಿಗ್ರಾಮವು ಇಲ್ಲದಿದ್ದರೆ ಅಲ್ಲಿ ಶಿವನಿಗಾಗಿ ಕೇವಲ ಅರ್ಧಪ್ರದಕ್ಷಿಣೆಯನ್ನು ಮಾಡಬೇಕು. ಶಿವನ ಮೇಲೆ ಸಾಲಿಗ್ರಾಮವಿದ್ದರೆ ಅಲ್ಲಿ ಮೂರು ನಮಸ್ಕಾರಗಳಿಗೆ ಕಡಿಮೆಯಾಗದಂತೆ ಎಷ್ಟು ಬೇಕಾದರೂ ಹಾಕಬಹುದು. ಪ್ರದಕ್ಷಿಣೆಯನ್ನೂ ಮೂರು, ಹದಿನೈದು, ಎಂಟು ಹನ್ನೆರಡು ಇಪ್ಪತ್ತು ಹೀಗೆ ಯಥಾಶಕ್ತಿಯಾಗಿ ಪ್ರದಕ್ಷಿಣೆಯನ್ನು ಹಾಕಬಹುದು., ಒಂದನ್ನು ಮಾತ್ರ ಹಾಕಬಾರದು.

ಚತಸ್ರಸ್ತು ವಿಷ್ಣವೇ ದದ್ಯಾತ್ ಶಿವೇ ತ್ರಿಸ್ರಃ ಪ್ರದಕ್ಷಿಣಾಃ।
ಪ್ರದಕ್ಷಿಣತ್ರಯಂ ಕುರ್ಯಾತ್ ತಥಾ ಪಂಚದಶಾಥ ವಾ॥
ಅಷ್ಟೌ ದ್ವಾದಶ ವಾ ಕಾರ್ಯಾ ಹ್ಯಧಿಕಾ ವಾಪಿ ಶಕ್ತಿತಃ॥
ನೈಕಾಂ ಪ್ರದಕ್ಷಿಣಾಂ ಕುರ್ಯಾತ್ ಸಾಂಬಸ್ಯ ಪರಮಾತ್ಮನಃ॥

ಸಾಲಿಗ್ರಾಮವಿರುವ ಶಿವಲಿಂಗಕ್ಕೆ ಒಂದು ಪ್ರದಕ್ಷಿಣೆಯನ್ನು ಹಾಕಿದರೆ ಪುಣ್ಯವು ಹ್ರಾಸವಾಗುತ್ತದೆ.

ಏಕಂ ಪ್ರದಕ್ಷಿಣಂ ಕೃತ್ವಾ ಶಂಭೋಃ ಪುಣ್ಯಾತ್ ಪ್ರಹೀಯತೇ॥

ಮೂರು ಅರ್ಧಪ್ರದಕ್ಷಿಣೆಗಳು

ಶಿವನ ದೇವಾಲಯದಲ್ಲಿ ಮುಂಭಾಗದಲ್ಲಿ ಶಿವನ ವಾಹನವಾದ ನಂದಿಯು ಇರುತ್ತದೆ. ಅರ್ಧಪ್ರದಕ್ಷಿಣೆಯ ಸ್ಥಳದಲ್ಲಿ ಚಂಡ ಎಂಬ ಶಿವಗಣದವನೊಬ್ಬನಿರುವನು. ಚಂಡನ ಸಮೀಪವೆ, (ಸಾಮಾನ್ಯವಾಗಿ) ಎದುರಿಗೆ ಸೋಮ ಸೂತ್ರವಿರುತ್ತದೆ. ನಂದಿಯಿರುವ ಸ್ಥಳದಿಂದ ಪ್ರದಕ್ಷಿಣೆಯು ಪ್ರಾರಂಭವಾಗುತ್ತದೆ.

ನಂದಿಯಿರುವ ಸ್ಥಳದಿಂದ ಚಂಡನಿರುವ ಗುಡಿಯವರೆಗೆ ಅವನಿಗೂ ಸೇರಿದಂತೆ ಪ್ರದಕ್ಷಿಣೆ ಹಾಕಿ, ಪುನಃ ಹಿಂದಕ್ಕೆ ನಂದಿಯಿರುವ ಸ್ಥಳಕ್ಕೆ ಬರುವುದು ಒಂದು ಅರ್ಧ ಪ್ರದಕ್ಷಿಣೆ.

ಪುನಃ ನಂದಿಯಿಂದ ಪ್ರಾರಂಭಿಸಿ ಚಂಡನನ್ನು ಪ್ರದಕ್ಷಿಣೆ ಹಾಕಿ ಸೋಮಸೂತ್ರಕ್ಕೆ ಪುನಃ ಚಂಡನ ಪ್ರದಕ್ಷಿಣೆ ಹಾಕಿ ಪುನಃ ನಂದಿಯನ್ನು ಹಿಂದಕ್ಕೆ ಸೇರುವುದು ಮೂರನೆಯ ಅರ್ಧಪ್ರದಕ್ಷಿಣೆಯಾಗಿದೆ.

ವೃಷಂ ಚಂಡಂ ವೃಷಂ ಸೋಮಸೂತ್ರಂ ಪುನರ್ವೃಷಂ।
ಚಂಡಂ ಚ ಸೋಮಸೂತ್ರಂ ಚ ಪುನಶ್ಚಂಡಂ ಪುನರ್ವೃಷಂ॥

ಆಗ್ನೇಯ ಪುರಾಣದ ಅಭಿಪ್ರಾಯವೂ ಇದೇ ಆಗಿದೆ. ಸವ್ಯದಿಂದ ಅಪಸವ್ಯಕ್ಕೆ ಹೋಗಬೇಕು. ಪ್ರನಾಲವನ್ನು (ಸೋಮಸೂತ್ರವನ್ನು) ದಾಟಬಾರದು ಎಂದು.

ಪ್ರದಕ್ಷಿಣತ್ರಯಂ ಕುರ್ಯಾತ್ ಶಿವಸ್ಯಾಯತನೇ ಬುಧಃ।
ಸವ್ಯಂ ವ್ರಜೇತ್ ತತೋऽಪಸವ್ಯಂ ಪ್ರನಾಲಂ ನೈವ ಲಂಘಯೇತ್॥

ಗೃಹಸ್ಥ ಯತಿ, ಬ್ರಹ್ಮಚಾರಿಗಳ ಶಿವಪ್ರದಕ್ಷಿಣೆ

ಗೃಹಸ್ಥನು ಸವ್ಯದಿಂದ ಪ್ರಾರಂಭಿಸಿ ತನಗೆ ಎಡದಿಂದ ಪ್ರಾರಂಭಿಸಿ ಅಪಸವ್ಯರಾಗಿ ಹಿಂದಿರುಗುವುದು ಎಂದರೆ ಸವಾಪಸವ್ಯ, ಯತಿಗಳಾದರೂ ಅಪಸವ್ಯದಿಂದ ಪ್ರಾರಂಭಿಸಿ ಪ್ರದಕ್ಷಿಣೆ. ಬ್ರಹ್ಮಚಾರಿಗಳಾದರೂ ಸವ್ಯದಿಂದ ಪ್ರಾರಂಭಿಸಿ ಪ್ರದಕ್ಷಿಣೆ ಮಾಡುವುದು.

ಶಿವ ಪ್ರದಕ್ಷಿಣೇ ಮಂತ್ರೀ ಅರ್ಧಚಂದ್ರ ಕ್ರಮೇಣ ತು।
ಸವ್ಯಾಪಸವ್ಯಕ್ರಮೇಣೈವ ಸೋಮಸೂತ್ರಂ ನ ಲಂಘಯೇತ್।
ಅಪಸವ್ಯಂ ಯತೀನಾಂ ತು ಸವ್ಯಂ ತು ಬ್ರಹ್ಮಚಾರಿಣಾಂ॥
ಸವ್ಯಾಪಸವ್ಯಂ ಗೃಹಿಣಾಂ ಏವಂ ಶಂಭೋಃ ಪ್ರದಕ್ಷಿಣಾ॥

ಕಾಶಿ ವಿಶ್ವನಾಥ ಸನ್ನಿಧಿಯಲ್ಲಿ ಪ್ರದಕ್ಷಿಣೆ

ಕಾಶಿಯ ವಿಶ್ವೇಶ್ವರನ ಸನ್ನಿಧಿಯಲ್ಲಿ ಸೋಮ ಸೂತ್ರಾದಿ ನಿಯಮಗಳು ಇಲ್ಲ. ಅಲ್ಲಿ ಕೇಶವಾದಿಗಳಿಗೆ ಹಾಕುವಂತೆ ಎಷ್ಟು ಪ್ರದಕ್ಷಿಣೆಯಾದರೂ ಪರವಾಗಿಲ್ಲ ಹಾಗೂ ಅರ್ಧಚಂದ್ರ ಪ್ರದಕ್ಷಿಣೆ ಮತ್ತು ಸೋಮಸೂತ್ರ ನಿಯಮಗಳಿಲ್ಲ.

"ಸೋಮಸೂತ್ರಾದಿ ನಿಯಮೋ ನಾಸ್ತಿ ವಿಶ್ವೇಶ್ವರಾಲಯೇ"

ಏಕೆಂದರೆ ಕಾಶಿಯು ಬಿಂದುಮಾಧವನ ಸ್ಥಾನವಾಗಿದೆ. "ಕಾಶೀ ಎಂದರೆ ಕಾಶತೇ ಪ್ರಕಾಶತೇ ಪರಂಬ್ರಹ್ಮ ಅಸ್ಯಾಂ" ಎಂಬಂತೆ ಪರಬ್ರಹ್ಮನು ನಿತ್ಯವು ಪ್ರಕಾಶಿಸುತ್ತಿರುವ ಕ್ಷೇತ್ರವಾಗಿದೆ ಕಾಶಿಯಲ್ಲಿ ಎಷ್ಟು ಬೇಕಾದರೂ ನಮಸ್ಕರಿಸಬಹುದು.

ಹಾಗೆಯೇ ವಿಷ್ಣು ಸಾನಿಧ್ಯವಿರುವ ಸಾಲಿಗ್ರಾಮ ಶಿಲೆಗಳನ್ನು ಲಿಂಗದ ತಲೆಯ ಮೇಲಿಟ್ಟು ಪೂಜೆ ನಡೆಯುತ್ತಿರುವ ಸ್ಥಳಗಳಲ್ಲಿಯೂ ಸೋಮ ಸೂತ್ರಾದಿ ನಿಯಮವಿಲ್ಲ.

ಧರ್ಮಸ್ಥಳ ಮುಂತಾದ ಕ್ಷೇತ್ರಗಳಲ್ಲಿ ವಾದಿರಾಜರು ರುದ್ರದೇವರನ್ನು ಪ್ರತಿಷ್ಠಾಪಿಸಿ ಆ ನೈವೇದ್ಯ ಸ್ವೀಕಾರ ದೋಷವಲ್ಲವೆಂದಿದ್ದಾರೆ. ಕಾರಣ ಪ್ರತಿಷ್ಠಾಪಿಸುವಾಗ ಲಿಂಗದ ಮೇಲೆ ನರಸಿಂಹದೇವರ ಸಾಲಿಗ್ರಾಮವನ್ನು ಇಟ್ಟಿರುವರು. ಧರ್ಮಸ್ಥಳ, ಕಡೇ ಶಿವಾಲಯ, ಉಡುಪಿಯ ಅನಂತೇಶ್ವರ, ಚಂದ್ರಮೌಳೀಶ್ವರ ದೇವಸ್ಥಾನಗಳಲ್ಲೂ ಸೋಮಸೂತ್ರ ನಿಯಮವಿರುವುದಿಲ್ಲ. ಅಲ್ಲಿ ಸಾಲಿಗ್ರಾಮಗಳನ್ನಿಟ್ಟು ಪೂಜೆ ನಡೆಯುತ್ತದೆ. ಸಾಲಿಗ್ರಾಮವಿಲ್ಲದಿರುವ ಕಡೆಗಳಲ್ಲಿ ಶಿವನ ಪ್ರಸಾದಾದಿಗಳನ್ನು ತಿನ್ನಬಾರದು ಎಂದು ತಾತ್ಪರ್ಯ.

ನಿರ್ಮಾಲ್ಯವನ್ನು ಪತ್ರ, ಪುಷ್ಪ, ಫಲ, ಜಲ ಇವುಗಳನ್ನು ಶಿವಲಿಂಗದ ಮೇಲೆ ಬಿದ್ದನಂತರ ಸ್ವೀಕರಿಸಬಾರದು. ಆದರೆ ಸಾಲಿಗ್ರಾಮದ ಮೇಲೆ ಬಿದ್ದಾಗ ಪಾವನವಾಗಿ ಭಕ್ಷ್ಯಯೋಗ್ಯವಾಗುತ್ತದೆ.

ಅಭಕ್ಷ್ಯಂ ಶಿವನಿರ್ಮಾಲ್ಯಂ ಪತ್ರಂ ಪುಷ್ಪಂ ಫಲಂ ಜಲಂ।
ಸಾಲಿಗ್ರಾಮ ಶಿಲಾಯೋಗಾತ್ ಪಾವನಂ ತದ್ಭವೇತ್ ಸದಾ॥- ವರಾಹ

ಸ್ತ್ರೀಶೂದ್ರರ ರುದ್ರಾರ್ಚನಾ ಕ್ರಮ

ಸ್ತ್ರೀಶೂದ್ರರು ನಮಃ ಶಿವಾಯ ಎಂದು ಉಚ್ಚರಿಸಬೇಕೇ ವಿನಹ ಓಂ ನಮಃ ಶಿವಾಯ ಎಂದು ಪ್ರಣವಸಹಿತ ಉಚ್ಚರಿಸಬಾರದು.

ನಮೋಂತೇನ ಶಿವೇನೈವ ಸ್ತ್ರೀಣಾಂ ಪೂಜಾ ವಿಧೀಯತೇ।

ಶೂದ್ರರು ಸ್ತ್ರೀಯಂತೆಯೇ ನಮಃ ಶಿವಾಯ ಅಥವಾ ಶಿವಾಯ ನಮಃ ಎಂದು ಮಾತ್ರ ಹೇಳಬೇಕು.

ನೃಸಿಂಹತಾಪನೀಯದಲ್ಲಿ ಗಾಯತ್ರಿ, ಪ್ರಣವ, ಯಜುರ್ವೇದಾದಿಗಲು ಲಕ್ಷ್ಮೀ ಸೂಕ್ತ ಇವುಗಳನ್ನು ಶೂದ್ರ ಮತ್ತು ಸ್ತ್ರೀಯರು ಹೇಳಬಾರದು. ಹೇಳಿದರೆ ಅಧಃಪತನವಾಗುತ್ತದೆ ಎನ್ನಲಾಗಿದೆ.

ಸಾವಿತ್ರೀಂ ಪ್ರಣವಂ ಯಜುರ್ಲಕ್ಷ್ಮೀ ಶೂದ್ರಯೋರ್ನೇಚ್ಛಂತಿ।

ಶೂದ್ರಾದಿಗಳಿಗೆ ಮಂತ್ರವನ್ನು ಉಪದೇಶಿಸಿದವನು ಶೂದ್ರನಾಗುವನು, ಶೂದ್ರನು ನರಕಭಾಗಿಯಾಗುವನು.

ಸ್ವಾಹಾಪ್ರಣವಸಂಯುಕ್ತಂ ಶೂದ್ರೇ ಮಂತ್ರಂ ದದದ್ ದ್ವಿಜಃ।
ಶೂದ್ರೋ ನಿರಯಮಾಪ್ನೋತಿ ಬ್ರಾಹ್ಮಣಃ ಶೂದ್ರತಾಮಿಯಾತ್॥

ಶಿವನಿರ್ಮಾಲ್ಯ ನಿಷೇಧದ ಅಂತರ್ಯ

ಶಿವನು ಪಾರ್ವತಿಗೆ ಹೇಳುತ್ತಾನೆ. ಪಾರ್ವತಿ ಹಿಂದೆ ಸಮುದ್ರಮಂಥನ ಕಾಲದಲ್ಲಿ ವಿಷವೂ ಉದ್ಭೂತವಾಯಿತು. ಬ್ರಹ್ಮಾಂಡನಾಶಕರವಾದ ವಿಷವನ್ನು ನಾನು ಲೋಕಹಿತಕ್ಕಾಗಿ ಪಾನಮಾಡಿದೆ. ಆ ವಿಷವು ಕಂಠದಲ್ಲೇ ಉಳಿಯಿತು. ಅಂದಿನಿಂದ ನನ್ನ ಮುಖ ಬೆಂಕಿಯಂತೆ ಉರಿಯುತ್ತದೆ. ಪತ್ರವಾಗಲೀ, ಪುಷ್ಪವಾಗಲೀ, ಪುಷ್ಪವಾಗಲೀ ಫಲವಾಗಲಿ ಅಥವಾ ಬೇರೆ ಉಪಚಾರವನ್ನಾಗಲೀ ನನ್ನ ಲಿಂಗದ ಮೇಲೆ ಹಾಕಿದಾಗ ಅದು ಪೂರ್ಣ ವಿಷಯುವಾಗುತ್ತದೆ. ಆದ್ದರಿಂದ ನನ್ನ ಮೇಲೆ ಹಾಕಿದ ತೀರ್ಥ ಪಂಚಾಮೃತಾದಿಗಳು ವಿಷವಾಗುವುದರಲ್ಲಿ ಸಂಶಯವಿಲ್ಲ.

ಆದರೆ ವಿಷ್ಣು ಸೂಕ್ತದಿಂದ ನನ್ನ ಮೇಲೆ ಸಾಲಿಗ್ರಾವವಿಟ್ಟು ಸಾಲಿಗ್ರಾಮಕ್ಕೆ ಅಭಿಷೇಕವನ್ನು ಮಾಡಿದ ನಂತರ ನನ್ನ ನಿರ್ಮಾಲ್ಯ ಸ್ವೀಕಾರಯೋಗ್ಯ- ವಾಗುತ್ತದೆ. ಎಂದು ಶಿವನೇ ತಿಳಿಸಿರುವನು.

ಕ್ಷೀರೋದಮಥನೇ ದೇವಿ ಉತ್ಥಿತಂ ಗರಲಂ ಮಹತ್।
ತತಃ ಕರತಲೀಕೃತ್ಯ ತದ್ವಿಷಂ ಪರಮೇಶ್ವರಿ॥
ನಿಪೀತಂ ತದ್ವಿಷಂ ಸೂಕ್ಷ್ಮಂ ತೀಕ್ಷ್ಣಂ ಬ್ರಹ್ಮಾಂಡನಾಶನಂ।
ತದ್ವಿಷಂ ಕಂಠದೇಶೇ ತು ಸ್ಥಿತಂ ಹಿ ಸರ್ವದಾ ಮಮ।
ತತಃ ಪ್ರಭೃತಿ ದೇವೇಶಿ ಮುಖಂ ಜ್ವಾಲಾಯತೇ ಸದಾ।
ಪತ್ರಂ ವಾ ಯದಿ ವಾ ಪುಷ್ಪಂ ಫಲಂ ವಾ ವರವರ್ಣಿನಿ।
ಅನ್ನಂ ಹಿ ಪರಮೇಶಾನಿ ಉಪಚಾರಂ ಮನೋಹರಮ್।
ಅಗ್ರಾಹ್ಯಂ ತತ್ತು ನಿರ್ಮಾಲ್ಯಂ ಅತ ಏವ ವರಾನನೇ॥

ಸ್ಕಾಂದದಲ್ಲಿ

ನಿರ್ಮಾಲ್ಯಂ ಯೋ ಹಿ ಮದಕ್ತ್ಯಾ ಶಿರಸಾ ಧಾರಯಿಷ್ಯತಿ।
ಅಶುಚಿರ್ಭಿನ್ನಮರ್ಯಾದೋ ನರಃ ಪಾಪಸಮನ್ವಿತಃ।
ನರಕೇ ಪಚ್ಯತೇ ಘೋರೇ ತಿರ್ಯಗ್ಯೋನೌ ಚ ಜಾಯತೇ॥

ರುದ್ರನಿರ್ಮಾಲ್ಯವನ್ನು ಸ್ಪರ್ಶ ಮಾಡಿದರೆ ಸಚೇಲಸ್ನಾನವನ್ನು ಮಾಡಬೇಕು.

"ಸ್ಪೃಷ್ಟ್ವಾ ರುದ್ರಸ್ಯ ನಿರ್ಮಾಲ್ಯಂ ಸವಾಸಾ ಆಪ್ಲುತಃ ಶುಚಿಃ।

ಕಾಲಿಕಾಪುರಾಣವಾದರೂ ನಿರ್ಮಾಲ್ಯವನ್ನು ಸ್ವೀಕರಿಸಲೇಬಾರದು ಎಂದಿದೆ. ಆದರೆ ಸಾಲಿಗ್ರಾಮ ಶಿಲಾಸ್ಪರ್ಶದಿಂದ ಎಲ್ಲವೂ ಪವಿತ್ರವಾಗುತ್ತದೆ. ಎಂದಿದೆ.

ಅಗ್ರಾಹ್ಯಂ ಶಿವನಿರ್ಮಾಲ್ಯಂ ಪತ್ರಂ ಪುಷ್ಪಂ ಫಲಂ ಜಲಂ।
ಶಾಲಿಗ್ರಾಮಶಿಲಾ ಸ್ಪರ್ಶಾತ್ ಸರ್ವಂ ಯಾತಿ ಪವಿತ್ರತಾಂ।

ಶ್ರೀಭಗದತ್ತನು ಮೇಲಿನ ವಾಕ್ಯಗಳನ್ನು ವಿಮರ್ಶಿಸುತ್ತಾ ಅನುಪನೀತನು ನಿರ್ಮಲ್ಯವನ್ನು ಮುಟ್ಟಿದರೆ ಸಚೇಲ ಸ್ನಾನ ಹೊರತು ಉಪನೀತನಲ್ಲ ಹಾಗೆಯೇ ವೈಷ್ಣವನು ಮಾತ್ರ ಶಿವ ನಿರ್ಮಾಲ್ಯವನ್ನು ಸ್ವೀಕರಿಸಬಾರದು ಶಿವಭಕ್ತರು ಸ್ವೀಕರಿಸಿದರೆ ದೋಷವಿಲ್ಲ. ಏಕೆಂದರೆ ಯಾರು ಯಾವ ದೇವರನ್ನು ಪೂಜಿಸುವವರೋ ಅವರು ಆ ನೈವೇದ್ಯವನ್ನು ಸ್ವೀಕರಿಸಲೇ ಬೇಕು ತಾನೆ.

ಯೋ ಯದ್ದೇವಾರ್ಚನರತಃ ಸಃ ತನ್ನೈವೇದ್ಯಭಕ್ಷಕಃ।
ಕೇವಲಂ ಸೌರಶೈವೇ ತು ವೈಷ್ಣವೋ ನೈ ವ ಭಕ್ಷಯೇತ್॥ - ತಿಥಿತತ್ವ

ಶಿವಲಿಂಗದ ಮೇಲಿರುವ ಸಾಲಿಗ್ರಾಮರೂಪಿ ವಿಷ್ಣುವಿಗೆ ನೈವೇದ್ಯ ಮಾಡಿದಾಗ ನನ್ನ ನೈವೇದ್ಯ ಸ್ವೀಕರಿಸಬಹುದು. ವಿಷ್ಣುಮಂತ್ರದಿಂದಲೇ ನೈವೇದ್ಯ.

ಪ್ರಥಮಂ ವಿಷ್ಣವೇ ದತ್ವಾ ವಿಷ್ಣು ಮಂತ್ರೇಣ ಪಾರ್ವತಿ।
ನಿರ್ಮಾಲ್ಯಂ ಮಮ ದೇವೇಶಿ ವಿಷ್ಣೋಃ ಗ್ರಾಹ್ಯಂ ವರಾನನೇ॥

ರುದ್ರದೇವನು ಮತ್ತು ಅವನ ಲಿಂಗವು ಅಭಿನ್ನವೆಂದೆ ಪುರಾಣ ತಿಳಿಸಿದೆ.

ಪೂಜೆಯಾದ ನಂತರ ನಮಸ್ಕಾರ ಮಾಡಲೇಬೇಕು

ಪೂಜಕನು ಪೂಜಾನಂತರ ಆ ದೇವತೆಗೆ ಪ್ರದಕ್ಷಿಣ-ನಮಸ್ಕಾರಗಳನ್ನು ಹಾಕಲೇಬೇಕು. ಪ್ರದಕ್ಷಿಣೆ - ನಮಸ್ಕಾರಗಳನ್ನು ಮಾಡದೆ ಇರುವವನು ಡಾಂಬಿಕನೆನಿಸುವನು. ಆ ಪೂಜೆಯೂ ನಿಷ್ಫಲವಾಗುವುದು.

ಪೂಜಾಂ ಕೃತ್ವಾ ತು ದೇವಸ್ಯ ನ ಕರೋತಿ ಪ್ರದಕ್ಷಿಣಮ್।
ಸಾ ಪೂಜಾ ನಿಷ್ಫಲಾ ತಸ್ಯ ಪೂಜಕಃ ಸ ಚ ದಾಂಭಿಕ॥

ಲಿಂಗ ಭೂಮಿಗೆ ಬರಲು ಕಾರಣ

ಮನ್ಮಥನು ಬಾಣ ಬಿಡುವನೆಂದು ಹೆದರಿ ದಾರುವನವನ್ನು ಸೇರಿದ ರುದ್ರನು ಭಿಕ್ಷೆಯನ್ನು ಬೇಡಲು ಪ್ರಾರಂಭಿಸಿದನು. ಅವನ ದಿಗಂಬರ ವೇಷವನ್ನು ನೋಡಿ ಋಷಿಗಳು ತಲೆ ತಗ್ಗಿಸಿದರು. ಋಷಿಪತ್ನಿಯರು ರುದ್ರದೇವನ ಸೌಂದರ್ಯಕ್ಕೆ ಮಾರುಹೋದರು. ಅರುಂಧತಿ, ಅನುಸೂಯಾದೇವಿಯರಾದರೂ ತಮ್ಮ ಪತಿಯಲ್ಲೇ ಸ್ಥಿರವಾದ ಮನಸ್ಸನ್ನು ಇಟ್ಟಿದ್ದರಿಂದ ನೋಡಿದರೂ ಚಲಿತರಾಗಲಿಲ್ಲ. ಆದರೆ ಅಂತಃಸತ್ವ ಕಡಮೆವುಳ್ಳ ಭಾರ್ಗವ ಮತ್ತು ಆತ್ರೇಯ ಸ್ತ್ರೀಯರೆಲ್ಲರೂ ರುದ್ರದೇವನಸೌಂದರ್ಯದಿಂದ ವಿಹ್ವಲರಾದರು ಮತ್ತು ರುದ್ರದೇವನನ್ನು ಹಿಂಬಾಲಿಸಿ ಹೊರಟರು. ಹೆಣ್ಣಾನೆಗಳು ಸಲಗವನ್ನು ಅನುಸರಿಸುವಂತಿತ್ತು. ಅವರು ಅನುಸರಣೆ.

ತಮ್ಮ ಪತ್ನಿಯರೂ ರುದ್ರರೂಪದಕ್ಕೆ ಮಾರುಹೊದದ್ದನ್ನು ನೋಡಿ ರೌದ್ರರಾದ ಭಾರ್ಗವ, ಆಂಗೀರಸರು ರುದ್ರನನ್ನು ಶಪಿಸಿದರು. ಯಾವ ಲಿಂಗವನ್ನು ನೋಡಿ ನಮ್ಮ ಪತ್ನಿಯರು ಮಾರುಹೋಗಿ ನಿನಗೆ ದುಂಬಾಲು ಬಿದ್ದರೋ ಅಂಥಹ ನಿನ್ನ ಸರ್ವಮೋಹಕವಾದ ಲಿಂಗವು ಕೂಡಲೇ ಭೂಮಿಯಲ್ಲಿ ಬೀಳಲಿ ಎಂದು.

ಭೂಮಿಯಲ್ಲಿ ಬಿದ್ದ ಲಿಂಗವು ಅತಲ, ವಿತಲಾದಿ ಸಪ್ತಲೋಕಗಳನ್ನು ಭೇದಿಸಿ ಅಂತರ್ಧಾನವಾಯಿತು. ಭೂಮಿಯು ಚಲಿಸಿತು ಹಾಹಾಕಾರ-

ವುಂಟಾದಾಗ ಬ್ರಹ್ಮದೇವರ ಮಾತಿನಂತೆ ಪುನಃ ಲಿಂಗಧಾರಣೆಯನ್ನು ಮಾಡಿದ ರುದ್ರದೇವನು ಇಂದಿನಿಂದ ನನ್ನ ಲಿಂಗವು ಪೂಜಿಸಲ್ಪಡಲಿ ಎಂದು ಹೇಳಿದನು.

ತಂ ಪ್ರವಿಷ್ಟಂ ತದಾ ದೃಷ್ಟ್ವಾ ಭಾರ್ಗವಾತ್ರೇಯಯೋಷಿತಃ।
ಪ್ರಕ್ಷೋಭಮಗಮನ್ ಸರ್ವಾ ಹೀನಸತ್ವಾಃ ಸಮಂತತಃ।
ಋತೇ ತ್ವರುಂದತೀ ಮೇನಾಮನಸೂಯಾಂ ಚ ಭಾಮಿನೀಂ
ಏತಾಭ್ಯಾಂ ಭರ್ತುಪೂಜಾಸು ಕೃತಂ ವಿಸುಸ್ಥಿರಂ ಮನಃ।
ತತ್ರ ಪ್ರಯಾಂತಿ ಕಾಮಾರ್ತಾ ಮದವಿಹ್ವಲಿತೇಂದ್ರಿಯಾಃ
ತ್ಯಕ್ತ್ವಾಶ್ರಮಾಣಿ ಶೂನ್ಯಾನಿ ಸ್ವಾನಿ ತಾ ಮುನಿಯೋಷಿತಃ।
ಅನುಜಗ್ಮು ಯಥಾ ಮತ್ತಂ ಕರಿಣ್ಯೋ ಕರಿಣಂ ಯಥಾ।
ತತಸ್ತು ಋಷಯೋ ದೃಷ್ಟ್ವಾ ಭಾರ್ಗವಾಂಗಿರಸೋ ಮುನೇ।
ಕ್ರೋಧಾನ್ವಿತಾ ಅಬ್ರುವನ್ ಸರ್ವೇ ಲಿಂಗೋsಸ್ಯ ಪತತಾಂ ಭುವಿ।
ತತಃ ಪಪಾತ ದೇವಸ್ಯ ಲಿಂಗಂ ಪೃಥ್ವೀಂ ವಿದಾರಯತ್।
ಯದ್ಯರ್ಚಯಂತಿ ತ್ರಿದಶಾ ಮಮ ಲಿಂಗಂ ಸುರೋತ್ತಮ।
ತದೇತತ್ ಪ್ರತಿಗೃಹ್ಣೀಯಾಂ ನಾನ್ಯಥೇತಿ ಕಥಂಚನ

- ವಾಮನ ಪುರಾಣ ೬ನೇ ಅ.

ರುದ್ರದೇವನ ಪೂಜಾದಿಕ್ಕು

ಸಾಮಾನ್ಯವಾಗಿ ಪೂಜಕನು ಪೂರ್ವಾಹ್ಣದಲ್ಲಿ ಪೂರ್ವಾಭಿಮುಖನಾಗಿಯೂ ಸಾಯಂಕಾಲ ಪಶ್ಚಿಮಾಭಿಮುಖನಾಗಿಯೂ ರಾತ್ರಿಯಲ್ಲಿ ಉತ್ತರಾಭಿಮುಖನಾಗಿಯೇ ಪೂಜಿಸಬೇಕು.

ಪ್ರಾಕ್ ಪಶ್ಚಿಮೋದಗಾಸ್ಯಸ್ತು ಪ್ರಾತಃ ಸಾಯಂ ನಿಶಾಸು ಚ।

ಆದರೆ ಈ ನಿಯಮ ಸಾರ್ವತ್ರಿಕವಲ್ಲ, ಕೆಲವು ದೇವತೆಗಳಿಗೆ ಮಾತ್ರ. ಆದರೆ ರಾತ್ರಿ ಕಾಲದಲ್ಲಿ ಯಾವಾಗಲೂ ಸಾಧಕನು ಉದಙ್ಮುಖನಾಗಿಯೇ ಪೂಜಿಸಬೇಕು. ಆದರೆ ರುದ್ರದೇವನನ್ನು ಮಾತ್ರ ಯಾವಾಗಲೂ ಉತ್ತರಾಭಿಮುಖನಾಗಿಯೇ ಪೂಜಿಸಬೇಕು.

ರಾತ್ರಾವುದಙ್ಮುಖಃ ಕುರ್ಯಾತ್ ದೇವಕಾರ್ಯಂ ಸದೈವ ಹಿ।
ಶಿವಾರ್ಚನಂ ಸದಾಪ್ಯೇವಂ ಶುಚಿಃ ಕುರ್ಯಾತ್ ಉದಙ್ಮುಖಃ॥

ಇದಕ್ಕೆ ಕಾರಣ ರುದ್ರಯಾಮಲದಲ್ಲಿ ಉಕ್ತವಾಗಿದೆ. ಪೂರ್ವದಿಕ್ಕಿನಲ್ಲಿ ಪ್ರಧಾನವಾದ ಮುಖವಾದ ''ತತ್ಪುರುಷ'' ಎಂಬ ಮುಖವಿದೆ. ಸರ್ವ ಸಂಹಾರಕನಾದ ರುದ್ರನ ಮುಂದೆ ನಾವು ಪೂರ್ವದಲ್ಲೇ ಕುಳಿತಂತಾಗುತ್ತದೆ. ಪಶ್ಚಿಮದಲ್ಲಿಯಾದರೂ ರುದ್ರದೇವನ ಪೃಷ್ಠಭಾಗವಿದೆ. ದೇವನ ಹಿಂಭಾಗದಲ್ಲಿ ಪೂಜಾದಿಗಳು ನಿಷಿದ್ಧವಾಗಿವೆ. ಉತ್ತರ ದಿಕ್ಕಿನಲ್ಲಿ ಕೂತರೆ, ಅವನ ಶಕ್ತಿ ಉತ್ತರ ದಿಕ್ಕಿನಲ್ಲಿ ಇದೆ. ಅವನ ಆಯುಧಕ್ಕೆ ತಲೆ ಸಿಗಬಾರದು. ಆದ್ದರಿಂದ ದಕ್ಷಿಣ ದಿಕ್ಕಿನಲ್ಲಿ ಕೂತು, ಉತ್ತರಾಭಿಮುಖನಾಗಿ ಪೂಜಿಸಬೇಕು.

ನ ಪ್ರಾಚೀಮಗ್ರತಃ ಶಂಭೋಃ ನೋದೀಚೀಂ ಶಕ್ತಿ ಸಂಸ್ಥಿತಾಮ್।
ನ ಪ್ರತೀಚೀ ಯತಃ ಪೃಷ್ಠ ಅತೋ ದಕ್ಷಂ ಸಮಾಶ್ರಯೇತ್॥

35. ಸೋಮವಾರಪ್ರಿಯ ರುದ್ರದೇವರು

ಸೋಮವಾರ ರಾತ್ರಿಯಲ್ಲಿ ಉಪವಾಸವನ್ನು ಮಾಡಿ ಶಿವ ಮತ್ತು ಪಾರ್ವತಿಯರ ಪೂಜೆ ಮಾಡುವವರಿಗೆ ಇಷ್ಟಾರ್ಥ ಸಿದ್ಧಿ, ಸ್ತ್ರೀಯರಿಗೆ ವೈಧವ್ಯ ಪ್ರಾಪ್ತಿಯಾಗುವುದಿಲ್ಲ. ಸೌಭಾಗ್ಯ ಪ್ರಾಪ್ತಿಯೂ ಆಗುವುದು.

ಸೋಮವಾರೇ ವಿಶೇಷೇಣ ಪ್ರದೋಷಾದಿ ಗುಣೈರ್ಯುತೇ।
ಕೇವಲಂ ವಾಪಿ ಯೇ ಕುರ್ಯುಃ ಸೋಮವಾರೆ ಶಿವಾರ್ಚನಂ।
ಉಪೋಷಿತಃ ಶುಚಿರ್ಭೂತ್ವಾ ಸೋಮವಾರೇ ಜಿತೇಂದ್ರಿಯಃ॥

ಚಿತ್ರವರ್ಮನ ಮಗಳು ತನಗೆ ಬರುವ ವೈಧವ್ಯವನ್ನು ತಿಳಿದು ಯಾಜ್ಞವಲ್ಕ್ಯರ ಪತ್ನಿ ಮೈತ್ರೇಯಿಯಿಂದ ಸೋಮವಾರ ಶಿವ ಮತ್ತು ಪಾರ್ವತಿಯನ್ನು ಸಂತೋಷಗೊಳಿಸಿ ನಿತ್ಯ ಮುತ್ತೈದೆತನ ಪಡೆದಳು - ಸ್ಕಾಂಧ.

ದಾಂಪತ್ಯಾರ್ಥಂ ಉಮಾಂ ಸತೀಂ

36. ಅಶ್ವತ್ಥ ಪ್ರದಕ್ಷಿಣೆ

ಅಶ್ವತ್ಥ ವೃಕ್ಷದ ಮೂಲದಲ್ಲಿ ಬ್ರಹ್ಮದೇವನು, ಮಧ್ಯದಲ್ಲಿ ವಿಷ್ಣುವು ಅಗ್ರದಲ್ಲಿ ಶಿವನ ನೆಲೆಸಿರುವರು.

ಅಶ್ವತ್ಥ ವೃಕ್ಷವು ವಿಷ್ಣುರೂಪವಾಗಿದೆ ಮತ್ತು ಗೋ ಬ್ರಾಹ್ಮಣರಿಗೆ ಸಮಾನವೆನಿಸಿದೆ. ಅಶ್ವತ್ಥವು, ಆಲ ಮುತ್ತುಗಗಳಿಗಿಂತ ಉತ್ತಮವಾಗಿದೆ. ಆಲ ವೃಕ್ಷವು ರುದ್ರರೂಪಿಯಾದರೆ, ಮುತ್ತುಗವು ಬ್ರಹ್ಮರೂಪಿಯಾಗಿದೆ.

ಅಶ್ವತ್ಥರೂಪೋ ಭಗವಾನ್ ವಿಷ್ಣುರೇವ ನ ಸಂಶಯಃ।
ರುದ್ರರೂಪೋ ವಟಸ್ತದ್ವತ್ ಪಾಲಾಶೋ ಬ್ರಹ್ಮರೂಪಧೃಕ್॥

ಈ ಮೂರು ವೃಕ್ಷಗಳ ಸೇವೆಯಿಂದ ದರ್ಶನದಿಂದ ರೋಗಾದಿ ದುಃಖಗಳು ದೂರವಾಗುವುವು.

ಬ್ರಹ್ಮ ವಿಷ್ಣು, ರುದ್ರರು ವೃಕ್ಷರಾದರು

ಪಾದ್ಮಪುರಾಣದಲ್ಲಿ (೯೭೦ ಅ) ಪಾರ್ವತಿಯ ಶಾಪದಿಂದ ಬ್ರಹ್ಮಾದಿಗಳು ವೃಕ್ಷ ರೂಪ ಪಡೆದ ವಿಷಯ ವರ್ಣಿತವಾಗಿದೆ. ಪಾರ್ವತಿಯು ತನ್ನು ಪತಿ ಶಿವನೊಂದಿಗೆ ವಿಹಾರ ಮಾಡುತ್ತಿರುವಾಗ ಶಿವನೂ ಸೇರಿದಂತೆ ಬ್ರಹ್ಮಾದಿಗಳು ಅಗ್ನಿಯನ್ನು ಬ್ರಾಹ್ಮಣ ವೇಷದಿಂದ ಕಳುಹಿಸಿ ಸುರತಕ್ಕೆ ಭಂಗತಂದರು, ಸುಖಭಂಗವಾದ್ದರಿಂದ ರುಷ್ಠಳಾದ ಉಮೆಯು ಶಿವನನ್ನೂ ಸೇರಿಸಿ ''ನೀವೆಲ್ಲರೂ ವೃಕ್ಷಗಳಾಗಿರಿ'' ಎಂದು ಶಪಿಸಿದಳು.

ಪಾರ್ವತೀ ಶಿವಯೋಃ ದೈವ್ಯೈಃ ಸುರತಂ ಕುರ್ವತೋಃ ಕಿಲ।
ಅಗ್ನಿಂ ಬ್ರಾಹ್ಮಣವೇಷೇನ ಪ್ರೇಷ್ಯ, ವಿಘ್ನಃ, ಕೃತಃ ಕಿಲ।
ತತಸ್ತು ಪಾರ್ವತೀ ಕೃದ್ಧಾ ಶಶಾಪ ತ್ರಿದಿವೌಕಸಃ॥
ರೇತಃ ಸೇಕಸುಖಭ್ರಂಶಕಂಪಮಾನಾ ತದಾ ರುಷಾ।
ಕೃಮಿಕೀಟಾದಯೋಽಪ್ಯೇತೆ ಜಾನಂತ ಸ್ತುರತೇಃ ಸುಖಮ್।
ತಸ್ಮಾನ್ಮಮ ಸುಖಭ್ರಂಶಾತ್ ಯೂಯಂ ವೃಕ್ಷತ್ವ ಮಾಪ್ಸ್ಯಥ॥

ಹೀಗೆ ವಿಷ್ಣುವು ಅಶ್ವತ್ಥ ರೂಪದಿಂದ ಇರುವರು. ಈ ಅಶ್ವತ್ಥವನ್ನು ಶನಿವಾರ ಹೊರತು ಇತರ ರವಿವಾರಾದಿಗಳಲ್ಲಿ ಮುಟ್ಟಿ ನಮಸ್ಕಾರ ಪ್ರದಕ್ಷಿಣೆ ಮಾಡಬಾರದು.

ಬೋಧಿಸ್ತ್ವಯಂ ಚಾರ್ಕದಿನಂ ವಿನ್ಯೆವ
ನ ಸಂಸ್ಪೃಶೇತ್ ಅರ್ಕವಾರಯೋಗಾತ್।

ಅಶ್ವತ್ಥವನ್ನು ಪ್ರತಿದಿನ ದರ್ಶನ ಹಾಗೂ ನಮಸ್ಕಾರಾದಿಗಳು ವಿಹಿತವಾಗಿದೆ. ಆದರೆ ಪೂರ್ವಾಹ್ಣದ ಮೊದಲಿನ ಎರಡು ಪ್ರಹರಗಳು ಮಾತ್ರ ವಿಹಿತ. ಅನಂತರ ನಮಸ್ಕಾರಾದಿಗಳನ್ನು ಮಾಡಿದರೆ ಕುಲಕ್ಷಯವಾದೀತು.

ಅಶ್ವತ್ಥಂ ವಂದಯೇನ್ನಿತ್ಯಂ ಪೂರ್ವಾಹ್ಣೇ ಪ್ರಹರದ್ವಯೇ।
ಅತ ಊರ್ಧ್ವಂ ನ ವಂದೇತ ಅಶ್ವತ್ಥಂ ತು ಕದಾಚನ॥

ಮಂಗಳ, ರವಿವಾರ, ಶುಕ್ರಾದಿ ದಿವಸಗಳು, ಮಧ್ಯಾಹ್ನದಲ್ಲಿ ರಾತ್ರಿಯಲ್ಲಿ ಸಂಧ್ಯಾ ಕಾಲಗಳಲ್ಲಿ ಅಶ್ವತ್ಥ ಸೇವನವನ್ನು ಮಾಡಿದರೆ ಕುಲನಾಶ.

ಭೌಮೇ ಭಾನೌ ತಥಾ ಶುಕ್ರೇ ಮಧ್ಯಾಹ್ನೇ ನಿಶಿ ಸಂಧ್ಯಯೋಃ।
ನಾಶ್ವತ್ಥಸೇವನಂ ಕುರ್ಯಾದ್ ಕುಲಕ್ಷಯಕರಂ ಭವೇತ್॥

ಪರ್ವಕಾಲಗಳಲ್ಲಿಯೂ ನಿಷಿದ್ಧ, ಪರ್ವಕಾಲಗಳಾದ ಭಾನುವಾರ, ಕುಜವಾರ, ಶುಕ್ರವಾರ, ಸಂಕ್ರಾಂತಿ, ರಿಕ್ತತಿಥಿಗಳು ಷಷ್ಠಿ, ನವಮಿ ವ್ಯತೀಪಾತ, ಮೋಡದಿಂದ ಸೂರ್ಯನು ಆವೃತವಾದ ದಿನದಲ್ಲಿ, ರಾತ್ರಿಯಲ್ಲಿ, ಅಪರಾಹ್ಣದಲ್ಲಿ, ಸಂಧ್ಯಾಕಾಲಗಳಲ್ಲಿ, ನಂದಾತಿಥಿಗಳಲ್ಲಿ ಅಶ್ವತ್ಥವನ್ನು ಸೇವಿಸಬಾರದು.

ಅಶ್ವತ್ಥದ ಸೇವೆಯ ಫಲ

ಅಶ್ವತ್ಥವು ನಾರಾಯಣನ ರೂಪ, ವೃಕ್ಷವು ರುದ್ರರೂಪ ಮುತ್ತುಗವು ಬ್ರಹ್ಮರೂಪವಾಗಿದೆ. ಆದ್ದರಿಂದ ಇವುಗಳ ದರ್ಶನ ಸ್ಪರ್ಶನಗಳೇ ಪಾಪಪರಿಹಾರಕವಾಗಿವೆ.

ಅಶ್ವತ್ಥರೂಪೇ ಭಗವಾನ್ ವಿಷ್ಣುರೇವ ನ ಸಂಶಯಃ।
ರುದ್ರರೂಪೋ ವಟಸ್ತದ್ವತ್ ಪಲಾಶೋ ಬ್ರಹ್ಮರೂಪಧೃಕ್॥
ದರ್ಶನಸ್ಪರ್ಶನಾದೇವ ತೇ ವೈ ಪಾಪಹರಾಃ ಸ್ಮೃತಾಃ॥

ಅಶ್ವತ್ಥಕಟ್ಟೆಯನ್ನು ಕಟ್ಟಿಸಿದ ಫಲ

ಯಾರು ಅಶ್ವತ್ಥವೃಕ್ಷಕ್ಕೆ ಕಟ್ಟೆಯನ್ನು ಕಟ್ಟಿ, ಪಾತಿಯನ್ನು ಮಾಡಿದರೆ ಅವರಿಗೆ ಭಗವಂತನು ಸಮಸ್ತ ಫಲಗಳನ್ನು ನೀಡುವನು.

ಅಶ್ವತ್ಥಮೂಲಂ ವಿಪ್ರರ್ಷೇ ಯೋ ಬಧ್ನಾತಿ ಶಿಲಾದಿಭಿಃ।
ಅಶ್ವತ್ಥರೂಪೇ ಭಗವಾನ್ ಕಿಂ ತಸ್ಮೈ ನ ಹಿ ಯಚ್ಛತಿ॥

ದುಃಸ್ವಪ್ನನಾಶ

ದುಃಸ್ವಪ್ನವನ್ನು ಕಂಡಾಗ ಪ್ರಾತಃಕಾಲದಲ್ಲಿ ಪೂಜಾದಿಗಳನ್ನು ಮುಗಿಸಿ ಅಶ್ವತ್ಥವನ್ನು ಪ್ರದಕ್ಷಿಣೆ-ನಮಸ್ಕಾರವನ್ನು ಮಾಡಿ "ಸ್ವಾಮಿಯೇ, ನನ್ನ ದುಃಸ್ವಪ್ನವನ್ನು ನಾಶಮಾಡು" ಎಂದು ಪ್ರಾರ್ಥಿಸಬೇಕು.

ಅಶ್ವತ್ಥರೂಪೀ ಭಗವಾನ್ ದುಃಸ್ವಪ್ನಂ ಶಮಯಾಶು ಮೇ।

ಅಶ್ವತ್ಥವೃಕ್ಷ ಸ್ಥಾಪನೆಯ ಫಲ

ಅಶ್ವತ್ಥವನ್ನು ನೀರೆರೆದು ಪೋಷಿಸಿ ಬೆಳೆಸಿದರೆ ಬೆಳೆಸಿದವನ ಕುಲವು ವೃದ್ಧಿಯಾಗುತ್ತದೆ. ಅಶ್ವತ್ಥಕ್ಕೆ ನೀರನ್ನು ಹಾಕಿದವನು ಅಕ್ಷಯ ಫಲಗಳನ್ನು ಹೊಂದುವನು.

ವಿವಾಹವಾದ ಅಶ್ವತ್ಥದ ಫಲ

ಅಶ್ವತ್ಥವೃಕ್ಷವು ನಾರಾಯಣರೂಪಿಯಾಗಿದ್ದು ಲಕ್ಷ್ಮೀ ಸನ್ನಿಧಾನ ವಿಶೇಷವುಳ್ಳ ಬೇವಿನ ಗಿಡದ ಜೊತೆಗೆ ಶಾಸ್ತ್ರೋಕ್ತವಾಗಿ ವಿವಾಹ ನಡೆಸಿದರೆ ಮುಂದೆ ಏಳು ಜನ್ಮದವರೆಗೂ ಸಂತಾನಭಾಗ್ಯ, ವಿವಾಹಭಾಗ್ಯಗಳು ಒದಗುವುವು.

37. ವಿವಾಹವಾಗದ ಅಶ್ವತ್ಥವು ನಮಸ್ಕರಿಸಲು ಅನರ್ಹ

ವಿವಾಹವಾಗದ ಅಶ್ವತ್ಥವನ್ನು ನಮಸ್ಕರಿಸುವುದು ಶಾಸ್ತ್ರೀಯವಲ್ಲ. ಬೇವಿನಗಿಡದ ಜೊತೆಗೆ ವಿವಾಹವಾದ ಅಶ್ವತ್ಥವು ಮಾತ್ರ ನಮಸ್ಕಾರವನ್ನು ಮಾಡಲು ಅರ್ಹವಾಗುತ್ತದೆ. ಅದೇ ರೀತಿ ಗಿಡವನ್ನು ನೆಟ್ಟು ಎರಡು ತಿಂಗಳು ಕಳೆಯದ ತುಲಸೀ ಗಿಡವು, ಕರುವನ್ನು ಹಾಕದಿರುವ ಗೋವು ಇವುಗಳಿಗೆ ನಮಸ್ಕರಿಸಿದರೆ ಆಸುರೀ ನಮಸ್ಕಾರವೆನಿಸುವುದು.

ವಿವಾಹಶೂನ್ಯಮಶ್ವತ್ಥಂ ನಮಂತಿ ಪೂಜಯಂತಿ ಚ।
ದ್ವಿಮಾಸಹೀನಾಂ ತುಲಸೀಂ ಅಪ್ರಸೂತಾಂ ಚ ಗಾಂ ಧುನಿ॥
ಭಾನೌ ಭೌಮೇ ಭೃಗೌ ಕ್ರಾಂತಿ ರಿಕ್ತಾ ಪಾತೇ ಚ ಪರ್ವಸು।
ದುರ್ದಿನೆ ವೈಧೃತೌ ಭೃಗೌ ರಾತ್ರಾವಪರಾಹ್ಣೇ ಚ ಸಂಧ್ಯಯೋಃ।
ಮಂದಾದೀನಾಂ ತ್ರಯೋ ಚೈವ ಕುರ್ಯಾತ್ ನಾಶ್ವತ್ಥ ಸೇವನಂ।

ಶನಿವಾರ ಪೂರ್ವಾಹ್ಣದಲ್ಲಿ ಮಾತ್ರ ಮುಟ್ಟಿ ಪೂಜೆ ವಿಹಿತ

ಅಶ್ವತ್ಥಂ ಸಿಂಧುರಾಜಂ ಚ ನಿತ್ಯಂ ಸೇವೇತ ನ ಸ್ಪೃಶೇತ್।
ಮಂದವಾರೇ ಸ್ಪೃಶೇತ್ ಪೂರ್ವಂ ಸಿಂಧುರಾಜಂ ಚ ಪರ್ವಣಿ॥

ಅಶ್ವತ್ಥವೃಕ್ಷ ಮತ್ತು ಸಮುದ್ರವನ್ನು ಯಾವಾಗಲೂ ಸೇವೆ ಮಾಡುತ್ತಿರಬೇಕು. ಆದರೆ ಮುಟ್ಟಬಾರದು. ಕೇವಲ ಪೂರ್ವಾಹ್ಣಗಳಲ್ಲಿ ಮುಟ್ಟದೆ. ದರ್ಶನ, ಸೇವೆ ವಿಹಿತವಾಗಿದೆ. ಶನಿವಾರ ಮಾತ್ರ ವೃಕ್ಷವನ್ನು ಸ್ಪರ್ಶ ಮಾಡಿ ಸೇವೆ ಮಾಡಬಹುದು. ಆ ದಿನವೂ ಮಧ್ಯಾಹ್ನಾದಿಗಳಲ್ಲಿ ಗಿಡವನ್ನು ಮುಟ್ಟಬಾರದು.

ಶನಿವಾರದಂದು, ಅಶ್ವತ್ಥವನ್ನು ನೋಡಿದರೆ ಪಾಪನಾಶವಾಗುತ್ತದೆ. ಮುಟ್ಟಿದರೆ ಸಂಪತ್ತು ಅಭಿವೃದ್ಧಿಯಾಗುತ್ತದೆ.

ದೃಷ್ಟ್ವಾ ತು ಹರತೇ ಪಾಪಂ ಸ್ಪೃಷ್ಟ್ವಾ ಲಕ್ಷ್ಮೀಂ ಚ ವರ್ಧಯೇತ್।
ಪ್ರದಕ್ಷಿಣೇ ಭವೇದಾಯುಃ ಸದಾಶ್ವತ್ಥ ನಮೋಸ್ತು ತೇ।
ಅಶ್ವತ್ಥ ದ್ರುಮಮಾಲೋಕ್ಯ ಪ್ರಣಾಮಂ ಕುರುತೇ ತು ಯಃ।
ಆಯುರ್ವೃದ್ಧಿರ್ಭವೇತ್ತಸ್ಯ ವರ್ಧಂತೇ ಸರ್ವಸಂಪದ।

ಅಶ್ವತ್ಥ ದ್ರುಮದ ಪ್ರದಕ್ಷಿಣೆಯನ್ನು ಮೌನಿಯಾಗಿ ಮಾಡಬೇಕೆಂದಿದೆ. "ಮೌನೀ ಪ್ರದಕ್ಷಿಣಂ ಕುರ್ಯಾತ್"

ಪ್ರದಕ್ಷಿಣೆ ಕಾಲದಲ್ಲಿ ಅಚ್ಯುತನ ನಾಮಗಳು, ಅಥವಾ ಸಹಸ್ರನಾಮದಿಂದ ಸ್ತೋತ್ರ ಮಾಡಬೇಕೆಂದೂ ಹೇಳಿದೆ ಇದರಭಿಪ್ರಾಯ.

ಬೇರೆ ಸಾಂಸಾರಿಕ ವಿಷಯಗಳಲ್ಲಿ ಮೌನಿಯಾಗಿದ್ದು ಭಗವಂತನ ಸ್ತೋತ್ರದಲ್ಲಿ ಜಾಗೃತನಾಗಿರಬೇಕೆಂದು ಅರ್ಥ.

"ವಾಚಾ ಸ್ತೋತ್ರಂ ಮನೋಧ್ಯಾನಂ ಚತುರಂಗಂ ಪ್ರದಕ್ಷಿಣಂ" ಎಂಬ ಪ್ರಮಾಣ ಅಶ್ವತ್ಥದ ಪ್ರದಕ್ಷಿಣೆಯಲ್ಲೂ ಅನ್ವಯವಾಗುತ್ತದೆ.

ಅಶ್ವತ್ಥದ ಸ್ತೋತ್ರ

ಚಕ್ಷುಃಸ್ಪಂದಂ ಭುಜಸ್ಪಂದಂ ತಥಾ ದುಃಸ್ವಪ್ನ ದರ್ಶನಂ।
ಶತ್ರೂಣಾಂ ಚ ಸಮುತ್ಥಾನಂ ಅಶ್ವತ್ಥ ಶಮಯಾಶು ಮೇ॥

ತ್ವಾಂ ದೃಷ್ಟ್ವಾ ನಶ್ಯತೇ ಪಾಪಂ ದೃಷ್ಟ್ವಾ ಲಕ್ಷ್ಮೀಪ್ರವರ್ತತೇ।
ಪ್ರದಕ್ಷಿಣೇ ಭವೇದಾಯುಃ ಸದಾಶ್ವತ್ಥ ನಮೋಸ್ತುತೇ॥

ಈ ರೀತಿ ಸ್ತೋತ್ರ ಮಾಡುತ್ತಾ ಪ್ರದಕ್ಷಿಣೆ ಮಾಡಿದರೆ ಒಂದೊಂದು ಪ್ರದಕ್ಷಿಣೆಯಲ್ಲಿ ಮಾಡುವ ಒಂದೊಂದು ಹೆಜ್ಜೆಗೂ ಅಶ್ವಮೇಧದ ಫಲ ಬರುತ್ತದೆ.

ಅಶ್ವತ್ಥವನ್ನು ಕತ್ತರಿಸಬಾರದು

ಅಶ್ವತ್ಥವೆಂದರೆ ನಾರಾಯಣನೆ ವೃಕ್ಷರೂಪದಿಂದ ಇರುವನು.

ಅಶ್ವತ್ಥಮೂರ್ತಿರ್ಭಗವಾನ್ ಸ್ವಯಮೇವ ಯತೋ ದ್ವಿಜ।
ಅಶ್ವತ್ಥರೂಪೋ ಭಗವಾನ್ ವಿಷ್ಣುರೇವ ನ ಸಂಶಯಃ॥

ಅಶ್ವತ್ಥವನ್ನು ನಾಶಪಡಿಸಿದವನು ಉದ್ಧಾರವಾಗಲಾರನು. ಅಶ್ವತ್ಥವನ್ನು ಕತ್ತರಿಸಿದವನು ಪಿತೃಗಳನ್ನು ಕತ್ತರಿಸಿದಂತೆ. ಎಂದರೆ ಅವನು ತನ್ನ ವಂಶವನ್ನು ತಾನೆ ಕತ್ತರಿಸಿ ಹಾಕಿದಂತೆಯೆ.

"ಅಶ್ವತ್ಥಃ ಛೇದಿತೋ ಯೇನ ಛೇದಿತಾಃ ಪಿತೃದೇವತಾಃ"।

ಅಶ್ವತ್ಥವನ್ನು ಕಡಿಯುತ್ತಿರುವ ವ್ಯಕ್ತಿಯನ್ನು ನೋಡಿಯೂ ಸಮರ್ಥನಾಗಿದ್ದು ತಡೆಯದಿದ್ದರೆ ಯಮನು ಅವನ ನೇತ್ರವನ್ನು ಸ್ಫೋಟಿಸುವನು.

ವಿಲೋಕ್ಯಾಶ್ವತ್ಥಹಂತಾರಂ ಯಃ ಶಕ್ತಃ ನ ನಿವಾರಯೇತ್।
ತನ್ನೇತ್ರಯುಗ್ಮಂ ಬಡಿಶೈಃ ಯಮೇನೋತ್ಪಾಟ್ಯತೇ ಸ್ವಯಮ್॥

ಅಶ್ವತ್ಥಶಾಖೆಯನ್ನು ಮುರಿದವನಿಗೂ ಬ್ರಹ್ಮಹತ್ಯೆಗಳು ಮುತ್ತುತ್ತವೆ. ಅಶ್ವತ್ಥವನ್ನು ಕತ್ತರಿಸಿದ ನಂತರ ಪಾಪಶುದ್ಧಿ ಮಾಡತಕ್ಕ ಕರ್ಮವೆ ಇಲ್ಲ. ಆದರೆ ಯಜ್ಞಯಾಗಾದಿಗಳಿಗಾಗಿ, ಉಪನಯನಾದಿಕರ್ಮಗಳಿಗಾಗಿ ಅಶ್ವತ್ಥದ ರೆಂಬೆಗಳನ್ನು ಮುರಿದರೆ ದೋಷವಿರುರುದಿಲ್ಲ. ಸೈಟಿಗಾಗಿ ಮನೆಕಟ್ಟಲು, ಇತರ ಬೇರೆ ಲೌಕಿಕಕಾರಣಕ್ಕಾಗಿ ಅಶ್ವತ್ಥವನ್ನು ಕತ್ತರಿಸಬಾರದು.

"ಯಜ್ಞಾರ್ಥಂ ಛೇದಿತೇಽಶ್ವತ್ಥೇ ಅಕ್ಷಯ್ಯಂ ಫಲಮಾಪ್ನುಯಾತ್।
ಅರ್ಕಃ ಪಲಾಶಃ ಖದಿರಃ ಅಪಾಮಾರ್ಗೋಽಥ ಪಿಪ್ಪಲಃ॥

ಅಶ್ವತ್ಥದ ಪ್ರದಕ್ಷಿಣೆ-ಪುತ್ರಲಾಭ

ಭಕ್ತಿಯಿಂದ ಒದ್ದೆ ಬಟ್ಟೆಯನ್ನು ಧರಿಸಿಕೊಂಡು ಏಳು ದಿವಸ, ಏಳು ಪ್ರದಕ್ಷಿಣೆಯನ್ನು ಮಾಡಿದರೆ, ಮತ್ತು ದರ್ಶನ, ಸ್ಪರ್ಶನಗಳನ್ನು ಮಾಡಿದರೆ ಪುತ್ರಸಂತಾನವು ನಿಶ್ಚಿತವಾಗಿ ಲಭ್ಯವಾಗುತ್ತದೆ. ಒಂದೊಂದು ಪ್ರದಕ್ಷಿಣೆ ಹಾಕುವಾಗಲೂ ಬುಡಕ್ಕೆ ನೀರನ್ನು ಎರೆಯಬೇಕು.

ವೈಶಾಖೇ ಸಿಂಚಯೇನ್ನಿತ್ಯಂ ವಿಷ್ಣುಮಶ್ವತ್ಥರೂಪಿಣಂ।
ಗಂಡೂಷ ಮಾತ್ರತೋಯೇನ ಕುರ್ಯಾದ್ ಯೋऽಶ್ವತ್ಥಸೇಚನಂ॥
ಅಶ್ವತ್ಥರೂಪೀ ಭಗವಾನ್ ಕಿಂ ತಸ್ಮೈನ ಪ್ರಿ ಯಚ್ಛತಿ॥

ಅಶ್ವತ್ಥ ಪ್ರದಕ್ಷಿಣೆಯಿಂದ ಪುತ್ರಲಾಭ

ಅಶ್ವತ್ಥವು ವೃಕ್ಷರಾಜ ಎನಿಸಿದೆ. ಅಶ್ವತ್ಥವು ಪುಂವೃಕ್ಷವಾಗಿದ್ದು ಸ್ತ್ರೀವೃಕ್ಷ ಎನಿಸಿರುವ (ಅಂಟನ್ನು ಹೊರಬಿಡುವ) ಬೇವಿನ ವೃಕ್ಷದ ಜೊತೆಗೆ ವಿವಾಹ ಮಾಡಿದರೆ ಕನ್ಯಾದಾನ ಫಲ ಲಾಭ. ಇಂಥಹ ವಿವಾಹವಾಗಿರುವ ಅಶ್ವತ್ಥವೃಕ್ಷದ ಪ್ರದಕ್ಷಿಣೆಯಿಂದ ಪುತ್ರ ಲಾಭವನ್ನು ಪಡೆಯಬಹುದು.

ಇವುಗಳ ಪ್ರದಕ್ಷಿಣೆಯಿಂದ ಪುಂಶಕ್ತಿಯನ್ನು ಪಡೆಯಬಹುದು. ಇದು ವೈಜ್ಞಾನಿಕವಾಗಿಯೂ ನಿಜ. ಆಯುರ್ವೇದವು ಈ ಎರಡೂ ವೃಕ್ಷಗಳ ವಾಯು ಸೇವನೆಯಿಂದ ಸ್ತ್ರೀಯು ಆರೋಗ್ಯವನ್ನು, ಸ್ಪರ್ಶದಿಂದ ಗರ್ಭಧಾರಣಾ ಯೋಗ್ಯತೆಯನ್ನು ಪಡೆಯುವಳು ಎಂದಿದೆ.

ಅಪುತ್ರವತಿಯು ಈ ವೃಕ್ಷಕ್ಕೆ ಇಪ್ಪತ್ತೆಂಟು ಸಾವಿರ ಪ್ರದಕ್ಷಿಣೆಯನ್ನು ಮಾಡಬೇಕೆಂದಿದೆ.

ಅಥವಾ ಒಂದು ಮಂಡಲ ದಿವಸ ಅಂದರೆ ನಲವತ್ತೆಂಟು ದಿವಸಗಳು ಅಶ್ವತ್ಥವನ್ನು ಆಲಿಂಗಿಸಿದರೆ ಪುತ್ರವತೀ ಆಗುವಳು. ಬೇರೆ ದಿವಸಗಳಲ್ಲಿ ವೃಕ್ಷ ಸೇವನೆಯನ್ನು ಮಾತ್ರ ಮಾಡಿ ಶನಿವಾರದಂದು ಮಾತ್ರ ಆಲಿಂಗಿಸಿದರೆ ಪುತ್ರ ಸಂತಾನ ಪ್ರಾಪ್ತಿ ಎಂದಾಗುತ್ತದೆ.

ಶನಿವಾರ ಮಾತ್ರ ಮುಟ್ಟಿ ಪೂಜಿಸಲು ಕಾರಣ

ಸಮುದ್ರ ಮಥನಕಾಲದಲ್ಲಿ ಉದಯಿಸಿ ಬಂದ ರತ್ನಗಳನ್ನು ದೇವತೆಗಳು ಸ್ವೀಕರಿಸಿದರು. ಲಕ್ಷ್ಮೀದೇವಿಯು ಆವಿರ್ಭವಿಸಿದಾಗ ವಿಷ್ಣುವು

ವರಿಸಲು ಮುಂದಾದನು. ಲಕ್ಷ್ಮೀಯಾದರೂ ನನ್ನಕ್ಕ ಜ್ಯೇಷ್ಠಾಲಕ್ಷ್ಮೀಗೆ ವಿವಾಹವಾಗದೆ ನಾನು ನಿನ್ನನ್ನು ವರಿಸಲಾರೆ ಎಂದಳು, ಅಕ್ಕನಿಗೆ ಮದುವೆಯಾಗದೆ ತಂಗಿಯು ವಿವಾಹವಾಗಬಾರದಷ್ಟೆ.

ಅಸಂಸ್ಕೃತ್ಯ ಕಥಂ ಜ್ಯೇಷ್ಠಾಂ ಕನಿಷ್ಠಾ ಪರಿಣೀಯತೇ।
ತಸ್ಮಾತ್ ಮಮಾಗ್ರ ಜಾಯೇತಾಂ ಅಲಕ್ಷ್ಮೀಂ ಮಧುಸೂದನ॥
ವಿವಾಹ್ಯೋದ್ವಹ ಮಾಂ ಪಶ್ಚಾತ್ ಏಷ ಧರ್ಮ ಸನಾತನಃ।

ಉದ್ದಾಲಕನು, ದೀರ್ಘತಪಸ್ವಿ ಎನಿಸಿದ್ದು ಅವನಿಗೆ ದಪ್ಪ ತುಟಿಗಳುಳ್ಳ, ಬಾಡಿದ ಮುಖವುಳ್ಳ, ಕುರೂಪಿಯಾದ, ಕೆಂಗಣ್ಣುಗಳುಳ್ಳ ಅಲಕ್ಷ್ಮೀಯನ್ನು ವಿಷ್ಣುವು ವಿವಾಹ ಮಾಡಿಸಿ ತಾನು ಲಕ್ಷ್ಮೀಯನ್ನು ಪ್ರಾಣಿಗ್ರಹಣ ಮಾಡಿದನು.

ಉದ್ದಾಲಕನು ಕೈ ಹಿಡಿದ ಪತ್ನಿಯನ್ನು ತನ್ನ ವೇದಘೋಷ ಪೂರಿತವಾದ, ಧೂಮದಿಂದ ಆವೃತವಾದ, ಗೋಮಯದಿಂದ ಪವಿತ್ರವಾದ, ರಂಗೋಲೆಗಳಿಂದ ಆಲಂಕೃತವಾದ ಆಶ್ರಮಕ್ಕೆ, ಕರೆತಂದನು. ಅದನ್ನು ನೋಡಿ ಸಹಿಸದ ಅವಳ ನಾನು ಇಲ್ಲಿರಲಾರೆ, ಏಕೆಂದರೆ ಈ ಸ್ಥಳವು ನನ್ನ ವಾಸಕ್ಕೆ ಯೋಗ್ಯವಾಗಿಲ್ಲ.

ನ ಹಿ ವಾಸನುರೂಪೋಽಯಂ ವೇದಧ್ವನಿಯುತೋ ಮಮ।
ನಾತ್ರಾಗಮಿಷ್ಯೆ ಭೂ ಬ್ರಹ್ಮನ್ ನಯಸ್ವಾನ್ಯತ್ರ ಮಾಂ ಧ್ರುವಮ್॥

ಹಾಗಾದರೆ ನಿನ್ನ ವಾಸಸ್ಥಾನ ಯಾವುದು? ಎಂದು ಉದ್ಧಾಲಕ ಕೇಳಿದಾಗ ವೇದಧ್ವನಿ ಇಲ್ಲದ, ಅತಿಥಿಪೂಜಾರಹಿತವಾದ, ಯಜ್ಞದಾನವಿಲ್ಲದ, ಪರಸ್ಪರ ಜಗಳವಾಡುವ ಪತಿಪತ್ನಿಯರ ಮನೆಯಲ್ಲಿ, ವಾಸಿಸುವೆ, ತಂದೆಯ ಶ್ರಾದ್ಧವನ್ನು ಮಾಡದ ಮನೆ ಹಿತಕರ ನನಗೆ, ಪರ ಹೆಂಡಂದಿರನ್ನು ಬಯಸುವ ಮನೆ, ಪರದ್ರವ್ಯಾಪಹಾರ, ಜ್ಞಾನ ವೃದ್ಧರಾದ ವಿಪ್ರರ ಅವಮಾನ ಮಾಡುವ ಸ್ಥಳ ನನಗೆ ಅತಿಥಿಪ್ರಿಯವಾಗಿದೆ, ಅಂತಹ ಸ್ಥಳವನ್ನು ಹುಡುಕು ಎಂದಳು.

ಉದ್ಧಾಲಕನು ಅಲಕ್ಷ್ಮೀಯನ್ನು, ಅಶ್ವತ್ಥವೃಕ್ಷದ ಕೆಳಗೆ ಕುಳ್ಳಿರಿಸಿ ಈ ಅಶ್ವತ್ಥವೃಕ್ಷದ ನೆರಳಿನಲ್ಲಿ ವಿಶ್ರಾಂತಿ ಪಡೆ, ನಿನಗೆ ಅನುಕೂಲವಾದ ಆಶ್ರಮವನ್ನು ಹುಡುಕಿಕೊಂಡು ಬರುವೆ, ಎಂದು ಹೊರಟನು.

ಅಶ್ವತ್ಥವೃಕ್ಷಮೂಲೇಸ್ಮಿನ್ ಅಲಕ್ಷ್ಮೀಃ ಶ್ರಮ್ಯತಾಂ ಕ್ಷಣಂ।
ಆಶ್ರಮಸ್ಥಾನಮಾಲೋಕ್ಯ ಯಾವಾದಾಯಾಮ್ಯಹಂ ಪುನಃ॥

ಉದ್ದಾಲಕನನ್ನು ಕಾಯುತ್ತಾ ಕುಳಿತು ಬೇಸತ್ತು ಅಳಲು ಪ್ರಾರಂಭಿಸಿದಳು, ಇವಳು ಅಳುವುದನ್ನು ವೈಕುಂಠದಲ್ಲಿದ್ದ ಲಕ್ಷ್ಮಿಯು ಕೇಳಿದಳು.

ನನ್ನ ತಂಗಿಯು ಭರ್ತೃಹೀನಳಾಗಿ ಅಳುತ್ತಿರುವಳು, ನನ್ನ ಮೇಲೆ ಪ್ರೀತಿ ಇದ್ದರೆ ಈಗಲೇ ಹೋಗಿ ಅವಳನ್ನು ಸಮಾಧಾನ ಪಡಿಸು.

ಸ್ವಾಮಿನ್ ಮದ್ಭಗಿನೀ ಜ್ಯೇಷ್ಠಾ ಸ್ವಾಮಿತ್ಯಾಗೇನ ದುಃಖಿತಾ।
ತಾಮಾಶ್ವಸಯಿತುಂ ಯಾಹಿ ಕೃಪಾಲೋ ಯದ್ಯಹಂ ಪ್ರಿಯಾ॥

ವಿಷ್ಣುವಾದರೂ ಅಲಕ್ಷ್ಮಿಯನ್ನು ಸಮಾಧಾನ ಮಾಡುತ್ತಾ ನನ್ನ ಅಂಶದಿಂದ ಉತ್ಪನ್ನವಾದ ಅಶ್ವತ್ಥವೃಕ್ಷದಲ್ಲಿ ನೀನು ವಾಸವಾಗಿರು. ಶನಿವಾರ ಮಾತ್ರ ನಿನ್ನ ತಂಗಿ ಲಕ್ಷ್ಮಿಯು ಇಲ್ಲಿಗೆ ಬರುವಳು. ಶನಿವಾರ ಲಕ್ಷ್ಮಿಯು ಅಶ್ವತ್ಥದಲ್ಲಿರುವುದರಿಂದ ಅಂದು ವೃಕ್ಷವನ್ನು ಮುಟ್ಟಿ, ಆಲಂಗಿಸಿ, ಪೂಜಿಸಬಹುದು. ಇತರ ದಿವಸಗಳಲ್ಲಿ ಜ್ಯೇಷ್ಠಾಲಕ್ಷ್ಮಿಯು ಈ ವೃಕ್ಷದಲ್ಲಿರುವುದರಿಂದ ಮುಟ್ಟಲು ಅನರ್ಹವಾಗಿದೆ. ಮುಟ್ಟದೆ ಕೇವಲ ಪ್ರದಕ್ಷಿಣೆ ಪೂಜೆಗಳು ವಿಹಿತವಾಗಿವೆ.

ಅಶ್ವತ್ಥವೃಕ್ಷಮಾಸಾದ್ಯ ಸದಾಲಕ್ಷ್ಮೀಃ ಸ್ಥಿರಾ ಭವ।
ಮಮಾಂಶಸಂಭವೋ ಹ್ಯೇಷ ಆವಾಸಸ್ತೇ ಮಯಾ ಕೃತಃ॥
ಮಂದವಾರೇ ಸದಾ ನೂನಂ ಲಕ್ಷ್ಮೀರತ್ರಾಗಮಿಷ್ಯತಿ।
ಅಸ್ಪೃಶ್ಯೋಽಸೌ ಭವೇತ್ ತಸ್ಮಾತ್ ಮಂದವಾರಂ ವಿನಾ ಕಿಲ॥

ಪಾದ್ಮ - 161ನೇ. ಅ.

ಅಶ್ವತ್ಥವನ್ನು ಬಾಹುಗಳಿಂದ ಆಲಿಂಗನ ಮಾಡಿ ಆಮೂಲಾಗ್ರವಾಗಿ ನೋಡಿ ಅಚ್ಯುತನ ಧ್ಯಾನ ಮಾಡಬೇಕು. ಇದರಿಂದ ಆಯುರಭಿವೃದ್ಧಿಯು.

ಧ್ಯಾಯೇದಾಲಿಂಗ್ಯ ಬಾಹುಭ್ಯಾಂ ಆಮೂಲಾಗ್ರಂ

ಅಶ್ವತ್ಥದ ದರ್ಶನಮಾತ್ರದಿಂದಲೇ ಪಾಪಪರಿಹಾರ ಮತ್ತು ಸಂಪತ್ತಿನ ವೃದ್ಧಿಯಾಗುತ್ತದೆ. ಪ್ರದಕ್ಷಿಣೆಯಿಂದ ಆಯುರಭಿವೃದ್ಧಿಯಾಗುತ್ತದೆ. ಯಜ್ಞದಲ್ಲಿ ಪಶುಹಿಂಸೆ ವಿಹಿತವಾದಂತೆ ಯಜ್ಞಕ್ಕಾಗಿ ಅಶ್ವತ್ಥ, ಅಪಾಮಾರ್ಗ, ಪಲಾಶ ಇವುಗಳನ್ನು ಛೇದಿಸಿದರೆ ದೋಷವಿಲ್ಲ.

ಆದರೆ ಅಶ್ವತ್ಥವು ಒಂದು ಸಾಮಾನ್ಯ ವೃಕ್ಷ ಎಂದು ಮೋಹದಿಂದ ಛೇದಿಸಿದರೆ ಕೋಟಿ ಬ್ರಹ್ಮಹತ್ಯೆಗಳು ಮುತ್ತುವುವು. ಇದಕ್ಕೆ ಪ್ರಾಯಶ್ಚಿತ್ತವೆ ಇಲ್ಲ.

ತರುಜ್ಞಾನಾತ್ ದ್ವಿಜಶ್ರೇಷ್ಠ ಯೋಽಶ್ವತ್ಥಂ ಹಂತಿ ಮೂಢಧೀಃ।
ಸಂಸಾರೇ ನಾಸ್ತಿ ತತ್ಕರ್ಮ ಯತ್ಕೃತ್ವಾ ಸ ಚ ಶುಧ್ಯತಿ॥

38. ಶನಿದೇವನಿಗೆ ಪ್ರದಕ್ಷಿಣೆ-ನಮಸ್ಕಾರ

ಶನಿಯು ಕ್ರೂರಗ್ರಹವಾಗಿದೆ ಸೂರ್ಯನಿಂದ ಛಾಯೆಯಲ್ಲಿ ಜನಿಸಿದವನು. ಕಾಶ್ಯಪಗೋತ್ರ ಪ್ರಮೋದೂತ ಸಂವತ್ಸರ, ಪುಷ್ಯಮಾಸ - ಕೃಷ್ಣಪಕ್ಷದ ಸ್ವಾತಿ ನಕ್ಷತ್ರ ಅಷ್ಟಮಿಯಂದು ಅವತರಿಸಿರುವನು. ಶ್ರೀಕೃಷ್ಣನ ಪರಮ ಭಕ್ತನಾಗಿರುವನು. ನೀಲಾಂಬರಧಾರೀ, ನೀಲಕಾಡಿಗೆಯಂತೆ ಕಪ್ಪುದೇಹ, ಹದ್ದಿನವಾಹನ, ಬಿಲ್ಲಿನ ಆಕಾರವಿರುವ ಆಸನದಲ್ಲಿ ಆಸೀನನಾಗಿರುವನು. ಪ್ರಜಾಪತಿಯು ಅಧಿದೇವತೆಯಾದರೆ ಯಮನು ಪ್ರತ್ಯಧಿದೇವತೆಯಾಗಿರುವನು.

ಶನಿಯ ದೃಷ್ಟಿಯು ಅಧೋದೃಷ್ಟಿಯಾಗಿದೆ. ಕೆಳಗೆ ನೋಡುತ್ತಿರುವ ಶನಿಯ ದೃಷ್ಟಿಯು ಅತಿಕ್ರೂರವಾಗಿದೆ. ಆದ್ದರಿಂದಲೇ ಶನಿದೇವರ ದೇವಸ್ಥಾನದಲ್ಲಿ ಶನಿದೇವನಿಗೆ ಸಾಷ್ಟಾಂಗ ಪ್ರಣಾಮವು ವಿಹಿತವಾಗಿಲ್ಲ. ಅವನ ದೃಷ್ಟಿಗೆ ಸಿಗದಂತೆ ನಮಸ್ಕರಿಸಬೇಕು. ಆದ್ದರಿಂದ ಶನಿಯ ಎದುರಿಗೆ ಹೊರತು ಉಳಿದ ಸ್ಥಳಗಳಲ್ಲಿ ನಮಸ್ಕರಿಸಬಹುದು.

ಅಧೋದೃಷ್ಟೇ ನಮಸ್ತುಭ್ಯಂ ಸಂವರ್ತಕ ನಮೋನಮಃ।

ಶನಿಗೆ ಎಳ್ಳು ದೀಪ

ಶನಿಯು ತುಲಾರಾಶಿ, ಧನುಸ್ಸು, ಮೀನ, ಮಕರ - ಕುಂಭಗಳಲ್ಲಿ ಇರುವಾಗ ಒಳ್ಳೆಯದನ್ನೆ ಮಾಡುವನು, ಮೇಷ ಹಾಗೂ ಸಿಂಹರಾಶಿಗಳಲ್ಲಿ ಅತಿಯಾಗಿ ಪೀಡಿಸುವನು. ಗೋಚಾರದಲ್ಲಿ ಚಂದ್ರನ ಹಿಂದಿನ ಹಾಗೂ

ಚಂದ್ರನಿರುವ, ಚಂದ್ರನ ಮುಂದಿನ ಮನೆಗೆ ಬಂದಾಗ ಏಳುವರೆ ಶನಿಕಾಟವೆನ್ನುವರು. ಆಗ ಎಳ್ಳುದಾನ, ಎಳ್ಳುದೀಪದಾನ, ಕಪ್ಪು ವಸ್ತ್ರದಾನ, ವಿಷ್ಣು ಸಹಸ್ರನಾಮ ಪಾರಾಯಣ ಇವುಗಳಿಂದ ಪೀಡೆಯನ್ನು ಪರಿಹರಿಸಿಕೊಳ್ಳಬಹುದು.

39. ಶನಿಯ ಕ್ರೂರದೃಷ್ಟಿಗೆ ಕಾರಣ

ಬ್ರಹ್ಮವೈವರ್ತ ಪುರಾಣವು ಶನೈಶ್ಚರನ ದೃಷ್ಟಿಕ್ರೂರವಾಗಲು ಕಾರಣವನ್ನು ತಿಳಿಸಿದೆ. ಬಾಲ್ಯದಿಂದಲೂ ಕೃಷ್ಣಭಕ್ತನಾದ ಶನಿಯು ಧ್ಯಾನಮಗ್ನನಾಗಿದ್ದನು. ಚಿತ್ರರಥನ ಮಗಳು ಚೈತ್ರರಥೀ ಶನಿಯನ್ನು ವಿವಾಹವಾಗಿದ್ದಳು. ಒಂದು ದಿನ ಋತು ಸ್ನಾತಳಾದ ಅವಳು ಸತ್ಸಂತಾನಕ್ಕಾಗಿ ತನ್ನ ಪತಿಯ ಮುಖ ನೋಡಬೇಕೆಂದು ಸರ್ವಾಭರಣಭೂಷಿತೆಯಾಗಿ ಬಂದಳು. ಮುನಿಗಳ ಮನಸ್ಸನ್ನು ಕದಡುವ ರೂಪಸಿರಿಯಿಂದ ಯುಕ್ತಳಾಗಿದ್ದಳು. ಆದರೆ ಶನಿಯು ಹರಿಪಾದದಲ್ಲಿ ತನ್ನ ಮನಸ್ಸು ಮೊದಲಾದ ಇಂದ್ರಿಯಗಳನ್ನಿಟ್ಟಿದ್ದನು. ಪತ್ನಿಯು ಅವನನ್ನು ಸಮೀಪಿಸಿ ನನ್ನ ರೂಪವನ್ನು ನೋಡು ಎಂದರೂ ಬಾಹ್ಯಪ್ರಪಂಚಕ್ಕೆ ಬರಲಿಲ್ಲ. ಆಕೆಯನ್ನು ನೋಡಲಿಲ್ಲ. ಇದರಿಂದ ಕ್ಷುದ್ಧಳಾದ ಶನಿಪತ್ನಿಯು ಶಪಿಸಿದಳು.

ಏಕದಾ ಸಾ ಋತುಸ್ನಾತಾ ಸುವೇಶಂ ಸ್ವಂ ವಿಧಾಯ ಚ।
ರತ್ನಾಲಂಕಾರ ಸಂಯುಕ್ತಾ ಮುನಿಮಾನಸಮೋಹಿನೀ।
ಹರಿಪಾದಂ ಧ್ಯಾಯಮಾನಂ ಸಾ ಮಾಂ ಪಶ್ಯೇತ್ಯುವಾಚ ಹ।
ಶಶಾಪ ಮಾಮಪಶ್ಯಂ ತು ಋತುನಷ್ಟಾ ಸ್ವಕೋಪತಃ॥

ನನ್ನ ಋತುವು ನಷ್ಟವಾಗುವಂತೆ ಮಾಡಿದೆ. ನನ್ನನ್ನು ನೋಡಲೂ ಇಲ್ಲ. ಇಂಥಹ ನಿನ್ನ ದೃಷ್ಟಿಯಿಂದ ಯಾರನ್ನೂ ನೋಡದಂತಾಗಲೀ ನೀನು ನೋಡಿದ ವಸ್ತು ತಕ್ಷಣ ನಾಶ ಹೊಂದಲಿ ಎಂದು.

ನ ದೃಷ್ಟಾಹಂ ತ್ವಯಾ ಯೇನ ನ ಕೃತಂ ಋತುರಕ್ಷಣಮ್।
ತ್ವಯಾ ದೃಷ್ಟಂ ತು ಯದ್‌ವಸ್ತು ಮೂಢ ಸರ್ವಂ ವಿನಶ್ಯತಿ॥

ಧ್ಯಾನಾನಂತರದಲ್ಲಿ ಶನಿಯು ಪತ್ನಿಯನ್ನು ಸಮಾಧಾನಪಡಿಸಿದನು. ಪಶ್ಚಾತ್ತಾಪದಿಂದ ದಗ್ಧಳಾದರೂ ಶಾಪವನ್ನು ಪರಿಹರಿಸಲು ಸಮರ್ಥಳಾಗಲಿಲ್ಲ.

ಅಹಂ ಚ ವಿರತೇ ಧ್ಯಾನೇ ತಾಮತೋಽಹಂ ಪುರಾ ಸತೀಮ್।
ಶಾಪಂ ಮೋಕ್ತುಂ ನ ಶಕ್ತಾ ಸಾ ಪಶ್ಚಾತ್ತಾಪಂ ಚಕಾರ ಹ॥

ಶನಿಯು ಪ್ರಾರಬ್ಧ ಕರ್ಮವನ್ನು ಕಲ್ಪಕೋಟಿಗಳು ಕಳೆದರೂ ಅನುಭವಿಸಲೇಬೇಕಷ್ಟೆ ಎಂದು ಸುಮ್ಮನಾದನು.

ಶುಭಾಶುಭಂ ವಾ ಯತ್ ಕರ್ಮ ಕೋಟಿಕಲ್ಪೈರ್ನ ಲುಪ್ಯತೇ।

ಅಂದಿನಿಂದ ಯಾವ ವಸ್ತುವನ್ನು ನಾನು ನೋಡುವುದಿಲ್ಲ. ತಲೆ ತಗ್ಗಿಸಿಕೊಂಡೆ ಇರುವೆನು. ಆದ್ದರಿಂದ ಶನಿಗೆ ಅವನ ಮುಂದೆ ಸಾಷ್ಟಾಂಗ ಪ್ರಣಾಮವನ್ನು ಮಾಡಬಾರದು.

ಇವನ ದೃಷ್ಟಿಗೆ ಬಿದ್ದ ಶಿವಪಾರ್ವತಿಯರ ಪ್ರೇಮಪುತ್ರ ಗಣಪತಿಯೇ ತನ್ನ ತಲೆಯನ್ನು ಕಳೆದುಕೊಂಡಿರುವನು.

ಪಾರ್ವತಿಯ ಪತ್ರನಾದ ಗಣಪತಿಯ ಹುಟ್ಟಿದ ದಿನದಂದು ಕೈಲಾಸದಲ್ಲಿ ಭಾರಿ ಉತ್ಸವ ನಡೆದಿದೆ. ದೇವಾನುದೇವತೆಗಳು ಬಂದು ತಾಯಿ ಮತ್ತು ಮಗುವನ್ನು ನೋಡಿ ಸಂತೋಷಪಟ್ಟರು.

ಸೂರ್ಯಪುತ್ರನಾದ ಶನಿಯು ತಾಯಿ ಮಕ್ಕಳನ್ನು ನೋಡಲು ಬಂದನು. ಪಾರ್ವತಿಗೆ ನಮಸ್ಕರಿಸಿದನು. ಪಾರ್ವತಿಯಾದರೂ ಆಶೀರ್ವದಿಸಿ ಕುಶಲವನ್ನು ಕೇಳಿದಳು. ತಾಯಿ ಮಗುವನ್ನು ನೋಡಲು ಬಂದ ಶನಿಯು ನೆಲದಲ್ಲಿ ನೆಟ್ಟದೃಷ್ಟಿಯನ್ನು ಕಿತ್ತಲಿಲ್ಲ ಮಗುವತ್ತ ದೃಷಿಯನ್ನು ಹರಿಸಲಿಲ್ಲ. ಪಾರ್ವತಿಯು ಕೇಳಿಯೇಬಿಟ್ಟಳು. ''ನನ್ನ ಮಗುವನ್ನು ಏಕೆ ನೋಡುತ್ತಿಲ್ಲ'' ಎಂದು.

ಕಥಂ ನ ಪಶ್ಯಸಿ ಮಾಂ ಸಾಧೋ ಬಾಲಕಂ ಚ ಗ್ರಹೇಶ್ವರ।

ಶನಿಯು ತನ್ನ ದೃಷ್ಟಿಯ ಕ್ರೂರವಾದ ಶಾಪದ ಕಥೆಯನ್ನು ಹೇಳಿ ಅಂದಿನಿಂದ ನಾನು ಪ್ರಾಣಿವಧವಾಗುತ್ತದೆಂಬ ಭಯದಿಂದ ನತಕಂಧರನಾಗಿದ್ದೇನೆ ಎಂದನು.

ತೇನ ಮಾತಃ ನ ಪಶ್ಯಾಮಿ ಕಿಂಚಿದ್ ವಸ್ತು ಸ್ವ ಚಕ್ಷುಷಾ।
ತತಃ ಪ್ರಭೃತಿ ನಮ್ರಾಸ್ಯಃ ಪ್ರಾಣಿಹಿಂಸಾಭಯಾದಹಮ್॥

ಪಾರ್ವತಿಯಾದರೂ ದೈವನಿಯಮವನ್ನು ಮೀರುವವರಾರು? ಮಗುವನ್ನು ನೋಡಲು ಬಂದಿರುವ ನೀನು ನೋಡದೆ ಹಿಂದಿರುಗಬೇಡ

ಎಂದಳು. ಪಾರ್ವತಿಯು ಮಾತನ್ನು ಕೇಳಿ ಡೋಲಾಯಮಾನ ಮನಸ್ಸುಳ್ಳವನಾಗಿ ನೋಡಲೋ ಬೇಡವೊ ಎಂದು ಚಿಂತಿಸಿ ಕಡೆಗೆ ನೋಡಲು ತೀರ್ಮಾನಿಸಿ ಮಗುವನ್ನು ಬಲಗಣ್ಣಿನ ತುದಿಯಿಂದ ನೋಡಿದ ಮಾತ್ರಕ್ಕೆ ರುಂಡವು ಮುಂಡದಿಂದ ಬೇರೆಯಾಗಿತ್ತು.

ಸವ್ಯಲೋಚನಕೋಣೇನ ದದರ್ಶ ಚ ಶಿಶೋರ್ಮುಖಮ್।
ಶನಿಶ್ಚ ದೃಷ್ಟಿಮಾತ್ರೇಣ ಚಿಚ್ಛೇದ ಮಸ್ತಕಂ ಯಥಾ॥

ಅಲ್ಲಿ ನೆರೆದಿದ್ದ ದೇವತೆಗಳು ಚಿತ್ರಲಿಖಿತ ಬೊಂಬೆಗಳಂತೆ ಆಶ್ಚರ್ಯ ಚಕಿತರಾದರು. ವಿಷ್ಣುವು ಪುಷ್ಪಭದ್ರಾನದೀ ತೀರದಲ್ಲಿ ಉತ್ತರಕ್ಕೆ ತಲೆ ಹಾಕಿ ಮಲಗಿದ್ದ ಆನೆಯನ್ನು ಚಕ್ರದಿಂದ ಕತ್ತರಿಸಿ ತಂದು ಹುಂಕಾರ ಉಚ್ಚಾರಣೆಯಿಂದಲೇ ಮಗುವನ್ನು ಬದುಕಿಸಿದನು.

ಜೀವನಂ ಜೀವಯಾಮಾಸ ಹುಂಕಾರೋಚ್ಚಾರಣೇನ ಚ।

-ಬ್ರಹ್ಮವೈವರ್ತ ಗಣೇಶಖಂಡ

ಇದು ಪೌರಾಣಿಕ ವಿಷಯವಾದರೆ ಜಾಗ್ರದವಸ್ಥಾಪ್ರೇರಕನಾದ ವಿಶ್ವಂಭರನ ಹತ್ತೊಂಭತ್ತು ಮುಖಗಳಲ್ಲಿದ್ದ ಮಧ್ಯಮುಖವು ಗಜಪತಿಯಂತಿದ್ದು ಅದರ ಉಪಾಸನೆಯಿಂದ ಗಣಪತಿಯು ಗಣವದನನಾದನು ಎಂಬುದು ತತ್ತ್ವ ಅಂತು ಶನೈಶ್ಚರನ ದೃಷ್ಟಿ ಕ್ರೂರ ಎಂದು ತಿಳಿಸುವಲ್ಲಿ ಮಾತ್ರ ತಾತ್ಪರ್ಯ, ಭಗವಂತನು ಕರ್ತುಂ, ಅಕರ್ತುಂ ಅನ್ಯಥಾಕರ್ತುಂ ಸಮರ್ಥ ಎಂಬ ವಿಷಯಕ್ಕೂ ಈ ಕಥೆಯಲ್ಲಿ ಒತ್ತು ನೀಡಲಾಗಿದೆ.

40. ನವಗ್ರಹಗಳ ಪ್ರದಕ್ಷಿಣೆ ನಮಸ್ಕಾರ

ಸೂರ್ಯಾದಿ ನವಗ್ರಹಗಳು ಶಿಂಶುಕುಮಾರರೂಪೀ ಭಗವಂತನ ಅಧೀನರಾಗಿದ್ದು ಭಗವಂತನ ನಿಯಮದಂತೆ ಚಾಚೂತಪ್ಪದೆ ನಡೆಯುತ್ತವೆ.

ನವಗ್ರಹಗಳಿಗೆ ನಮಸ್ಕರಿಸುವಾಗ

ಇವುಗಳಲ್ಲಿ ಕೆಲವು ಗ್ರಹಗಳಿಗೆ ಊರ್ಧ್ವ ಬಾಹುವಾಗಿ ನಮಸ್ಕರಿಸಬೇಕು. ಸೂರ್ಯನಿಗೆ, ಕುಜನಿಗೆ (ಅರ) ರಾಹು, ಶನಿ, ಈ ಗ್ರಹಗಳಿಗೆ ನಮಸ್ಕರಿಸುವಾಗ ಮತ್ತು ಜಪ ಮಾಡುವಾಗಲೂ ಊರ್ಧ್ವಪಾಣಿಯಾಗಿಯೇ ಮಾಡಬೇಕು.

ಚಂದ್ರ ಮತ್ತು ಕೇತುವಿಗೆ ಅಧಃಪಾಣಿಯಾಗಿ ಎಂದರೆ ಹಸ್ತಗಳನ್ನು ಭೂಮಿಗೆ ತೋರಿಸುವಂತೆ ನಮಸ್ಕರಿಸಬೇಕು. ಉಳಿದ ಗುರು ಶುಕ್ರ ಮತ್ತು ಬುಧ ಗ್ರಹಗಳಿಗೆ ಶುದ್ಧಪಾಣಿಯಾಗಿ ಜಪನಮಸ್ಕಾರಾದಿಗಳನ್ನು ಮಾಡಬೇಕು.

ಅಂದರೆ ಊರ್ಧ್ವ ಅಥವಾ ಅಧಃಪಾಣಿ ಎಂಬ ನಿಯಮವಿಲ್ಲದೆ ನಮಸ್ಕರಿಸಬೇಕು.

ಸೂರ್ಯಾರ ರಾಹುಮಂದಾನಾಂ ಊರ್ಧ್ವಪಾಣೌ ಜಪೇದ್ ಬುಧಃ।
ಸೋಮಕೇತ್ವೋರಧಃ ಪಾಣ್ಯಾ ಅನ್ಯೇಷಾಂ ಶುದ್ಧಪಾಣಿಕಃ॥

ನವಗ್ರಹ ಪ್ರದಕ್ಷಿಣೆಯ ನಮಸ್ಕಾರ

ನಮಃ ಸೂರ್ಯಾಯ ಚಂದ್ರಾಯ ಮಂಗಳಾಯ ಬುಧಾಯ ಚ।
ಗುರುಃ ಶುಕ್ರ ಶ್ಶನಿಭ್ಯಶ್ಚ ರಾಹವೇ ಕೇತವೇ ನಮಃ॥

ಅಥವಾ

ವಾದಿರಾಜರಿಂದ ರಚಿತವಾದ

ಭಾಸ್ವಾನ್ ಮೇ ಭಾಸಯೇತ್ ತತ್ವಂ ಚಂದ್ರಶ್ಚಾಹ್ಲಾದಕೃತ್ ಭವೇತ್।
ಮಂಗಲೋ ಮಂಗಲಂ ದದ್ಯಾತ್ ಬುಧಶ್ಚ ಬುಧತಾಂ ದಿಶೇತ್।
ಗುರುಶ್ಚ ಗುರುತಾಂ ದದ್ಯಾತ್ ಕವಿಶ್ಚ ಕವಿತಾಂ ದಿಶೇತ್।
ರಾಹುರ್ಮೇ ರಹಯೇದ್ ರೋಗಂ ಗ್ರಹಾಃ ಸಂತು ಕರಗ್ರಹಾಃ।
ಶನೇ ದಿನಮಣೇಃ ಸೂನೋ ಹ್ಯನೇಕಗುಣಸನ್ಮಣೇ
ಅನಿಷ್ಟಂ ಹರ ಮೇಽಭೀಷ್ಟಂ ಕುರು ಮಾ ಕುರು ಸಂಕಟಂ
ಶನೇರನುಗ್ರಹಾರ್ಥಾಯ ಶತ್ರೂಣಾಂ ನಿಗ್ರಹಾಯ ಚ।
ವಾದಿರಾಜಯತಿಪ್ರೋಕ್ತಂ ಗ್ರಹಸ್ತೋತ್ರಂ ಸದಾ ಪಠೇತ್॥

41. ರಾಹು ಕೇತುಗಳಿಗೆ ಅಪ್ರದಕ್ಷಿಣೆ

ನವಗ್ರಹ ಸ್ತೋತ್ರವನ್ನು ಪಠಿಸುತ್ತಾ ಏಳು ಪ್ರದಕ್ಷಿಣೆಗಳನ್ನು ಹಾಕಿ ಉಳಿದ ರಾಹು ಮತ್ತು ಕೇತುಗಳಿಗೆ ಅಪ್ರದಕ್ಷಿಣೆಯಾಗಿ ಎರಡು ಪ್ರದಕ್ಷಿಣೆ ಬರಬೇಕು ಮೇರುಪರ್ವತವನ್ನು ರಾಹು, ಕೇತುಗಳು ಅಪ್ರದಕ್ಷಿಣೆಯಾಗಿಯೇ ಸುತ್ತುವರು.

ವಾರ ವಿಶೇಷಫಲ

ಸೋಮವಾರವು ಅಮಾವಾಸ್ಯೆಯಿಂದ ಯುಕ್ತವಾಗಿದ್ದಾಗ ಆದಿತ್ಯವಾರವು ಸಪ್ತಮಿಯಿಂದ, ಮಂಗಳವಾರ ಚತುರ್ಥೀಯುಕ್ತವಾದಾಗ, ಗುರುವಾರ ಅಷ್ಟಮಿಯುಕ್ತವಾದಾಗ ಪುಣ್ಯ ಕರ್ಮವಾಗಲಿ, ಕರ್ಮ ಕರ್ಮವನ್ನು ಮಾಡಿದರೆ ಅಕ್ಷಯಫಲ.

ಅರವತ್ತು ಸಾವಿರ ಜನ್ಮವೆತ್ತಿದಾಗಲೂ ಆ ಪುಣ್ಯ ಪಾಪದ ಫಲಗಳು ಅನುಸ್ಯೂತವಾಗಿರುತ್ತವೆ.

ಸೋಮವಾರೇಽಪ್ಯಮಾವಾಸ್ಯಾ ಆದಿತ್ಯಾಹೇ ತು ಸಪ್ತಮೀ।
ಚತುರ್ಥ್ಯಂಗಾರವಾರೇ ತು ಅಷ್ಟಮೀ ಚ ಬೃಹಸ್ಪತೌ॥
ಅತ್ರ ಯತ್ ಕ್ರಿಯತೇ ಪಾಪಮಥವಾ ಧರ್ಮಸಂಚಯಃ।
ಷಷ್ಟಿಜನ್ಮಸಹಸ್ರಾಣಿ ಪ್ರತಿ ಜನ್ಮ ತದಕ್ಷಯಂ॥

ಶನಿಯ ಕಾಟ ವಿಷ್ಣುಭಕ್ತರಿಗೆ ಇಲ್ಲ

ಶನಿದೇವನು ವಿಷ್ಣುಭಕ್ತನಾಗಿದ್ದು ವಿಷ್ಣು ಸಹಸ್ರನಾಮ ಸ್ತೋತ್ರ ಮತ್ತು ನಿರಂತರ ಭಗವಂತನ ಪೂಜಕರನ್ನು ಪೀಡಿಸುವುದಿಲ್ಲ.

ಶನಿವಾರದಂದು ಪೂರ್ವದಿಕ್ಕಿನ ಪ್ರಯಾಣ ನಿಷೇಧ

ಶನಿವಾರ, ರವಿವಾರ, ಮಂಗಳವಾರ, ಪ್ರಯಾಣವು ಅಷ್ಟು ಪ್ರಶಸ್ತವಲ್ಲ.

ಹಾಗೆಯೇ ಶುಕ್ರ ಹಾಗೂ ರವಿವಾರ ಪಶ್ಚಿಮ ದಿಕ್ಕಿಗೆ ಪ್ರಯಾಣ ಮಾಡಬಾರದು. ಬುಧ ಹಾಗೂ ಕುಜವಾರ ಉತ್ತರದಿಕ್ಕಿಗೂ ಶನಿ ಹಾಗೂ ಸೋಮವಾರ ಪೂರ್ವದಿಕ್ಕಿಗೂ, ಗುರುವಾರ ದಕ್ಷಿಣ ದಿಕ್ಕಿಗೂ ಪ್ರಯಾಣವನ್ನು ಮಾಡಬಾರದು ಅಂದಿನ ದಿವಸಗಳಲ್ಲಿ ಈ ಗ್ರಹಗಳು ಆ ದಿಕ್ಕಿನಲ್ಲಿ ಕ್ರೂರಿಗಳಾಗಿರುತ್ತಾರೆ.

ಶುಕ್ರಾದಿತ್ಯಾದಿನೇ ನ ವಾರುಣದಿಶಂ। ನಜ್ಞೇ ಕುಜೇ ಚೋತ್ತರಾಂ।
ಮಂದೇಂದೋಶ್ಚ ದಿನೇ ನ ಶಕ್ರಕಕುಭಂ। ಯಾಮ್ಯಾಂ ಗುರೌ ನ ವ್ರಜೇತ್॥

ಈ ಆಧುನಿಕ ಯುಗದಲ್ಲಿ ನವಗ್ರಹಗಳ ಕ್ರೂರತ್ವವನ್ನು ತಿಳಿಯಲಾರರು ಹೀಗಾಗಿ ಆಪತ್ತನ್ನು ತಾವೇ ಪಡೆಯುವರು.

42. ನಾಗಪ್ರತಿಷ್ಠೆ, ನಾಗರಪ್ರದಕ್ಷಿಣೆ=ಇಪ್ಪತ್ತಾಲ್ಕುನಮಸ್ಕಾರ

ಪುತ್ರಭಾವದಲ್ಲಿ ರಾಹುವಿದ್ದು ಕುಜನ ದೃಷ್ಟಿ ಆ ಮನೆಯಲ್ಲಿ ಬಿದ್ದಿದ್ದರೆ ಪುತ್ರಹೀನನಾಗುವನು. ಕುಜನ ಮನೆಗಳಾದ ಮೇಷರಾಶಿ ಮತ್ತು ವೃಶ್ಚಿಕ ರಾಶಿಗಳಲ್ಲಿ ರಾಹುವಿದ್ದರೂ ಸರ್ಪದೋಷವಿರುತ್ತದೆ. ಸರ್ಪದೋಷವಿದ್ದರೆ ಸಂತತಿಹೀನನಾಗುವನು. ಸರ್ಪಗಳನ್ನು, ನಾಗಗಳನ್ನು ಪ್ರತಿಷ್ಠಾಪಿಸಿ ಆ ನಾಗಗಳ ಮಧ್ಯೆ ಮೇಲೆ ಸಂತಾನ ಗೋಪಾಲಕೃಷ್ಣನನ್ನು ಕೆತ್ತಿ ಭಕ್ತಿಯಿಂದ ಪೂಜಿಸಿದರೆ ಮಕ್ಕಳಾಗುವುದು.

ನಾಗಪ್ರತಿಷ್ಠೆಯನ್ನು ಅಶ್ವತ್ಥ ಮತ್ತು ನಿಂಬವೃಕ್ಷಗಳಿರುವ ಸ್ಥಳದಲ್ಲಿ ಮಾಡುವುದು ಸಂಪ್ರದಾಯವಾಗಿದೆ. ಅಶ್ವತ್ಥದ್ರುಮವು ಸಂತತಿಕಾರಕವಾಗಿದ್ದು ಅದರ ನಮಸ್ಕಾರ ಪ್ರದಕ್ಷಿಣೆ ಮಾಡುವಾಗ ಅದರ ಕೆಳಗಿರುವ ನಾಗನನ್ನೂ ಪ್ರದಕ್ಷಿಣೆ ಮಾಡಿದಂತಾಗಿ ಅನಿಷ್ಟನಿವೃತ್ತಿಯಾಗಿ ಇಷ್ಟಪ್ರಾಪ್ತಿಯಾಗುವುದು.

ನಾಗಪ್ರದಕ್ಷಿಣೆಯನ್ನು ಇಪ್ಪತ್ತನಾಲ್ಕು ಮಾಡಿದರೆ ಉತ್ತಮ, ಅಥವಾ ಒಂದು ಮಂಡಲ ಪ್ರದಕ್ಷಿಣೆ ಮಾಡಿದರೆ ಅಧಿಕ ಫಲ ಹೀಗೆ.

ನಲವತ್ತೆಂಟು ದಿವಸ ಪ್ರದಕ್ಷಿಣೆ ನಮಸ್ಕಾರ ಮಾಡಿದರೆ ಸರ್ಪದೋಷವು ಹೋಗಿ ಪುತ್ರ ಸಂತಾನ ಪ್ರಾಪ್ತವಾಗುತ್ತದೆ.

ಉಪನಯನವಾದನಂತರ ವಟುವನ್ನು ಅಶ್ವತ್ಥವೃಕ್ಷಕ್ಕೆ ಪ್ರದಕ್ಷಿಣೆ ಮಾಡಿಸುವ ಪದ್ಧತಿಯಿದೆ. ಹಾಲನ್ನು ಅಶ್ವತ್ಥವೃಕ್ಷದ ಬುಡಕ್ಕೆ ಹಾಕುವುದು ಹಾಲನ್ನು ಅಶ್ವತ್ಥ ನಾರಾಯಣನಿಗೆ ನೈವೇದ್ಯ ಮಾಡಿ ಪೂಜಿಸಿ ಪ್ರಸಾದರೂಪವಾಗಿ ಬಂಧುಗಳು ಸ್ವೀಕರಿಸುವ ಪದ್ಧತಿಯಿದೆ.

ಇದರಿಂದ ವಟುವಿನಲ್ಲಿ ಸರ್ಪದೋಷವಿದ್ದರೆ ಅದು ಪರಿಹೃತ-ವಾಗುತ್ತದೆ. ಅಶ್ವತ್ಥದ ಸೇವನೆಯಿಂದ ಆರೋಗ್ಯವೃದ್ಧಿಯಾಗುತ್ತದೆ.

ನಾಗಪಂಚಮೀ ಕ್ಷೀರಸೇಚನೆ

ಬ್ರಹ್ಮನಿಂದ ಜನಿಸಿದ ಮರೀಚಿಯ ಪುತ್ರನೇ ಕಶ್ಯಪಋಷಿ, ಸೂಕ್ಷ್ಮವಾದ ವಸ್ತುವನ್ನು ನೋಡುವವನಾದ್ದರಿಂದಲೇ ಪಶ್ಯಕನಾಗಿರುವನು.

(ಪಶ್ಯತೀತಿ ಪಶ್ಯಃ ಪಶ್ಯಏವ ಪಶ್ಯಕಃ)

ಅಜ್ಞಾನವನ್ನು ಪರಿಹರಿಸುವವನು ಆದ್ದರಿಂದಲೂ ಕಶ್ಯಪನು.

(ಕಶ್ಯಂ ಅಜ್ಞಾನಂ ಪಿಬತಿ ಶೋಷಯತಿ ಎಂದು ನಿರುಕ್ತಿ)

ಕಶ್ಯಪರಿಗಿದ್ದ ಹದಿಮೂರು ಮಂದಿ ಪತ್ನಿಯರಲ್ಲಿ ಕದ್ರೂ ಎಂಬ ಪತ್ನಿಯಲ್ಲಿ ಸರ್ಪಗಳೆ ಜನಿಸಿದವು. ಅವುಗಳಲ್ಲಿ ಅನಂತ, ವಾಸುಕಿ, ಕಂಬಲ, ಕರ್ಕೋಟಕ ಪದ್ಮ, ಮಹಾಪದ್ಮ, ಶಂಖ, ಕುಲಕ ಮುಂತಾದುವು ಪ್ರಧಾನವಾದದ್ದು. ಇವುಗಳ ವಿಷದಿಂದ ಕೂಡಿರುವ ಕಣ್ಣಿನ ನೋಟದಿಂದಲೇ ಬ್ರಹ್ಮನಿಂದ ಸೃಷ್ಟರಾದ ಪ್ರಜೆಗಳು ನಾಶಹೊಂದಿದರು. ಬ್ರಹ್ಮನು ಅವುಗಳನ್ನು ಕರೆದು ಈ ರೀತಿ ಶಾಪವನ್ನು ಕೊಟ್ಟನು.

ಮುಂದೆ ಬರುವ ವೈವಸ್ವತಮನ್ವಂತರದಲ್ಲಿ ನೀವು ತಾಯಿಯ ಶಾಪದಿಂದಲೇ ಮೃತರಾಗಿರಿ. ಸ್ವಾಯಂಭುವ ಮನ್ವಂತರದಲ್ಲೂ ನೀವು ನಾಶವಾಗುವಿರಿ.

ಭವಾಂತರೇ ತಥಾನ್ಯಸ್ಮಿನ್ ಮಾತುಃ ಶಾಪಾತ್ ಸುದಾರುಣಾತ್।
ಭವಿತಾತಿಕ್ಷಯೋ ಘೋರೋ ನೂನಂ ಸ್ವಾಯಂಭುವಾಂತರೇ॥

ಸರ್ಪಗಳಾದರೂ ಬ್ರಹ್ಮನ ಕಾಲಿಗೆ ಬಿದ್ದು ಕ್ಷಮೆಯಾಚಿಸಿದುವು. ತುಷ್ಟನಾದ ಬ್ರಹ್ಮದೇವನು, ಪಾತಾಳ, ವಿತಲ, ಸುತಲ ಹೀಗೆ ವಾಸಿಸಲು ವಾಸಸ್ಥಾನವನ್ನು ಕಲ್ಪಿಸಿಕೊಟ್ಟನು.

ಪಂಚಮ್ಯಾಂ ಪೂಜಯೇನ್ನಾಗಾನ್ ಅನಂತಾದ್ಯಾನ್ ಮಹೋರಗಾನ್।
ಕ್ಷೀರಂ ಸರ್ಪಿಸ್ತು ನೈವೇದ್ಯಂ ದೇಯಂ ಸರ್ಪವಿಷಾಪಹಮ್॥
ಯಜೇತ್ ತಾನ್ ಸಿತಾನ್ನಾಗಾನ್ ದಷ್ಟಮುಕ್ತೋ ದಿವಂ ವ್ರಜೇತ್।

ಏಳನೇ ಮನ್ವಂತರ ಪ್ರಾರಂಭವಾಗುವವರೆಗೂ ಸುಖದಿಂದ. ಏಳನೆಯ ಮನ್ವಂತರದಲ್ಲಿ ಕಾಶ್ಯಪಿಯ ಮಕ್ಕಳಾಗಿ ಅಗ್ನಿಯಿಂದ ಭಕ್ಷಿಸಲ್ಪಡುವಿರಿ. ಕ್ರೂರರಾದವರು ಮಾತ್ರ ಅಗ್ನಿಗೆ ಆಹುತಿಯಾಗುವರು. ಎಲ್ಲರೂ ಅಲ್ಲ.

ಯೇ ವೈ ಕ್ರೂರಾ ಭೋಗಿನೋ ದುರ್ವಿನೀತಾಸ್ತೇಷಾಮಂತೋ ಭವಿತಾ ನಾನ್ಯಥಾ।

ಹೀಗೆ ಶಾಪ ಮತ್ತು ಶಾಪಪರಿಹಾರ ನಡೆದದ್ದು ಸ್ವಾಯಂಭುವ ಮನ್ವಂತರದ ಪಂಚಮಿಯಂದು. ಇದರಿಂದ ನಾಗಗಳಿಗೆ ಪಂಚಮಿಯು ಪ್ರೀತಿಕರವಾಗಿದೆ.

ಏವಂ ಶಾಪಂ ತೇ ತು ಲಬ್ಧ್ವಾ ಪ್ರಸಾದಂ ಚ ಚತುರ್ಮುಖಾತ್।
ಏತತ್ ಸರ್ವಂ ಚ ಪಂಚಮ್ಯಾಂ ತೇಷಾಂ ಜಾತಂ ಮಹಾತ್ಮನಾಮ್।
ಅತಸ್ತ್ವಿಯಂ ತಿಥಿರ್ಧನ್ಯಾ ಸರ್ವಪಾಪಹರಾ ಶುಭಾ।
ಕ್ಷೀರೇಣ ಸ್ನಾಪಯೇನ್ನಾಗಾನ್ ತಸ್ಯ ಯಾಸ್ಯಂತಿ ಮಿತ್ರತಾಮ್॥

ಪಂಚಮಿಯಂದು ಸರ್ಪಗಳನ್ನು ಕ್ಷೀರದಿಂದ ಅಭಿಷೇಕಿಸಿ ಕ್ಷೀರನೈವೇದ್ಯವನ್ನು ಅರ್ಪಿಸಿದರೆ ವಿಷಭಯವಿರುವುದಿಲ್ಲ.

ಆಸ್ತಿಕ ಮತ್ತು ನರ್ಮದೆ

ಆಸ್ತಿಕನ ಸ್ಮರಣೆ, ನರ್ಮದೆಯ ಸ್ಮರಣೆ ಮಾಡಿದವನಿಗೆ ಸರ್ಪದ ಭಯವಿರುವುದಿಲ್ಲ. ಆಸ್ತಿಕನನ್ನು ಸ್ಮರಿಸಿದರೂ ದೂರ ಹೋಗದೆ ಇರುವ ಸರ್ಪದ ತಲೆಯ ಛಿದ್ರವಾಗುತ್ತದೆ.

ಆಸ್ತಿಕವಚನಂ ಶ್ರುತ್ವಾ ಯ ಸರ್ಪೋ ನ ನಿವರ್ತತೇ।
ಶತಧಾ ಭಿದ್ಯತೇ ಮೂರ್ಧ್ನಿ ಶಿಂಶವೃಕ್ಷ ಫಲಂ ಯಥಾ॥- ರಾತ್ರಿಸೂಕ್ತ

ಸರ್ಪದ ವಿಷವು ದಂತದಲ್ಲಿರುವುದಿಲ್ಲ. ಕಣ್ಣಿನಲ್ಲಿರುತ್ತದೆ. ಬಲಕಣ್ಣಿನಲ್ಲಿರುವ ವಿಷವು ಸರ್ಪವು ಕೋಪಗೊಂಡಾಗ ವಿಷವು ತಲೆಗೂ, ತಲೆಯಿಂದ ವಿವಿಧ ನಾಡಿಗಳಿಗೂ ಸಂಚರಿಸಿ ನಾಡಿಗಳಿಂದ ಹಲ್ಲುಗಳಿಗೆ ಬರುತ್ತದೆ.

ದಕ್ಷಿಣಂ ನೇತ್ರಮಾಸಾದ್ಯ ವಿಷಂ ಸರ್ಪಸ್ಯ ತಿಷ್ಠತಿ।
ಸಂಕ್ರುದ್ಧಸ್ಯ ಸರ್ಪಸ್ಯ ವಿಷಂ ಗಚ್ಛತಿ ಮಸ್ತಕೇ॥
ಮಸ್ತಕಾದ್ ಧಮನೀಂ ಯಾತಿ ತತೋ ನಾಡೀಷು ತಿಷ್ಠತಿ।
ನಾಡಿಭ್ಯಾಂ ಗಚ್ಛತೇ ದಂಷ್ಟ್ರೇ ವಿಷಂ ತತ್ರ ಪ್ರವರ್ತತೇ॥

ಸರ್ಪಗಳ ಉತ್ಪತ್ತಿ ಕ್ರಮ

ಆಷಾಡ ಮತ್ತು ಜ್ಯೇಷ್ಠ ಮಾಸಗಳು ಸರ್ಪಗಳು ವಿಹಾರ ಮಾಡುವ ಮಾಸಗಳು. ಈ ಮಾಸಗಳಲ್ಲಿ ಸರ್ಪವು ಸರ್ಪಿಣಿಯೊಡನೆ ವಿಹರಿಸುತ್ತದೆ ಗರ್ಭಧಾರಣೆ ನಂತರ ನಾಲ್ಕು ತಿಂಗಳಲ್ಲಿ ಗರ್ಭವನ್ನು ಧರಿಸುತ್ತವೆ, ಕಾರ್ತಿಕ ಮಾಸದಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಮೊಟ್ಟೆಗಳ ಸಂಖ್ಯೆ ೨೪೦.

ತತಃ ಕಾರ್ತಿಕಮಾಸೇ ತು ಅಂಡಕಾನಿ ಪ್ರಸೂಯತೇ।
ಅಂಡಕಾನಾಂ ತು ವಿಜ್ಞೇಯಂ ದ್ವೇಶತೇ ದ್ವೇ ಚ ವಿಂಶತಿಃ।

ತಾನಿಟ್ಟ ಮೊಟ್ಟೆಗಳನ್ನೆ ನುಂಗಿ ಒಂದು ಭಾಗವನ್ನು ಮಾತ್ರ ಉಳಿಸುತ್ತವೆ. ಆರು ತಿಂಗಳ ನಂತರ ಮೊಟ್ಟೆಯೊಡೆದು ಮರಿಗಳು ಹೊರಬರುತ್ತವೆ. ಸರ್ಪಗಳು ನೂರ ಇಪ್ಪತ್ತು ವರ್ಷ ಜೀವಿಸುತ್ತವೆ. ಹುಟ್ಟಿದ ಆರು ತಿಂಗಳನಂತರ ಪೊರೆ ಬಿಡುತ್ತವೆ.

ಆಯುಃಪ್ರಮಾಣಂ ಸರ್ಪಾಣಾಂ ಶತಂ ವಿಂಶೋತ್ತರಂ ಸ್ಮೃತಮ್।
ಪಣ್ಮಾಸಾಜ್ಜಾತಮಾತ್ರಸ್ತು ಕಂಚುಕಂ ವೈ ಪ್ರಮುಂಚತಿ॥

ಸರ್ಪಗಳಿಗೂ ಸುಮಾರು. ಇನ್ನೂರನಲವತ್ತು ಪಾದಗಳಿವೆ ಗೋವಿನ ರೋಮದಷ್ಟು ಸೂಕ್ಷ್ಮವಾಗಿರುತ್ತವೆ.

ಪಾದಾನಾಂ ಚಾಪಿ ವಿಜ್ಞೇಯಾ ದ್ವೇ ಶತೇ ದ್ವೇ ಚ ವಿಂಶತಿಃ।
ಗೋಲೋಮಸದೃಶಾ ಪಾದಾಃ ಪ್ರವಿಶಂತಿ ಕ್ರಮಂತಿ ಚ॥

ಸರಿಯಾಗಿ ಗರ್ಭದಾರಣೆ ಮಾಡಿ, ಸರಿಯಾದ ಕಾಲಕ್ಕೆ ಜನಿಸಿದ ಸರ್ಪಗಳಿಗೆ ವಿಷವೂ, ಆಯುಃ ಪ್ರಮಾಣವೂ ಅಧಿಕವಾಗಿರುತ್ತದೆ. ಅಕಾಲದಲ್ಲಿ ಜನಿಸಿದ ಸರ್ಪಗಳು ನಿರ್ವಿಷವಾಗಿದ್ದು, ಎಪ್ಪತ್ತೈದು ವರ್ಷಗಳು ಮಾತ್ರ ಆಯುಃ ಪ್ರಮಾಣವಿರುತ್ತದೆ.

ಅಕಾಲಜಾತಾ ಯೇ ಸರ್ಪಾ ನಿರ್ವಿಷಾಸ್ತೇ ಪ್ರಕೀರ್ತಿತಾಃ।
ಪಂಚಸಪ್ತತಿವರ್ಷಾಣಿ ಆಯುಸ್ತೇಷಾಂ ಪ್ರಕೀರ್ತಿತಮ್॥

ಸರ್ಪಗಳನ್ನು ಕೊಲ್ಲಬಾರದು

ಕಾಲಿಯ ಮತ್ತು ಅವನ ವಂಶದಲ್ಲಿ ಜನಿಸಿರುವ ನಾಗಸರ್ಪಗಳನ್ನು ಕೊಲ್ಲಬಾರದು. ಕೊಂದರೆ ಕೊಲ್ಲಿಸಿದರೆ ಬ್ರಹ್ಮಹತ್ಯಾಸಮನಾದ ಪಾಪ ಪ್ರಾಪ್ತವಾಗುತ್ತದೆ. ಹಾಗು ವಂಶನಾಂಶ, ದಾರಿದ್ರ್ಯ.

ತದ್ವಂಶಜಾತಾನ್ ಸರ್ಪಾಶ್ಚ ಹಂತಿ ಯೋ ಮಾನವಾಧಮಃ।
ಬ್ರಹ್ಮಹತ್ಯಾಸಮಂ ಪಾಪಂ ಭವಿತಾ ತಸ್ಯ ನಿಶ್ಚಿತಮ್॥
ವಂಶಾಯುಃಯಶಸಾಂ ಹಾನಿರ್ಭವಿತಾ ತಸ್ಯ ನಿಶ್ಚಿತಮ್।
ಧ್ರುವಂ ವರ್ಷಶತಂ ಕಾಲಸೂತ್ರಂ ಯಾಸ್ಯತಿ ಮದ್ದಿಯಾ॥

ದಂಡಾಘಾತವನ್ನು ಮಾಡಬಾರದು

ಸರ್ಪಗಳಿಗೆ ದಂಡಾಘಾತವನ್ನು ಮಾಡಿದರೆ ಕೊಂದ ಪಾಪಕ್ಕಿಂತಲೂ ದ್ವಿಗುಣ ಬ್ರಹ್ಮಹತ್ಯೆ ಪ್ರಾಪ್ತವಾಗುತ್ತದೆ. ಲಕ್ಷ್ಮೀದೇವಿಯೂ ಶಾಪವನ್ನು ಕೊಟ್ಟು ಆ ಮನೆಯನ್ನು ಬಿಟ್ಟು ಹೊರಡುವಳು.

ದ್ವಿಗುಣಂ ಬ್ರಹ್ಮಹತ್ಯಾಯಾಃ ಭವಿತಾ ತಸ್ಯ ಕಿಲ್ಬಿಷಮ್।
ಲಕ್ಷ್ಮೀರ್ಯಾಸ್ಯತಿ ತದ್ಗೇಹಾತ್ ಶಾಪಂ ದತ್ವಾ ಸುದಾರುಣಮ್॥

ಮೋದೇತ ಸಾಧುರಪಿ ವೃಶ್ಚಿಕ ಸರ್ಪಹತ್ಯಾ

ಭಾಗವತದಲ್ಲಿ ನರಸಿಂಹದೇವರು ಹಿರಣ್ಯಕಶಿಪುವನ್ನು ವಧೆ ಮಾಡಿದ ಮೇಲೆ ಪ್ರಹ್ಲಾದನನ್ನು ಕುರಿತು ಪ್ರಹ್ಲಾದ! ನಿಮ್ಮ ತಂದೆಯನ್ನು ಕೊಂದದ್ದಕ್ಕಾಗಿ ನಿನಗೆ ಬೇಸರವಿಲ್ಲವೆ? ಎಂದನು. ಪ್ರಹ್ಲಾದನು.

ಸಾಧುವೂ ಕೂಡ ಚೇಳು ಮತ್ತು ಸರ್ಪಗಳನ್ನು ಕೊಂದ ವಿಷಯ ಕೇಳಿದರೆ ಸಂತೋಷಪಡಬೇಕು ಎಂಬರ್ಥವುಳ್ಳ ಮೇಲಿನ ವಾಕ್ಯವನ್ನು ಹೇಳಿದ್ದಾನೆ. ಕಾರಣ ದುಷ್ಟ ಜಂತುವಾದ್ದರಿಂದ ಹಾಗೆಂದ ಮಾತ್ರಕ್ಕೆ ನಾಗಸರ್ಪ ಜಾತಿಯ ನಾಗಗಳನ್ನು ಕೊಲ್ಲುವುದು ಸರಿಯಲ್ಲ. ದುಷ್ಟ ಸರ್ಪಗಳಾದ ವಿಷಭರಿತವಾದ, ಮಂಡಲದ ಹಾವು, ಕಟ್ಟು ಹಾವು, ಮುಂತಾದುವುಗಳನ್ನು ಕೊಂದ ವಿಷಯ ಕೇಳಿದಾಗ ಸಂತಸಪಡಬೇಕೇ ವಿನಹ ಹೆಡೆಯಲ್ಲಿ ಚಿಹ್ನೆ ಇರುವ ಸರ್ಪಗಳನ್ನಲ್ಲ. ಅವುಗಳನ್ನು ಕೊಂದರೆ ದೋಷಪ್ರುತವಾಗಿದೆ.

ನಾಗಪ್ರತಿಷ್ಠೆ ಮಾಡಿದವರು ಪಡವಲವನ್ನು ಕತ್ತರಿಸಿ ತಿನ್ನಬಾರದು

ನಾಗಪ್ರತಿಷ್ಠೆ ಮಾಡಿದವರು ಪಡವಲಕಾಯಿಯನ್ನು ಕತ್ತರಿಸಿ ಉಪಯೋಗಿಸುವುದು ನಿಷಿದ್ಧವಾಗಿದೆ. ಕಾರಣ ಪಟೋಲವು (ಪಡವಲ) ಸರ್ಪಾಕಾರದಂತೆ ಇದ್ದು ಸರ್ಪದ ಸ್ಮರಣೆ ತರದೆ ಇರಲಾರದು.

ಸರ್ಪವನ್ನು ಕತ್ತರಿಸಿರುವ ಎಂಬ ಮಾನಸಿಕ ಭಾವನೆಯೂ ನಿಷಿದ್ಧವೆ.

ನಾಗಾನುಗ್ರಹಕಾಮೋ ವೈ ಪಟೋಲಂ ನ ಚ ಕರ್ತಯೇತ್।

ಹೀಗೆ ಪಂಚಮಿಯು ನಾಗಗಳಿಗೆ ಪ್ರೀತಿ ಪಾತ್ರವಾದ್ದರಿಂದಲೇ ಪಂಚಮಿ ದಿನ ಪ್ರಯಾಣ ಇಷ್ಟಾರ್ಥಸಿದ್ಧಿಯುಂಟುಮಾಡುತ್ತದೆ.

ಪಂಚಮ್ಯಾಮೀಪ್ಸಿತಾರ್ಥ ಯುತೋಸ್ಯಾತ್ ಷಷ್ಠ್ಯಾಂ ವ್ಯಾಧಿಃ ಭವೇತ್।
ಸಪ್ತಮ್ಯಾಂ ಅರ್ಥಲಾಭಃಸ್ಯಾತ್ ಅಷ್ಟಮ್ಯಾಮಸ್ತ್ರಪೀಡನಮ್॥

ನಾಗಗಳಿಗೆ ಅತಿ ಪ್ರಿಯವಾದ್ದರಿಂದಲೇ ಭಗವಂತನ ಚಿಹ್ನೆಯುಳ್ಳ ನಾಗಸರ್ಪಗಳನ್ನು ಕೊಂದರೆ ಸರ್ಪಕುಂಡದಲ್ಲಿ ಬೀಳುವನು. ನಾನಾವಿಧ ಪಾಪಗಳಿಗೆ ನಾನಾವಿಧ ನರಕಗಳಿವೆ. ಇವಲ್ಲದೆ ಎಂಭತ್ತಾರು ರೀತಿಯ ನರ ಕುಂಡಗಳನ್ನು ಬ್ರಹ್ಮವೈವರ್ತದಲ್ಲಿ ವಿವರಿಸಲಾಗಿದೆ. ಇವುಗಳಲ್ಲಿ ಮುವ್ವತ್ತೊಂದನೆಯ ಕುಂಡವೇ ಸರ್ಪಕುಂಡ. ಸರ್ಪಘಾತಿಯು ಈ ಕುಂಡದಲ್ಲಿ ಬೀಳುವನು.

ಹೀಗೆ ಆಯಾಯ ದೇವತೆಗಳಿಗೆ ಪ್ರದಕ್ಷಿಣೆ ನಮಸ್ಕಾರಗಳ ಕ್ರಮ ಮತ್ತು ಸಂಖ್ಯೆ ಮತ್ತು ಪುಷ್ಪಾದಿಗಳನ್ನು ಸರಿಯಾಗಿ ತಿಳಿದು ಪೂಜಾದಿಗಳನ್ನು ಮಾಡಿದರೆ ವಿಶೇಷಫಲ.

43. ದೇವಸ್ಥಾನದಲ್ಲಿ ಪ್ರದಕ್ಷಿಣೆ ನಂತರ ಕುಳಿತುಕೊಳ್ಳುವ ಉದ್ದೇಶ

ಭಕ್ತರು ದೇವಸ್ಥಾನಕ್ಕೆ ಹೋಗಿ ಪ್ರದಕ್ಷಿಣೆ. ನಮಸ್ಕಾರಾದಿಗಳು ಮುಗಿದ ಮೇಲೆ ದೇವಸ್ಥಾನದ ಮುಂದೆ ಜಗಲಿಯಲ್ಲಿ ಸ್ವಲ್ಪಕಾಲ ಕುಳಿತುಕೊಳ್ಳುವ ಪದ್ಧತಿಯಿದೆ. ಇದರರ್ಥ ವಿಶ್ರಾಂತಿ ಸ್ವೀಕಾರವಲ್ಲ. ದೇವಸ್ಥಾನಕ್ಕೆ ಹೋಗಿ ದೇವರ ರೂಪವನ್ನು ಹೃದಯದಲ್ಲಿ ಚಿತ್ರಿಸಿಕೊಂಡು ನಂತರ ಹೊರಗೆ ಕುಳಿತು ಆ ದೇವರ ಮಹಿಮೆಗಳನ್ನು, ಗುಣಗಳನ್ನು ಚಿಂತಿಸಬೇಕೆಂದೆ ಶಾಸ್ತ್ರಕಾರರು ಕುಳಿತುಕೊಳ್ಳುವ ಪದ್ಧತಿಯನ್ನು ವಿಧಿಸಿದ್ದಾರೆ. ಹೀಗೆ ಮಾಡಿದಾಗ ಪೂರ್ಣಫಲವು ಲಭಿಸುತ್ತದೆ. ಹೊರತು ಮನೆಕೆಲಸ, ಅಡಿಗೆ ಮುಂತಾದುವುಗಳ ಪರಸ್ಪರ ವಿಚಾರ ವಿನಿಮಯಕ್ಕಾಗಿ ಕುಳಿತುಕೊಳ್ಳುವುದಲ್ಲ.

ಉತ್ಸವದಲ್ಲಿ ರಥದ ಹಿಂದೆ ಅನುಸರಿಸಿದ್ದರ ಫಲ

ದೇವಸ್ಥಾನಗಳಲ್ಲಿ ವಿಶೇಷ ದಿನದಂದು ವಿಶೇಷವಾಗಿ ಉತ್ಸವಗಳನ್ನು ಆಯೋಜಿಸುತ್ತಾರೆ, ಈ ಉತ್ಸವದ ಹಿಂದೆ ದೇವಸ್ಥಾನದ ಪರಿವಾರದವರು ಮಾತ್ರ ಹೋಗುವುದು ಪದ್ಧತಿ. ಆದರೆ ಉತ್ಸವದಲ್ಲಿ ಭಾಗವಹಿಸಿದ ಎಲ್ಲಾ ಭಕ್ತರೂ ಉತ್ಸವದ ಹಿಂದೆ ಭಕ್ತಿಪರವಶನಾಗಿ, ಸ್ತೋತ್ರ ಮಾಡುತ್ತಾ

ಹೋದರೆ ಅವರು ಇಡುವ ಒಂದೊಂದು ಹೆಜ್ಜೆಗೂ ಅಶ್ವಮೇಧದ ಫಲ ಪ್ರಾಪ್ತವಾಗುತ್ತದೆ. ಉತ್ಸವದ ಸಮಯದಲ್ಲಿ ದೇವರ ಸ್ತೋತ್ರದ ಹೊರತು ಅನಾವಶ್ಯಕವಾದ ಮಾತುಗಳನ್ನು ಆಡುತ್ತಾ ಸುಮ್ಮನೆ ನಿಂತಿರುವವರು ಈ ಫಲದಿಂದ ವಂಚಿತರಾಗುವುದಲ್ಲದೆ ಪಾಪಗಳಿಗೂ ಭಾಗಿಗಳಾಗುವರು.

ಉತ್ಸವೇ ಬಲಿದಾನೇ ಚ ಯಥಾ ಕುರ್ವನ್ ಪ್ರದಕ್ಷಿಣಂ।
ಪದೇ ಪದೇ ಅಶ್ವಮೇಧಸ್ಯ ಫಲಂ ದಶಗುಣಂ ಭವೇತ್॥

ಕಲಿಯುಗದಲ್ಲಿ ಪಾಪಗಗಾಗಿ ಅನೇಕ ಸಾದನೆಗಳಿರುವಂತೆ ಪುಣ್ಯಗಳಿಸಲು ಅನೇಕ ಮಾರ್ಗಗಳನ್ನು ಶಾಸ್ತ್ರಗಳು ತಿಳಿಸಿವೆ. ಆ ಶಾಸ್ತ್ರಗಳು ತಿಳಿಸಿದಂತೆ ಕ್ರಮವರಿತು ಪೂಜಿಸಿದರೆ ಸಂಪೂರ್ಣ ಫಲಪ್ರಾಪ್ತವಾಗುತ್ತದೆ. ಪ್ರದಕ್ಷಿಣೆ ಮತ್ತು ನಮಸ್ಕಾರದ ವಿಷಯದಲ್ಲೂ ಈ ಮಾತು ಸತ್ಯವಾಗಿದೆ.

ಭಕ್ತಿಯಿಂದ ಪ್ರದಕ್ಷಿಣೆ ಮಾಡಿದರೆ ಫಲಾಧಿಕ್ಯವಿದೆ. ಸುಮ್ಮನೆ ತಿರುಗಾಡಿದರೇ ಗಾಣವನ್ನು ಎತ್ತು ಸುತ್ತಿದಂತೆ ಆಗುವುದು.

44. ರಾಘವೇಂದ್ರರ ನಮನಕ್ರಮ

ರಾಯರು ಭಕ್ತಾಭೀಷ್ಟಕರಾಗಿ ಮಂತ್ರಾಲಯದಲ್ಲಿ ಜಾಗೃತರಾಗಿರುವರು. ಅವರಿಗೆ ನಮಸ್ಕರಿಸುವಾಗಿ ೫,೧೦,೧೪,೨೪, ೫೮-೧೦೮ ಪ್ರದಕ್ಷಿಣೆ ನಮಸ್ಕಾರಗಳನ್ನು ಹಾಕಬಹುದು.

ಹನುಮಂತನಿಗೆ ಐದು ನಮಸ್ಕಾರ

ರಾಯರ ಎದುರಿಗೆ ಇರುವ ಹನುಮಂತನಿಗೆ ಮೊದಲು ಐದು ಪ್ರದಕ್ಷಿಣೆ ಹಾಗೂ ಐದು ನಮಸ್ಕಾರಗಳನ್ನು ಹಾಕಿ ನಂತರ ರಾಯರಿಗೆ ನಮಸ್ಕಾರವನ್ನು ಪ್ರಾರಂಭಿಸಬೇಕು.

ನಾಲ್ಕು ದಿಕ್ಕಿನಲ್ಲಿಯೂ ನಮಸ್ಕಾರ

ಬೃಂದಾವನದಲ್ಲಿ ರಾಮ-ನರಸಿಂಹ-ಶ್ರೀಕೃಷ್ಣ-ವೇದವ್ಯಾಸರು ನಾಲ್ಕು ದಿಕ್ಕಿನಲ್ಲಿರುವವು. ಈ ಭಗವಂತನ ರೂಪಗಳನ್ನು ಪೂರ್ವಾದಿ ದಿಕ್ಕುಗಳಲ್ಲಿ ಚಿಂತಿಸಿ ನಮಸ್ಕರಿಸಬೇಕು.

ಪ್ರದಕ್ಷಿಣೆಯನ್ನು ಮಾಡುವಾಗ ಮನಸ್ಸಿನಲ್ಲಿ ರಾಘವೇಂದ್ರರ ರೂಪವನ್ನು ಬಾಯಿಯಲ್ಲಿ ಸ್ತೋತ್ರವು ನಿರಂತರವಾಗಿರಬೇಕು.

ಗಂಡಸರು ಅಷ್ಟಾಂಗ ನಮಸ್ಕಾರವನ್ನು, ಸ್ತ್ರೀಯರಾದರೂ ಎದೆಯನ್ನು ಬಿಟ್ಟು ಉಳಿದ ಏಳು ಅಂಗಗಳಿಂದ ಸಪ್ತಾಂಗವನ್ನೋ, ಪಂಚಾಂಗ ನಮಸ್ಕಾರವನ್ನೂ ಮಾಡಬಹುದು.

45. ಹೆಜ್ಜೆ ನಮಸ್ಕಾರ

ರಾಯರ ಮುಂದೆ ಸ್ತ್ರೀಯರು ಉರುಳು ನಮಸ್ಕಾರವನ್ನು ಹಾಕಬಾರದು. ಅದರ ಬದಲು ಅಷ್ಟೇ ಫಲವಿರುವ ಹೆಜ್ಜೆ ಹೆಜ್ಜೆಗೂ ನಮಸ್ಕಾರವನ್ನು ಹಾಕಬೇಕು. ಆದರೆ ಗಂಡಸರಿಗೆ ಈ ನಿಯಮವಿಲ್ಲ. ದಿಂಡು, ಉರುಳು ಸೇವೆಯನ್ನು ಪುರುಷರು ಮಾಡಿದರೆ ದೋಷವಿಲ್ಲ. ಮಂತ್ರಾಲಯದಲ್ಲಿ ರಾಯರಿಗೆ ಪ್ರದಕ್ಷಿಣೆ ಮಾಡುವ ಮೊದಲು ಗ್ರಾಮದೇವತೆ ಹಾಗು ಪ್ರಹ್ಲಾದರಾಜರಿಗೂ ದೇವತೆಯಾಗಿದ್ದ ಮಂಚಾಲಮ್ಮನ ದರ್ಶನವನ್ನು ಮೊದಲು ಮಾಡಿ ನಂತರ ರಾಯರ ಸೇವೆ ಮಾಡಬೇಕು. ಸೇವಾಕಾಲದಲ್ಲಿ ನಿತ್ಯವೂ ತುಂಗಾಸ್ನಾನ, ದೇವರ ಧ್ಯಾನ, ಪೂಜೆ, ಒಂದು ಹೊತ್ತು ಮಾತ್ರ ಊಟ, ಹಾಗು ಬೇರೆ ಸಮಯಗಳಲ್ಲೂ ಕಾಡು ಹರಟೆ, ನಗುವುದು, ತಮಾಷೆ ಇವುಗಳನ್ನು ಕಡ್ಡಾಯ ರದ್ದುಗೊಳಿಸಬೇಕು. ಜಿತೇಂದ್ರಿಯನಗಾ ನೆಲದ ಮಾಲೆ ಮಲಗಬೇಕು. ಮಧ್ಯೆ ಎಚ್ಚರವಾದಾಗ ರಾಯರಸ್ಮರಣೆ, ಗ್ರಂಥಾವಲೋಕನ ಹೀಗೆ ಕಾಲ ಕಳೆಯಬೇಕು. ಇದರಿಂದ ಸಂಪೂರ್ಣಫಲ ಸಿದ್ಧಿಯಾಗುವುದು.

ಸೋದೆ ವಾದಿರಾಜರ ಸನ್ನಿಧಿಯಲ್ಲಿ ಸೇವೆ

ವಾದಿರಾಜರು ಮಹಾನುಭಾವರಾಗಿದ್ದು ಭಕ್ತರ ಅಭೀಷ್ಟ ಪೂರೈಸಲು ಸಶರೀರ ಬೃಂದಾವನ ಪ್ರವೇಶವನ್ನು ಮಾಡಿದವರಲ್ಲಿ ಮೊದಲಿಗರು. ಇವರ ಸೇವೆಗೆ ಮೊದಲು ಕ್ಷೇತ್ರ ದೇವತೆಯಾದ ಭೂತರಾಜರಿಗೆ ಒಬ್ಬೊಬ್ಬರಿಗೆ ಒಂದೊಂದರಂತೆ ತೆಂಗಿನಕಾಯಿಯನ್ನು ಅವರ ಸನ್ನಿಧಿಯಲ್ಲಿ ಉರುಳಿಸಬೇಕು ಇದರಿಂದ ಮುಂದಿನ ಭಕ್ತರ ಜವಾಬ್ದಾರಿಯನ್ನು ಅವರೇ ನೋಡಿಕೊಳ್ಳುವರು ನಂತರ ಧವಲಗಂಗೆಯಲ್ಲಿ ಸಂಕಲ್ಪಪೂರ್ವಕ ಸ್ನಾನ ಮಾಡಿ, ನಿರ್ಮಾಲ್ಯ ಸ್ವೀಕರಿಸಿ, ಸೇವೆಗೆ ಸಂಕಲ್ಪ ಮಾಡಬೇಕು. ಸೇವೆಗೆ ಪ್ರಾರಂಭಮಾಡುವಾಗ ಪತಿಪತ್ನಿಯರು ತೆಂಗಿನಕಾಯಿಯನ್ನು ಬೆನ್ನಿಗೆ ಕಟ್ಟಿಕೊಂಡು ವಾದಿರಾಜರ ಬಲಗಡೆಯಿಂದ ನಮಸ್ಕಾರ ಪ್ರದಕ್ಷಿಣೆಯನ್ನು ಮಾಡಬೇಕು. ಸೇವಾಕಾಲದಲ್ಲಿ ಬೇರೆ ಎಲ್ಲೂ ದೃಷ್ಟಿಹೋಗದಂತೆ, ಮನಸ್ಸಿನಲ್ಲಿ ವಾದಿರಾಜರ ಚಿತ್ರವನ್ನು

ತುಂಬಿಕೊಂಡು, ವಿಷ್ಣು ಸಹಸ್ರನಾಮ, ವಾಯುಸ್ತುತಿ, ವಾದಿರಾಜರ ಸ್ತೋತ್ರಗಳು ಮೊದಲಾದವುಳಿಂದ ನಮಸ್ಕರಿಸಬಹುದು. ಸಂಜೆ ಪುನಃ ಸ್ನಾನ, ಧ್ಯಾನ, ಸೇವೆ ರಾತ್ರಿ ಅವರ ಮಹಿಮೆಗಳನ್ನು ಕೇಳುವುದು, ಇವುಗಳಿಂದ ಇಷ್ಟಾರ್ಥಗಳನ್ನು ಖಂಡಿತಾ ಪಡೆಯಬಹುದು ಆಹಾರ ನಿಯಮ ಇಂದ್ರಿಯ ನಿಗ್ರಹ ಇವುಗಳು ಅವಶ್ಯವಾಗಿರಬೇಕು.

ಹೀಗೆ ಆಯಾಯ ದೇವಸ್ಥಾನಗಳಲ್ಲಿ ಆಯಾಯ ದೇವರಿಗೆ ಯಾವ ರೀತಿ ಹಾಗೂ ಎಷ್ಟು ಪ್ರದಕ್ಷಿಣೆ-ನಮಸ್ಕಾರಗಳು ವಿಹಿತವಾಗಿವೆಯೋ ಅಷ್ಟನ್ನು ಮಾಡಿದರೆ ಆ ದೇವತೆಯು ಸಂತುಷ್ಟನಾಗಿ ವಿಶೇಷವಾಗಿ ಭಗವಂತನ ಅನುಗ್ರಹವಾಗಲು ಸಹಾಯಕನಾಗುವನು. ಆದ್ದರಿಂದ ಕ್ರಮವರಿತು ವಿಧಿವತ್ತಾಗಿ ನಮಸ್ಕರಿಸಬೇಕು.

46. ಶ್ರೀರಂಗ ಪ್ರಾಕಾರಪ್ರದಕ್ಷಿಣದ ಮಹತ್ವ

ಆದ್ಯಂ ಸ್ವಯಂ ವ್ಯಕ್ತಮಿದಂ ವಿಮಾನಂ ರಂಗಸಂಜ್ಞಿತಂ।
ಶ್ರೀಮುಷ್ಣಂ ವೆಂಕಟಾದ್ರಿಶ್ಚ ಸಾಲಿಗ್ರಾಮಶ್ಚ ನೈಮಿಷಂ॥

ತೋತಾದ್ರಿಃ ಪುಷ್ಕರಂ ಚೈವ ನರನಾರಾಯಣಾಶ್ರಮಂ।
ಅಷ್ಟೌ ಮೇ ಮೂರ್ತಯಃ ಸಂತಿ ಸ್ವಯಂ ವ್ಯಕ್ತಾಃ ಮಹೀತಲೇ।

ಎಂದು ಸ್ವಯಂವ್ಯಕ್ತವಾದ ಎಂಟು ಮೂರ್ತಿಗಳಲ್ಲಿ ಶ್ರೀರಂಗವು ಒಂದು ಪ್ರಥಮ ಹಾಗು ಮುಖ್ಯ ಮೂರ್ತಿಯಾಗಿದೆ. ಇದೊಂದು ವೈಕುಂಠ ಮಂದಿರ ಕಾವೇರಿ ನದಿಯೇ ವಿರಜಾನದಿ. ವಿರಜಾನದಿಯು ವೈಕುಂಠವನ್ನು ಸುತ್ತಿ ಬಳಸಿದಂತೆ ಕಾವೇರಿಯೂ ಶ್ರೀರಂಗನನ್ನು ಸುತ್ತಿ ಬಳಸಿ ತನ್ನ ದ್ವೀಪದಲ್ಲಿ ಹಾಗು ಹೃದಯದಲ್ಲಿ ಶ್ರೀರಂಗನನ್ನು ಧರಿಸಿದ್ದಾಳೆ.

"ಕಾವೇರೀ ವಿರಜಾತೋಯಂ ವೈಕುಂಠಂ ರಂಗಮಂದಿರಂ"

ಶ್ರೀರಂಗವು ಆದಿರಂಗ, ಮಧ್ಯರಂಗ, ಅಂತ್ಯರಂಗವೆಂದು ತ್ರಿರಂಗವಿದ್ದು ಆದಿರಂಗವು ಮೈಸೂರಿನ ಶ್ರೀರಂಗಪಟ್ಟಣದಲ್ಲಿದೆ. ಮಧ್ಯರಂಗವು ಶಿವನ ಸಮುದ್ರದಲ್ಲಿದೆ. ಅಂತ್ಯರಂಗವು ತಮಿಳುನಾಡಿನ ತಿರುಚನಾಪಲ್ಲಿಯಲ್ಲಿದೆ.

ವೈಕುಂಠದಲ್ಲಿ ಮಲಗಿರುವ ಶ್ರೀಮನ್ನಾರಾಯಣನನ್ನು ಬ್ರಹ್ಮದೇವರು ಪಡೆದು ಪೂಜಿಸಿದ್ದಾರು. ಇಕ್ವಾಕುರಾಜನು ಬ್ರಹ್ಮದೇವನನ್ನು ತಪಸ್ಸು ಮಾಡಿ

ವಿಮಾನರಂಗನಾಥನನ್ನು ಪಡೆದುಕೊಂಡನು ಹೀಗೆ ಶ್ರೀರಂಗನಾಥನು ಭೂಮಿಗೆ ಬಂದನು ಇಕ್ಷ್ವಾಕುರಾಜನ ಪರಂಪರೆಯಲ್ಲಿ ದಶರಥರಾಜನೂ ಇದನ್ನು ವೈಭವದಿಂದ ಪೂಜಿಸಿದನು. ನಂತರ ಶ್ರೀರಾಮನೂ ತನ್ನನ್ನೇ ಪೂಜಿಸಿದನು. ಶ್ರೀರಾಮನು ವಿಭೀಷಣನಿಗೆ ಈ ವಿಮಾನವನ್ನು ಕೊಡಲಾಯಿತು. ವಿಭೀಷಣನು ಅಯೋಧ್ಯೆಯಿಂದ ತನ್ನ ಲಂಕೆಗೆ ಹೋಗಲೆಂದು ಹೊರಟು ಮಾರ್ಗಮಧ್ಯದಲ್ಲಿ ಚಂದ್ರಪುಷ್ಕರಿಣಿ ಎದುರಾಯಿತು ಅಲ್ಲಿಯೇ ದಂಡೆಯ ಮೇಲೆ ವಿಮಾನವನ್ನಿಟ್ಟು ಪೂಜಾದಿಗಳನ್ನು ವೈಭವದಿಂದ ಮಾಡಿದನು. ಶ್ರೀರಂಗನಾದರೂ ತಾನು ಇಲ್ಲಿಯೇ ಇರಬೇಕೆಂದು ತೀರ್ಮಾನಿದನು. ವಿಭೀಷಣನ ವೈಭವದ ಉತ್ಸವವನ್ನು ಅನೇಕ ಜನರೂ ನೋಡಿದರು. ಶ್ರೀರಂಗದ ಧರ್ಮವರ್ಮನೆಂಬ ಭಕ್ತನೂ ದಶರಥಮಹಾರಾಜನು ಕಾಲದಲ್ಲಿ ನಡೆದ ವೈಭವದ ಉತ್ಸವಕ್ಕೆ ಅತಿಥಿಯಾಗಿದ್ದು, ಆ ವಿಮಾನವನ್ನು ತನ್ನೂರಿನಲ್ಲಿ ಕರೆಸಿ ತಾನೂ ವೈಭವದ ಉತ್ಸವವನ್ನು ಮಾಡಲು ತೀರ್ಮಾನಿಸಿ ಭಗವಂತನನ್ನು ಕುರಿತು ತಪಸ್ಸನ್ನು ಮಾಡಿದನು. ಒಬ್ಬ ಜ್ಞಾನಿಯಾದರೂ ಭಗವಂತನು ನಿನ್ನಲ್ಲಿಗೆ ಬರುವನು ಆದ್ದರಿಂದ ತಪಸ್ಸನ್ನು ನಿಲ್ಲಿಸು ಎಂದನು. ಧರ್ಮವರ್ಮನಾದರೂ ತಪಸ್ಸನ್ನು ನಿಲ್ಲಿಸಿ ಭಗವಂತನ ಆಗಮನಕ್ಕಾಗಿ ಎದುರು ನೋಡುತ್ತಿದ್ದಾಗ ವಿಭೀಷಣನು ಶ್ರೀರಂಗನನ್ನು ತಂದಿದ್ದ ವಿಭೀಷಣನು ಬ್ರಹ್ಮೋತ್ಸವವನನ್ನು ವೈಭವದಿಂದಾಚರಿಸಿ ತಾನು ವಿಮಾನಸಹಿತನಾಗಿ ಹೊರಡಲು ಸಿದ್ಧನಾಗಿ ವಿಮಾನವನ್ನು ಎತ್ತಲು ಎಷ್ಟು ಪ್ರಯತ್ನಿಸಿದರೂ ಎತ್ತಲು ಆಗದೆ ಶ್ರೀರಂಗನಿಗೆ ಶರಣಾದನು ಭಗವಂತನು ಧರ್ಮವರ್ಮನು ನನಗಾಗಿ ತಪಸ್ಸು ಮಾಡಿದ್ದಾನೆ. ಆದ್ದರಿಂದ ದಕ್ಷಿಣದ ಗಂಗೆಯೆನಿಸಿದ ಈ ಕಾವೇರಿಯ ಮಧ್ಯದಲ್ಲಿ ಇರಲು ತೀರ್ಮಾನಿಸಿದ್ದೇನೆ ಆದ್ದರಿಂದ ನಾನು ನಿನ್ನನ್ನೇ ನೋಡುತ್ತಾ ದಕ್ಷಿಣದಿಕ್ಕಿಗೆ ಮುಖಮಾಡಿ ಮಲಗುವೆನು ಹಾಗು ನನ್ನ ದೃಷ್ಟಿಯಿಂದ ನಿನ್ನನ್ನು ಅನುಗ್ರಹಿಸುವೆನು ಎಂದು ದಕ್ಷಿಣಾಭಿಮುಖನಾಗಿ ಮುಖಮಾಡಿ ಕಾಲನ್ನೂ ದಕ್ಷಿಣ ದಿಕ್ಕಿಗೆ ತೋರಿಸುತ್ತಾ ಮಲಗಿದನು ನಿನಗೆ ಯಾವಾಗ ಬೇಕಾದರೂ ಬಂದು ನನ್ನನ್ನು ಪೂಜಿಸಬಹುದು ಎಂದು ಅನುಗ್ರಹಿಸಿದನು. ಹೀಗೆ ಧರ್ಮವರ್ಮನಿಗೆ ಅನುಗ್ರಹಿಸಲು ಶ್ರೀರಂಗನು ಇಲ್ಲಿಯೇ ಉಳಿದನು ಅಂತು ವೈಕುಂಠದಲ್ಲಿರುವ ಮೂರ್ತಿಯನ್ನು ಪೂಜಿಸಲು ಸತ್ಯಲೋಕಕ್ಕೆ ಬಂದು, ಸತ್ಯಲೋಕದಿಂದ ಪೂಜೆಗಾಗಿ

ಅಯೋಧ್ಯೆಗೆ ಬಂದು ಅಯೋಧ್ಯೆಯಿಂದ ಲಂಕೆಗೆ ಹೋಗದೆ ದಕ್ಷಿಣ ಭಾರತದ ಶ್ರೀರಂಗದಲ್ಲಿಯೇ ಜನರನ್ನು ಅನುಗ್ರಹಿಸಲು ಬಂದು ಸೇರಿದನು.

ಆದಿರಂಗ - ಮಧ್ಯರಂಗ:- ಶ್ರೀರಂಗನು ಶ್ರೀರಂಗಕ್ಕೆ ಬಂದು ನೆಲೆಸಿದ ಮೇಲೆ ಕರ್ನಾಟಕದ ಜನತೆಯು ಪೂಜಿಸಲೆಂದು ಅವರಿಗೆ ಭಗವಂತನ ಅನುಗ್ರಹಕ್ಕಾಗಿ ಇಂದ್ರದೇವರು ಶಿವನಸಮುದ್ರ ಸಮೀಪದಲ್ಲಿ ಮಧ್ಯರಂಗವನ್ನು ಪ್ರತ್ಯಕ್ಷಿಕರಿಸಿಕೊಂಡರು ಇದು ಚಿಕ್ಕ ಮೂರ್ತಿಯಾಗಿದೆ. ಗೌತಮರು ಭಗವಂತನ ಆದೇಶದಂತೆ ಶ್ರೀರಂಗನಂತೆ ಇರುವ ಭಗವಂತನ ಮೂರ್ತಿಯನ್ನು ಪ್ರತ್ಯಕ್ಷೀಕರಿಸಿಕೊಂಡು ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಿದರು. ಆದಿ, ಮಧ್ಯ, ಅಂತ್ಯ ರಂಗಗಳಲ್ಲಿಯೂ ಕಾವೇರೀನದಿಯು ದ್ವೀಪದಂತೆ ಸುತ್ತಲೂ ಹರಿದು ಹೃದಯದಲ್ಲಿ ಧರಿಸುವಳು.

47. ಬ್ರಹ್ಮಾಂಡದರ್ಶನ

ಈ ಮೂರು ರಂಗಗಳನ್ನು ಸಂದರ್ಶಿಸಿದವನು ಇಡೀ ಬ್ರಹ್ಮಾಂಡವನ್ನೆ ಸಂದರ್ಶಸಿದ ಪುಣ್ಯಕ್ಕೆ ಭಾಗಿಯಾಗುವನು ಎಂದು ಭಗವಂತನು ವಚನ ನೀಡಿರುವನು. ಆದಿರಂಗವು ಗೌತಮಋಷಿ ಸ್ಥಾಪಿಸಿದರೆ, ಮಧ್ಯರಂಗವು ಇಂದ್ರದೇವನಿಂದ ಪ್ರತ್ಯಕ್ಷೀಕರಿಸಿದ್ದು, ಅಂತ್ಯರಂಗವು ಸ್ವಯಂವ್ಯಕ್ತವಾಗಿದೆ.

ಬ್ರಹ್ಮಾಂಡದರ್ಶನದ ಕ್ರಮ:- ಯಾವುದಾದರೂ ಮಾಸದಲ್ಲಿ ಒಂದೇ ದಿವಸದಲ್ಲಿ ಆದಿರಂಗದ ಕಾವೇರಿಯಲ್ಲಿ ಸ್ನಾನಾದಿಗಳನ್ನು ಮುಗಿಸಿಕೊಂಡು ಆದಿರಂಗನ ದರ್ಶನ ಮಾಡಬೇಕು ಅದರ ಮೊದಲು ಹೀಗೆ ಸಂಕಲ್ಪಮಾಡಬೇಕು.

ಅದ್ಯ ಪೂರ್ವೋಚ್ಚರಿತ ಏವಂ ಗುಣ ವಿಶಿಷ್ಟಾಯಾಂ ಶುಭತಿಥೌ...... ಸಂವತ್ಸರೇ-ಅಯನೇ, ಮಾಸೇ, ತಿಥೌ-ವಾಸರೇ-ಮಮ ಸಮಸ್ತ ಪಾಪಪರಿಹಾರ ಪೂರ್ವಕ ಬ್ರಹ್ಮಾಂಡದರ್ಶನ ಫಲಪ್ರಾಪ್ತ್ಯರ್ಥಂ ಆದಿ-ಮಧ್ಯ-ಅಂತ್ಯ ರಂಗ ದರ್ಶನಾಖ್ಯಂ ಕರ್ಮ ಕರಿಷ್ಯಮಾಣಃ ಆದೌ ಆದಿರಂಗರಕ್ಷೇತ್ರೇ ಆದಿರಂಗದರ್ಶನಂ, ಮಧ್ಯೆ ಮಧ್ಯರಂಗ ದರ್ಶನಂ, ಅಂತ್ಯೇರಂಗೇ, ಭಾಸ್ಕರಕ್ಷೇತ್ರೇ ಶ್ರೀರಂಗನಾಥದರ್ಶನಾಖ್ಯ ತ್ರಿರಂಗದರ್ಶನಾಖ್ಯಂ ಕರ್ಮ ಕರಿಷ್ಯೇ"

ಎಂದು ಸಂಕಲ್ಪಿಸಿ, ಸಂಕಲ್ಪಾನಂತರ ಮಧ್ಯೆ ಮಧ್ಯೇ ಭಗವಥಾಕಾಲಕ್ಷೇಪಮಾಡಬೇಕೇ ವಿನಹ ಇತರ ಲೌಕಿಕ ವಿಷಯವನ್ನಾಗಲೀ ಅವಲಂಬಿಸಕೂಡದು.

ಈ ಬ್ರಹ್ಮಾಂಡ ದರ್ಶನವಾದರೂ ಉಪವಾಸದಿಂದ ಮಾಡಬೇಕು. ಸೂರ್ಯೋದಯದಿಂದ ಸೂರ್ಯಾಸ್ತದಲ್ಲಿ ತ್ರಿರಂಗದರ್ಶನ ಶ್ರೇಷ್ಠವಾದದ್ದು. ಆದರೆ ಈ ನಿಯಮ ಅನುಕೂಲತೆ ಇದ್ದಾಗ ಮಾತ್ರ ಸಾಧ್ಯ. ಮುಖ್ಯವಾಗಿ ಒಂದೇ ದಿನದಲ್ಲಿ, ಉಪವಾಸದಲ್ಲಿ ನೋಡಬೇಕೆಂಬುದೆ ಮುಖ್ಯವಾಗಿದೆ.

ಶ್ರೀರಂಗ ಪ್ರಾಕಾರ ಪ್ರದಕ್ಷಿಣ ವಿಧಿ

ಶ್ರೀರಂಗದಲ್ಲಿ ವೈಕುಂಠದಂತೆ ಏಳು ಪ್ರಾಕಾರವಿದ್ದು ಏಳನೇ ಪ್ರಾಕಾರದಲ್ಲಿ ಶ್ರೀರಂಗನಾಥನಿರುವನು. ಅಲ್ಲಿ ತನ್ನ ಬಲಗೈಯಲ್ಲಿ ಕಿರೀಟವನ್ನು ದೃಷ್ಟಿಯಿಂದ ಸಮಸ್ತ ಜಗತ್ತನ್ನು ನೋಡುತ್ತಾ ನಾನೇ ಸಮಸ್ತ ಜಗತ್ತಿಗೂ ಸ್ವಾಮಿ ಎಂದು ತೋರಿಸುತ್ತಾ ಎಡಗೈಯಿಂದ, ಜೀವಿಗಳಿರಾ ನೀವೆಲ್ಲರೂ ನನ್ನನ್ನೇ ಆಶ್ರಯಿಸಿರಿ ನಾನು ನಿಮಗೆ ಮೋಕ್ಷವನ್ನು ಕೊಡುವೆ ಎಂದು ಸೂಚಿಸುತ್ತಿರುವನು. ಉತ್ಸವಮೂರ್ತಿಯಾದರೂ ಚತುರ್ಭುಜನಾಗಿದ್ದು ಚಕ್ರ, ಶಂಖ, ಅಭಯ, ಗದೆಯನ್ನು ಧರಿಸಿರುವನು.

ಶ್ರೀರಂಗವಿಮಾನದ ಮೇಲೆ ಪರವಾಸುದೇವನು ಇರುವನು. ಈ ವೈಕುಂಠಮೂರ್ತಿಗೆ ಸಪ್ತಪ್ರಾಕಾರ ಪ್ರದಕ್ಷಿಣೆಯ ವಿಧಿಯು ಗರುಡ ಪುರಾಣದಲ್ಲಿ ವಿಧಿಸಲಾಗಿದೆ.

ಗರುಡನು ಬ್ರಹ್ಮನನ್ನು ಕುರಿತು ಹೀಗೆಂದನು, ಬ್ರಹ್ಮದೇವನೇ, ನೀನು ನನಗೆ ಶ್ರೀರಂಗದ ಸಪ್ತಪ್ರಾಕಾರ ಪ್ರದಕ್ಷಿಣೆಯ ಕ್ರಮವನ್ನು ತಿಳಿಸು ಎಂದು ಉತ್ತರವಾಗಿ ಬ್ರಹ್ಮದೇವನು ಹೀಗೆಂದನು.

ಕಾವೇರಿಯ ಮಧ್ಯಭಾಗದಲ್ಲಿ ಚಂದ್ರಪುಷ್ಕರಿಣಿತಟದಲ್ಲಿ ನಾಲ್ಕು ದಿಕ್ಕಿನಲ್ಲಿಯೂ, ನಾಲ್ಕುದ್ವಾರಗಳಿರುವ ದೇವಾಲಯವಿದೆ. ದಕ್ಷಿಣದಲ್ಲಿ ಮುಖ್ಯ ಗೋಪುರ ಹಾಗು ದ್ವಾರವಿದೆ ಯಾರು ಮೋಕ್ಷವನ್ನು ಇಚ್ಛಿಸುವನೋ ಅವನು ಸಪ್ತ ಪ್ರಾಣಕಾರ ಪ್ರದಕ್ಷಿಣೆಯನ್ನು ಮಾಡತಕ್ಕದ್ದು. ಆ ಕ್ರಮ ಹೀಗಿದೆ.

ಪ್ರಾತಃಕಾಲ ಬ್ರಾಹ್ಮಿಮುಹೂರ್ತದಲ್ಲಿ ನಾರಾಯಣ ಸ್ಮರಣ ಪೂರ್ವಕವಾಗಿ ಎದ್ದು ಕಾವೇರಿಯಲ್ಲಿ ಸಂಕಲ್ಪ ಪೂರ್ವಕವಾಗಿ ಸ್ನಾನಮಾಡಿ, ನಿತ್ಯನೈಮಿತ್ತಿಕ ಕರ್ಮಗಳನ್ನು ಮುಗಿಸಿ, ಮಡಿಯಲ್ಲಿಯೇ ದೇವಾಲಯದ ಮುಖದ್ವಾರದ ಮುಂದೆ ನಿಂತು ಆಚಮನ, ಪ್ರಾಣಾಯಾಮ, ಸಂಕಲ್ಪ - ಮಾಡಬೇಕು. ಶುಭತಿಥೌ - ಶ್ರೀರಂಗನಾಥ ಸನ್ನಿಧೌ, ಶ್ರೀ ಭಾಸ್ಕರ ಕ್ಷೇತ್ರೇ, ಸಮಸ್ತ ದೇವತಾಸನ್ನಿಧಾನಾತ್ಮಕೇ ಮಮ, ಜನ್ಮ ಜನ್ಮಾಂತರೀಯ ದೋಷ ನಿವೃತ್ತಿದ್ವಾರಾ ಶ್ರೀರಂಗನಾಥ ಪ್ರಸಾದ ಸಿದ್ಧ್ಯರ್ಥಂ ಜ್ಞಾನ-ಭಕ್ತಿ-ವೈರಾಗ್ಯ ಸಿದ್ಧಿದ್ವಾರಾ ಅಂತೇ ಸಂಸಾರನ್ನಿವೃತ್ತಿ ಸಮಸ್ತ ಪಾಪ ನಿವೃತ್ಯರ್ಥಂ ಸಪ್ತಪ್ರಾಕಾರ ಪ್ರದಕ್ಷಿಣಾಖ್ಯಂ ಕರ್ಮ ಕರಿಷ್ಯೇ.

ವಿಷ್ವಕ್ಸೇನ ಧ್ಯಾನಮ್

ವಿಷ್ವಕ್ಸೇನ ಮಹಾಬಾಹೋ ಅನುಜ್ಞಾಂ ದಾತುಮರ್ಹಸಿ।
ಪ್ರದಕ್ಷಿಣಾರ್ಥಂ ದೇವಸ್ಯ ತ್ವಾಂ ನಮಾಮಿ ಪುನಃ ಪುನಃ॥

ಶ್ರೀಕ್ಷೇತ್ರ ಪಾಲಕನಾದ ವಿಷ್ವಕ್ಸೇನನ ಅನುಮತಿಯನ್ನು ಸ್ವೀಕರಿಸಿ ಶ್ರೀರಂಗನಿಗೆ ದಕ್ಷಿಣದ ದಿಕ್ಕಿನಲ್ಲಿ ಬಲಗಡೆಯಲ್ಲಿ ಇಪ್ಪತ್ತೈದು ನಮಸ್ಕಾರಗಳನ್ನು ಹಾಕಬೇಕು.

೧) ದಿಕ್ಪಾಲಾಯ ನಮಃ ೨) ಕಾಲಾಯ ನಮಃ ೩) ಜಯಾಯ ನಮಃ ೪) ವಿಜಯಾಯ ನಮಃ ೫) ವಾಸುದೇವಾಯ ನಮಃ ೬) ಶ್ರಿಯೈ ನಮಃ ೭) ಭೂಮ್ಯೈ ನಮಃ ೮) ಚತುರ್ವ್ಯೂಹಾಯನಮಃ ೯) ಶಕ್ತ್ಯೈ ನಮಃ ೧೦) ಪ್ರತಿಷ್ಠಾಯೈ ನಮಃ ೧೧) ಸಂವಿದೇ ನಮಃ ೧೨) ಸ್ಫೂರ್ತ್ಯೈ ನಮಃ ೧೩) ಪ್ರವೃತ್ತ್ಯೈ ನಮಃ ೧೪) ಕಲಾಯೈ ನಮಃ ವಿದ್ಯಾಯೈ ನಮಃ ೧೬) ಮತ್ಯೈ ೧೭) ನಿಯತ್ಯೈ ನಮಃ ೧೮) ಮಾಯಾಯೈ ನಮಃ ೧೯) ಕಾಲಾಯ ನಮಃ ೨೦) ಪುರುಷಾಯ ನಮಃ ೨೧) ಆತ್ಮನೇ ನಮಃ ೨೨) ಅಂತರಾತ್ಮನೇ ನಮಃ ೨೩) ಜ್ಞಾನಾತ್ಮನೇ ನಮಃ ೨೪) ಪರಮಾತ್ಮನೇ ನಮಃ ೨೫) ಸರ್ವೇಭ್ಯೋ ನಮಃ॥

ಶ್ರೀಭಾರತೀರಮಣ ಮುಖ್ಯ ಪ್ರಾಣಾಂತರ್ಗತ ರಂಗೇಶಾಯ ದಿಕ್ಪಾಲಾಯ ಚ ಕಾಲಾಯ ಜಯಾಯ ವಿಜಯಾಯ ಚ. ವಾಸುದೇವಾಯ ಶ್ರೀಭೂಭ್ಯಾಂ ಸಹಿತಾಯ ಚತುರ್ವ್ಯೂಹಾಯ ಶಾರ್ಙ್ಗಿಣೇ ಶಕ್ತ್ಯಾದಿದ್ವಾದಶೇಭ್ಯಶ್ಚ ಆತ್ಮಾದಿ ಬ್ರಹ್ಮರೂಪಿಣೇ॥ ನಮಸ್ಕೃತ್ಯ ಚ ಸರ್ವೇಭ್ಯೋ ನೈಋರ್ತೀಂ ದಿಶಮಾವ್ರಜೇ।

ನೈರುತ್ಯದಿಕ್ಕು

೧) ನಿರ್ಋತಯೇ ನಮಃ ೨) ಕುಮುದಾಯ ನಮಃ ೩) ಕುಮುದಾಕ್ಷಾಯ ನಮಃ ೪) ಶ್ರೀಭಾರತೀರಮಣ ಮುಖ್ಯ ಪ್ರಾಣಾಂತರ್ಗತ ರಂಗೇಶಾಯ ನಮಃ॥

ತತ್ಕೋಣಾಧಿಪತಿಂ ದೇವಂ ನಮಃ ಕುಮುದಂ ಕುಮುದಾಕ್ಷಕಂ।
ರಂಗೇಶಂ ಚ ಪ್ರಣಮ್ಯಾಥ ಪ್ರತೀಚೀಂ ದಿಶಮಾವ್ರಜೇತ್॥

ಪ್ರತೀಚಿದಿಕ್ಕು

(ಪಶ್ಚಿಮ) ೧) ಪ್ರತೀಚೀದಿಕ್ಪತಯೇ ವರುಣಾಯ ನಮಃ ೨) ಬ್ರಹ್ಮಣೇ ನಮಃ ೩) ಪುಷ್ಕರಾಯ ನಮಃ ೪) ಕಾಲಾಯ ನಮಃ ೫) ಪುಷ್ಕರಾಕ್ಷಾಯ ನಮಃ ೬) ಶ್ರೀಭಾರತೀ ರಮಣ ಶ್ರೀಮುಖ್ಯಪ್ರಾಂತರ್ಗತ ಶ್ರೀರಂಗೇಶಾಯ ನಮಃ॥

ತತಃಪರ್ಜನ್ಯ ದಿಕ್ಪಾಲಮೂರ್ತಯೇ ಬ್ರಹ್ಮಣೇ ತಥಾ।
ಪುಷ್ಕರಾಯ ಚ ಕಾಲಾಯ ಪುಷ್ಕರಾಕ್ಷಾಯ ತೇ ನಮಃ॥

ವಾಯುವ್ಯ ದಿಕ್ಕು

೧) ವಾಯುವ್ಯ ಕೋಣಾಧಿಪತಯೇ ಶ್ರೀ ಪ್ರವಹ ವಾಯವೇ ನಮಃ ೨) ಗರುಡಾಯ ನಮಃ ೩) ದುರ್ಗಾಯೈ ನಮಃ ೪) ಸರಸ್ವತ್ಯೈ ನಮಃ ೫) ಹ್ರಿಯೈ ನಮಃ ೬) ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಶ್ರೀರಂಗೇಶಾಯ ನಮಃ॥

ತತೋ ವಾಯುದಿಶಂ ಗತ್ವಾ ತತ್ಕೋಣೇ ವಾಯವೇ ನಮಃ।
ಗರುಡಾಯ ಚ ದುರ್ಗಾಯೈ ಸರಸ್ವತ್ಯೈ ಹ್ರಿಯೈ ನಮಃ॥
ಉತ್ತರದ್ವಾರಿ ಪಕ್ಷೀಂದ್ರ ರಂಗೇಶಂ ಪ್ರಣಮೇದ್ ಬುಧಃ॥

ಉತ್ತರದಿಕ್ಕು

1) ಉತ್ತರ ದಿಕ್ಪಾಲಾಯ ಕುಬೇರಾಯ ನಮಃ।
2) ಗಣಾಧಿಪತಯೇ ನಮಃ
3) ವಾಸುದೇವಾಯ ನಮಃ
4) ಶ್ರೀನಿವಾಸಾಯ ನಮಃ
5) ಶ್ರೀ ಭಾ-ಮು-ಶ್ರೀ ರಂಗೇಶಾಯ ನಮಃ

ದಿಕ್ಪಾಲಾಯ ಕುಬೇರಾಯ ಗಣಾಧಿಪತಯೇ ತಥಾ।
ಶಾರ್ಙ್ಗಿಣೇ ವಾಸುದೇವಾಯ ಶ್ರೀನಿವಾಸಾಯ ವೈ ನಮೇತ್॥

ಈಶಾನ ದಿಕ್ಕು

೧) ಈಶಾನಾಧಿಪತೆಯೇ ಈಶಾನಾಯ ನಮಃ
೨) ಇಂದ್ರಾಯ ನಮಃ ೩) ಚಂದ್ರಮಸೇ ನಮಃ
೪) ಬಲಾಯ ನಮಃ ೫) ಪ್ರಬಲಾಯ ನಮಃ
೬) ಶ್ರೀ ಭಾ-ಮು, ಶ್ರೀರಂಗೇಶಾಯ ನಮಃ

ತತ ಈಶಾನದಿಗ್ಭಾಗೇ ಈಶಾನಂ ಪ್ರಣಮೇಚ್ಚ ವೈ।
ಇಂದ್ರಂ ಚಂದ್ರಮಸಂ ಚೈವ ಬಲಂ ಚ ಪ್ರಬಲಂ ತಥಾ॥
ರಂಗೇಶಂ ಚ ನಮೇದ್ ಬ್ರಹ್ಮನ್ ಸರ್ವಾಭೀಷ್ಟಪ್ರದಾಯಕಂ॥

ಪೂರ್ವದಿಕ್ಕು

೧. ಪೂರ್ವದಿಗಧಿಪತಯೇ ಸುರೇಂದ್ರಾಯ ನಮಃ
೨. ನಂದಾಯ ನಮಃ
೩. ಸುನಂದಾಯ ನಮಃ
೪. ಹಯಶೀರ್ಷ್ಣೇ ನಮಃ
೫. ನೃಸಿಂಹಾಯ ನಮಃ
೬. ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ರಂಗೇಶಾಯ ನಮಃ

ತತಃ ಪೂರ್ವದಿಶಂ ಗತ್ವಾ ತತ್ಕೋಣೇ ದ್ವಾರಿ ವೈ ನಮೇತ್।
ದಿಕ್ಪಾಲಾಯ ಸುರೇಂದ್ರಾಯ ನಂದಾಯ ಸುಸುಖಾಯ
ಹಯಶೀರ್ಷ್ಣೇ ನೃಸಿಂಹಾಯ ಪ್ರಣಮೇತ್ ಪಕ್ಷಿಣಾಂ ವರ॥

ಆಗ್ನೇಯ ದಿಕ್ಕು

೧. ಆಗ್ನೇಯ ದಿಗಧಿಪತಯೇ ಅಗ್ನಯೇ ನಮಃ॥

೨. ಗರುಡಾಯ ನಮಃ॥ ೩) ಈಶಾನಾಯ ನಮಃ॥

೩. ಅಶ್ವಿಬ್ಯಾಂ ನಮಃ ೫) ಪದ್ಮನಾಭಾಯ ನಮಃ॥

೬. ಶ್ರೀ ಭಾ.ಮು. ಶ್ರೀರಂಗೇಶಾಯ ನಮಃ॥

ತತ ಆಗ್ನೇಯ ಕೋಣೇ ತು ಅಗ್ನಯೇ ಪ್ರಣಮೇದ್ ಬುಧಃ।
ಗರುಡಾಯ ನಮೇದ್ ದೇವಂ ಈಶಾನಾಯ ನಮೋ ನಮಃ
ಅಶ್ವಿಬ್ಯಾಂ ಪದ್ಮನಾಭಾಯ ಕ್ರಮೇಣ ಪ್ರಣಮೇದ್ ಬುಧಃ॥

ದಕ್ಷಿಣ ದಿಕ್ಕು

ದಕ್ಷಿಣದಿಕ್ಪತಯೇ ಯಮಾಯ ನಮಃ॥

ಕೀರ್ತ್ಯೈ ನಮಃ॥ ಸ್ಫೂರ್ತ್ಯೈ ನಮಃ॥ ಮಾಯಾಯೈ ನಮಃ॥ ರಾಮಾಯ ನಮಃ॥ ವಿಭೀಷಣಾಯ ನಮಃ॥

ನಂತರ ದ್ವಿತೀಯ ಪ್ರಾಕಾರವನ್ನು ಪ್ರವೇಶಿಸಬೇಕು. ಅಲ್ಲಿ ಹಿಂದೆ ಹೇಳಿದ ಕ್ರಮದಂತೆ ದಕ್ಷಿಣಾದಿಕ್ರಮದಂತೆ ಏಳು ಪ್ರಾಕಾರಗಳಲ್ಲೂ ಮೇಲೆ ಹೇಳಿದ ಕ್ರಮದಂತೆ ಆಯಾಯ ದಿಕ್ಪಾಲಕರನ್ನು ನಮಿಸಬೇಕು. ನಂತರ ಏಳನೇ ಪ್ರಾಕಾರದಲ್ಲಿರುವ ರಂಗನಾಥನ ದರ್ಶನ ಮಾಡಿ. ವಿಮಾನದಲ್ಲಿರುವ ಪರವಾಸುದೇವನ ದರ್ಶನವನ್ನು ಮಾಡಿ ನಮಿಸಬೇಕು. ನಂತರ ೩೨ ನಮಸ್ಕಾರಗಳನ್ನು ಹಾಕಬೇಕು.

ಪೂರ್ವೋಕ್ತೇನ ಕ್ರಮೇಣೈವ ಗತ್ವಾ. ತತ್ರ ಹರಿಂ ಸ್ಮರನ್।
ದ್ವಾತ್ರಿಂಶತ್ ಸಂಖ್ಯಯಾ ದೇವಂ ನಮಸ್ಕುರ್ಯಾತ್ತು ನಾಮಭಿಃ॥

ಕೇಶವಾದಿ ನಾಮಗಳಿಂದ ಆತ್ಮಾದಿ ಎಂಟು ನಾಮಗಳಿಂದಲೂ ನಾಮೋಚ್ಚಾರಣ ಪೂರ್ವಕವಾಗಿ ೩೨ ನಮಸ್ಕಾರಗಳನ್ನು ಮಾಡಿ ಒಳಗೆ ಪ್ರವೇಶಿಸಿ ಹಿಂದಿನಂತೆಯೇ ನಾಲ್ಕು ದಿಕ್ಕಿನಲ್ಲಿಯೂ ರಂಗೇಶನನ್ನು ನಮಸ್ಕರಿಸಿ,

ರಂಗೇಶನನ್ನು ದರ್ಶನ ಮಾಡಿ ಪ್ರದಕ್ಷಿಣೆಯ ಕ್ರಿಯೆಯನ್ನು ದರ್ಶನ ಮಾಡಿ ಪ್ರದಕ್ಷಿಣೆಯ ಕ್ರಿಯೆಯನ್ನು ಭಗವಂತನಿಗೆ ಅರ್ಪಿಸಬೇಕು.

ತತೋಂತಃ ಪ್ರವಿಶೇದ್ ದೇಶಂ ಪೂರ್ವವತ್ ಪ್ರಣಮೇದ್ ಬುಧಃ।
ಸತುರೀಶಂ ಪ್ರಣಮ್ಯೈವಂ ರಂಗೇಶಂ ವೀಕ್ಷ್ಯ ಚಾರ್ಚ್ಯ ಚ॥

ಆಚಾರ್ಯಪೂಜೆ

ಸಪ್ತಪ್ರಾಕಾರಪ್ರದಕ್ಷಿಣೆಯನ್ನು ಭಗವಂತ ರಂಗೇಶನಿಗೆ ಅರ್ಪಿಸಿದ ಮೇಲೆ ಪ್ರಾಕಾರ ಪ್ರದಕ್ಷಿಣೆಯನ್ನು ನಮ್ಮಿಂದ ಶಾಸ್ತ್ರೋಕ್ತ ರೀತಿಯಿಂದ ಮಾಡಿಸಿದ ಬ್ರಾಹ್ಮಣನಿಗೆ ಯಥಾಶಕ್ತಿ ಗಂಧ, ಮಾಲೆ, ವಸ್ತ್ರಾದಿಗಳಿಂದ ಪೂಜಿಸಬೇಕು ಇದರಿಂದ ದಾನ ಮಾಡಿದಂತಾಗಿ ಪ್ರದಕ್ಷಿಣೆಯನ್ನಾಚರಿಸುವಾಗ ನಡೆದಿರುವ ಮನೋಚಾಂಚಲ್ಯಾದಿ ದೋಷಗಳನ್ನು ಪರಿಹರಿಸಿದಂತಾಗಿ ಪೂರ್ಣಫಲ ದೊರೆಯುತ್ತದೆ. ಪಿತೃಗಳ ಸಂತುಷ್ಟರಾಗುವರು. ವಸ್ತ್ರದಾನವು ವಿಹಿತವಾಗಿದೆ.

ಪೂಜಯಿತ್ವಾ ಯಥಾಶಕ್ತಿ ಗಂಧಮಾಲ್ಯಾನುಲೇಪನೈಃ।
ಆಚಾರ್ಯಂ ಪೂಜಯೇದ್ ಭಕ್ತ್ಯಾ ವಸ್ತ್ರಗಂಧಾನುಲೇಪನೈಃ॥
ನೂತ್ನಂ ವಸ್ತ್ರಂ ಪ್ರದಾತವ್ಯಂ ಪಿತೄಣಾಂ ತೃಪ್ತಯೇಂಡಜ।
ಜೀರ್ಣವಸ್ತ್ರಪ್ರದಾನೇ ಪಿತರೋ ಯಾಂತ್ಯಸದ್ಗತಿಂ॥

ಜಲಕುಂಭವನ್ನು ಆಚಾರ್ಯನಿಗೆ ದಾನಮಾಡಬೇಕು. ಇದರಿಂದ ದೇವ-ಋಷಿ - ಪಿತೃ ಋಣದಿಂದ ಪಾರಾಗಬಹುದು.

ಉದಕುಂಭಃ ಪ್ರದಾತವ್ಯೋ ದೇವರ್ಷಿ ಪಿತೃತೃಪ್ತಯೇ॥

ಸುವರ್ಣ, ರಜತ ದಾನ ಮಾಡಿದರಂತೂ ಗಯಾಶ್ರಾದ್ಧ ಫಲವನ್ನು ಪಡೆಯಬಹುದು.

ಸುವರ್ಣಸ್ಯ ಪ್ರದಾನೇನ ಗಯಾಶ್ರಾದ್ಧಫಲಂ ಭವೇತ್।

ಮುತ್ತೈದೆ ಸ್ತ್ರೀಯರು ಪ್ರದಕ್ಷಿಣವನ್ನು ಹಾಕಿದ್ದರೆ ಮುತ್ತೈದೆಗೆ ಅಥವಾ ಆಚಾರ್ಯನ ಪತ್ನಿಗೆ ಬಾಗಿಣವನ್ನು ಕೊಡುವುದರಿಂದ ಗಂಡನಿಗೆ ಬಂದ

ಆಪತ್ತು ಪರಿಹೃತವಾಗಿ ದೀರ್ಘಾಯುಸ್ಸುಂಟಾಗಿ ಸೌಭಾಗ್ಯತನ ವೃದ್ಧಿಯಾಗುವುದು.

ಸುಮಂಗಲ್ಯೈ ಸೂರ್ಪಯುಗ್ಮಂ ದದ್ಯಾನ್ ಮಾಂಗಲ್ಯ ವೃದ್ಧಯೇ।

ನಂತರ ಆಚಾರ್ಯ ಹಾಗು ಪತ್ನಿ, ಮತ್ತು ಏಳು ಶ್ರೋತ್ರಿಯ ದಂಪತಿಗಳಿಗೆ, ಭೋಜನ ಮಾಡಿಸಬೇಕು.

ಕುಟುಂಬಿನಂ ಚೋಯಿಷ್ಠ ಬ್ರಾಹ್ಮಣಂ ಶ್ರೋತ್ರಿಯಂ ಶುಚಿಮ್।
ಸಪ್ತಾವರಾನ್ ಬ್ರಾಹ್ಮಣಾಂಶ್ಚ ಭೋಜಯೇತ್ ಭಕ್ತಿಪೂರ್ವಕಮ್॥

ಸಪ್ತಪ್ರಾಕಾರಪ್ರದಕ್ಷಿಣೆಯನ್ನು ಮಾಡಿದ ದಿವಸ ರಾತ್ರಿ ನೆಲದ ಮೇಲೆ ಮಲಗಬೇಕು. ಮಂಚಾದಿಗಳು ನಿಷಿದ್ಧವಾಗಿವೆ. ಬ್ರಹ್ಮಚರ್ಯದಿಂದಿರಬೇಕು. ಇದರಿಂದ ಪೂರ್ಣಫಲವು ಲಭಿಸುತ್ತದೆ.

ರಾತ್ರೌ ಸ್ವಪೇದ್ ಭೂಮಿತಲೇ ಬ್ರಹ್ಮಚರ್ಯವ್ರತಂ ಚರನ್।
ಏವಂ ಕೃತೇ ಪಕ್ಷಿರಾಜ ಸಂಪೂರ್ಣಂ ಫಲಮಶ್ನುತೇ॥

ಪ್ರದಕ್ಷಿಣೆಯ ಫಲ

ಸಪ್ತ ಪ್ರಾಕಾರಪ್ರದಕ್ಷಿಣೆಯಿಂದ ಸರ್ವಯಜ್ಞಗಳನ್ನಾಚರಿಸಿದ ಪುಣ್ಯವು ಬರುತ್ತದೆ. ಸರ್ವತೀರ್ಥ ಸ್ನಾನಫಲವು. ಸರ್ವಸ್ವ ದಕ್ಷಿಣೆಯಿಂದ ಫಲವು ಲಭಿಸುತ್ತದೆ.

ಸಪ್ತಪ್ರಾಕಾರ ಪ್ರದಕ್ಷಿಣೆಯ ದಿವಸಗಳು : ಸಪ್ತಪ್ರಾಕಾರ ಪ್ರದಕ್ಷಿಣೆಯನ್ನು ಮಾಡುವವರು ಶಾಸ್ತ್ರದಲ್ಲಿ ವಿಹಿತವಾದ ದಿನದಲ್ಲಿ ಮಾಡಿದರೆ ಹೆಚ್ಚು ಫಲವಿದೆ. ಅದರಂತೆ ಪಕ್ಷದ ಕೊನೆಯಾದ ಪೂರ್ಣಿಮೆ, ಅಮಾವಾಸ್ಯೆ, ವಿಷ್ಣುದೇವತಾಕವಾದ ಶ್ರವಣನಕ್ಷತ್ರದ ದಿವಸದಂದು, ಏಕಾದಶಿಯಲ್ಲಿ, ವೈಧೃತಿಯೋಗದಲ್ಲಿ, ಜನ್ಮ ನಕ್ಷತ್ರದಿನದಂದು. ಯಮನಕ್ಷತ್ರದಿನದಂದಾಗಲೀ, ಶ್ರಾದ್ಧದ ದಿವಸದಂದು ಶ್ರಾದ್ಧಕ್ಕಿಂತ ಮೊದಲು ಪ್ರಾಕಾರಪ್ರದಕ್ಷಿಣೆಯನ್ನು ಮಾಡಿದ ನಂತರ ಶ್ರಾದ್ಧವನ್ನು ಮಾಡಿದರೆ ವಿಶೇಷ ಫಲವು. ತುಲಾಮಾಸದಲ್ಲಿ ಮಾಡಬೇಕು ಕಾವೇರಿಯಲ್ಲಿ ಸ್ನಾನಮಾಡಿ, ಸಪ್ತ ಪ್ರಾಕಾರ ಪ್ರದಕ್ಷಿಣೆಯನ್ನು,

ಶುಕ್ರವಾರದಲ್ಲಾಗಲಿ ಪ್ರದಕ್ಷಿಣೆಯನ್ನು ಮಾಡಿದರೆ ಅಪಮೃತ್ಯುವಿನಿಂದ ಪಾರಾಗುವನು. ಸಪ್ತಸಾಗರ ಸಹಿತಸಪ್ತದ್ವೀಪವನ್ನು ಪ್ರದಕ್ಷಿಣೆ ಹಾಕಿದ ಫಲ ಲಭಿಸುವುದು. ಐಹಿಕ ಫಲಗಳೂ ಲಭಿಸುವುದು.

ಸರ್ವದಾನೇಷು ಯತ್ಪುಣ್ಯಂ ತತ್ಫಲಂ ಭವತಿ ಧ್ರುವಂ॥
ವಿಶೇಷೇಣ ತುಲಾಮಾಸೇ ಭೃಗೋರ್ವಾರೇ ತಥಾಂಡಜ॥
ಪ್ರದಕ್ಷಿಣಂ ತು ಯಃ ಕುರ್ಯಾತ್ ಮೃತ್ಯುಪಾಶಾತ್ ಪ್ರಮುಚ್ಯತೇ।
ಸಪ್ತಸಾಗರ ಪರ್ಯಂತಸಪ್ತದ್ವೀಪವತೀ ಭುವಃ॥
ಪ್ರದಕ್ಷಿಣೇನ ಯತ್ಪುಣ್ಯಂ ತತ್ಪುಣ್ಯಫಲಮಾಪ್ನುಯಾತ್॥

ದಂಪತಿಗಳು ಒಟ್ಟಿಗೆ ಪ್ರದಕ್ಷಿಣೆ ಮಾಡುವುದಾದರೆ ಶುಕ್ರವಾರ ಅತ್ಯಂತ ಶ್ರೇಷ್ಠವಾಗಿದೆ.

ಪ್ರಾಕಾರಾಣಾಂ ಭೃಗೋರ್ವಾರೇ ಸಪತ್ನಿಕಃ ಪ್ರದಕ್ಷಿಣಂ।

ಪ್ರದಕ್ಷಿಣ ನಿಯಮಗಳು

೧. ಬೆಳಿಗ್ಗೆ ಕಾವೇರಿಯಲ್ಲಿ ಸ್ನಾನ ಮಾಡಿ ನಿತ್ಯ ನೈಮಿತ್ತಿಕ ಕರ್ಮವನ್ನು ಮಾಡಿರಬೇಕು.

೨. ಪ್ರದಕ್ಷಿಣೆಯನ್ನು ಮಾಡುವಾಗ ಲೌಕಿಕ ವಿಚಾರವನ್ನು ಮಾತನಾಡದೇ ಭಗವಂತನ ಕಥೆ, ಶಾಸ್ತ್ರವಿಚಾರದಿಂದ ಪ್ರದಕ್ಷಿಣೆ ಬರಬೇಕು. ''ರಂಗನಾಥಾಯ ನಮಃ'' ರಂಗೇಶಾಯ ನಮಃ ಎಂದು ರಂಗೇಶನನ್ನು ಪದೇ ಪದೇ ಸ್ಮರಿಸುತ್ತಿರಬೇಕು.

೩. ಪ್ರದಕ್ಷಿಣೆಯ ಮೊದಲು ತಿಂಡಿ ತೀರ್ಥಗಳನ್ನು ತಿನ್ನಬಾರದು. ಕೇವಲ ಭಗವಂತನ ತೀರ್ಥಪಾನ ಮಾತ್ರ. ಉಪವಾಸದಿಂದಿರಬೇಕು.

೪. ಮಧ್ಯಾಹ್ನವಾಗಲೀ, ಅಪರಾಹ್ನವಾಗಲಿ, ಸಂಜೆಯಾಗಲಿ ಪ್ರದಕ್ಷಿಣೆಯನ್ನು ಮಾಡಬಾರದು.

೫. ದುರ್ವೃತ್ತರಾದ ನೀಚಜನರ ಜೊತೆಗೆ ಪ್ರದಕ್ಷಿಣೆಯು ನಿಷಿದ್ಧವು ಹಾಗು ಅಶ್ಲೀಲ ಸಂಭಾಷಣೆಯೂ ನಿಷಿದ್ಧವಾಗಿದೆ.

೬. ಕೈಯದಲ್ಲಿ ಪಂಚಪಾತ್ರೆಯನ್ನು ಹಿಡಿದುಕೊಂಡೇ ಪ್ರದಕ್ಷಿಣೆ ಮಾಡಬೇಕು. ವೇದಗಳನ್ನು ಮೆಲ್ಲಗೆ ಪಠಿಸುತ್ತಿರಬೇಕು.

೭. ಮಧ್ಯೆ ಮಧ್ಯೆ ಶೂದ್ರರ ಜೊತೆಗೆ ಸಂಭಾಷಿಸಬಾರದು.

೮. ಪ್ರದಕ್ಷಿಣೆ ಮಾಡುವಾಗ ಮಾರ್ಗಮಧ್ಯದಲ್ಲಿ ಬಿದ್ದಿರುವ ಉಚ್ಛಿಷ್ಟ, ಹಣ್ಣು, ಕಸ ಮೊದಲಾದವುಗಳನ್ನು ಕಾಲಿನಿಂದ ಪಕ್ಕಕ್ಕೆ ತಬ್ಬುತ್ತಾ, ಸ್ಪರ್ಶಿಸುತ್ತಾ ಹೋಗಬಾರದು. ಅದನ್ನು ತನ್ನ ಕಾಲಿನಿಂದ ಸ್ಪರ್ಶಿಸದೆ ಹೋಗಬೇಕು.

೯. ಪತ್ನಿ ಜೊತೆಗೆ ಪ್ರಾಕಾರ ಪ್ರದಕ್ಷಿಣೆ ಬರುವುದದಾರೆ ಪತ್ನಿಯು, ಪತ್ನಿಯು ಪತಿಯ ಜೊತೆಗೆ ಪ್ರದಕ್ಷಿಣೆ ಹಾಗು ನಮಸ್ಕಾರಗಳನ್ನು ಹಾಕಬೇಕು. ಅವಳೊಂದು ಕಡೆ, ಪತಿಯೊಂದು ಕಡೆ ಮನಸ್ಸಿಗೆ ಬಂದಂತೆ ನಮಸ್ಕರಿಸಬಾರದು.

ಒಟ್ಟಿನಲ್ಲಿ ದೈಹಿಕವಾಗಿ, ವಾಚನಿಕವಾಗಿಯೂ, ಮಾನಸಿಕವಾಗಿಯೂ ತ್ರಿಕರಣ ಶುದ್ಧಿಯಿಂದ ಪ್ರಾಕಾರ ಪ್ರದಕ್ಷಿಣೆಯನ್ನು ಮಾಡಬೇಕು.

ಪ್ರದಕ್ಷಿಣಾದಿಕಾಲೇಷು ಮೌನೀ ರಂಗಂ ಸ್ಮರೇದ್ ಧ್ರುವಮ್।
ಭುಕ್ತ್ವಾ ನ ಗಚ್ಛೇತ್ ಸಾಯಾಹ್ನೇ ಮಧ್ಯಾಹ್ನೇ ನಾಪರಾಹ್ಣಕೇ॥
ದುಷ್ಟಸಂಗತಿ ದುರ್ವೃತ್ತ ದುರ್ಲಾಪ ಜನವರ್ಜಿತಃ।
ಜಲಹಸ್ತಃ ಸ್ವಯಂ ಕುರ್ಯಾದ್ ವಾಚಾ ಬ್ರಹ್ಮ ಶನೈರ್ವದನ್॥
ನ ಶೂದ್ರ ಭಾಷಣಂ ಕುರ್ಯಾನ್ ನೋಚ್ಛಿಷ್ಟಂ ಸ್ವಪದಾ ಸ್ಪೃಶೇತ್।
ಯಃ ಕರೋತಿ ಸಚಾಪ್ನೋತಿ ಸ್ವರ್ಗಂ ಮೋಕ್ಷಂ ಸುಖಾನಿ ಚ॥

ಇತಿ ಗರುಡ ಪುರಾಣೋಕ್ತ
ಶ್ರೀರಂಗ ಪ್ರಾಕಾರ ಪ್ರದಕ್ಷಿಣ ವಿಧಿಃ ಸಮಾಪ್ತಾ

48. ಶ್ರೀರಂಗ ಸ್ತೋತ್ರಮ್

ಪದ್ಮಾಧಿರಾಜೇ ಗರುಡಾಧಿರಾಜೇ ವಿರಿಂಚರಾಜೇ ಸುರರಾಜರಾಜೇ।
ತ್ರೈಲೋಕ್ಯರಾಜೇಖಿಲರಾಜರಾಜೇ ಶ್ರೀರಂಗರಾಜೇ ರಮತಾಂ ಮನೋ॥

ನೀಲಾಭ್ರವರ್ಣೇ ಭುಜಪೂರ್ಣಕರ್ಣೇ ಕರ್ಣಾಂತ ನೇತ್ರೇ ಕಮಲಾಕಲತ್ರೇ।
ಶ್ರೀಮಲ್ಲರಂಗೇ ಜಿತಮಲ್ಲರಂಗೇ ಶ್ರೀರಂಗರಂಗೇ ರಮತಾಂ ಮನೋ ಮೇ॥

ಲಕ್ಷ್ಮೀನಿವಾಸೇ ಜಗತಾಂ ನಿವಾಸೇ ಹೃತ್ಪದ್ಮವಾಸೇ ರವಿಬಿಂಬವಾಸೇ।
ಕ್ಷೀರಾಬ್ಧಿವಾಸೇ ಫಣಿಭೋಗವಾಸೇ ಶ್ರೀರಂಗವಾಸೇ ರಮತಾಂ ಮನೋ ಮೇ॥

ಕುಬೇರಲೀಲೇ ಜಗದೇಕಲೀಲೇ ಮಂದಾರಮಾಲಾಂಕಿತ ಚಾರುಫಾಲೇ।
ದೈತ್ಯಾಂತಕಾಲೇಖಿಲಲೋಕಮೌಲೇ ಶ್ರೀರಂಗಮೌಲೇ ರಮತಾಂ ಮನೋಮೇ॥

ಅಮೋಘನಿದ್ರೇ ಜಗದೇಕನಿದ್ರೇ ವಿದೇಹನಿದ್ರೇ ಚ ಸಮುದ್ರನಿದ್ರೇ।
ಶ್ರೀಯೋಗನಿದ್ರೇ ಸುಖಯೋಗನಿದ್ರೇ ಶ್ರೀರಂಗನಿದ್ರೇ ರಮತಾಂ ಮನೋಮೇ॥

ಅನಂತರೂಪೇ ನಿಜಬೋಧರೂಪೇ ಬ್ರಹ್ಮಸ್ವರೂಪೇ ಕ್ಷಿತಿಮೂಲರೂಪೇ।
ವಿಚಿತ್ರರೂಪೇ ರಮಣೀಯ ರೂಪೇ ಶ್ರೀರಂಗರೂಪೇ ರಮತಾಂ ಮನೋಮೇ॥

ಭಕ್ತಾ ಕೃತಾರ್ಥೇಽಸುರಾನಾಶನಾರ್ಥೇ ಭಕ್ತಾಸಮರ್ಥ ಕೀರ್ತೇ ಜಗದೇಕ।
ಅನೇನಕಮೂರ್ತೇ ರಮಣೀಯ ಮೂರ್ತೇ ಶ್ರೀರಂಗಮೂರ್ತೇ ರಮತಾಂ ಮನೋಮೇ॥

ಕಂಸಪ್ರಮಾಥೇ ನರಕಪ್ರಮಾಥೇಽಭಕ್ತ ಪ್ರಮಾಥೇ ಜಗತಾಂ ನಿದಾನೇ।
ಅನಾಥನಾಥೇ ಜಗದೇಕನಾಥೇ ಶ್ರೀರಂಗನಾಥೇ ರಮತಾಂ ಮನೋಮೇ॥

ಸಚ್ಛತ್ರಶಾಯಿನ್ ಭುಜಗೇಂದ್ರಶಾಯಿನ್ ನಂದಾಂಕಶಾಯಿನ್ ಕಮಲಾಂಕಶಾಯಿನ್।
ಅಂಭೋಧಿಶಾಯಿನ್ ವಟಪತ್ರಶಾಯಿನ್ ಶ್ರೀರಂಗಶಾಯಿನ್ ತ್ವಯಿ ಮೇ ಮನೋಮೇ॥

ಸಕಲದುರಿತಹಾರೀ ಭೂಮಿಭಾರಾಪಹಾರೀ
ದಶಮುಖಕುಲಹಾರೀ ದೈತ್ಯದರ್ಪಾಪಹಾರೀ
ಸಕಲಭುವನಹಾರೀ ಪಾರಿಜಾತಾಪಹಾರೀ
ಭುವನಭಯನಿಹಾರೀ ಪ್ರೀಯತಾಂ ಮೇ ಮುರಾರೀ

ರಂಗಸ್ತೋತ್ರಮಿದಂ ಪುಣ್ಯಂ ಪ್ರಾತಃಕಾಲೇ ಪಠೇನ್ ನರಃ।
ಕೋಟಜನ್ಮ ಕೃತಂ ಪಾಪಂ ತತ್ಕ್ಷಣಾದೇವ ನಶ್ಯತಿ॥

ಕಾವೇರೀ ವಿರಜಾತೋಯಂ ವೈಕುಂಠಂ ರಂಗಮಂದಿರಮ್।
ಸ ವಾಸುದೇವೋ ರಂಗೇಶಃ ಪ್ರತ್ಯಕ್ಷಂ ಪರಮಂ ಪದಮ್
ದೇಶಾಂತರಗತೋ ವಾಽಪಿ ದ್ವೀಪಾಂತರಗತೋಽಪಿ ವಾ।
ಶ್ರೀರಂಗಾಭಿಮುಖೋ ಭೂತ್ವಾ ಪ್ರಣಿಪತ್ಯ ನ ಸೀದತಿ॥

ಇತಿ ಶ್ರೀರಂಗಮಾಹಾತ್ಮ್ಯೇ ಶ್ರೀರಂಗಸ್ತೋತ್ರಂ ಸಂಪೂರ್ಣಮ್।

॥ಶ್ರೀಕೃಷ್ಣಾರ್ಪಣಮಸ್ತು॥

ತೀರ್ಥಪ್ರಬಂಧೇ ರಂಗನಾಥಪ್ರಶಂಸಾ

ಕಾವೇರಿಹೃದಯೇ ವಸನ್ ಕಮಲಭೂತಾತಃ ಕೃಪಾ ವೀಕ್ಷಣೈಃ।
ಜೀವಾಂಹಃ ಶಮಯನ್ ಶ್ರಿಯಾ ಚ ಧರಯಾ ಸೇವ್ಯೋಽತಿಭಾವ್ಯೋಽವಿಭುಃ।

ದೈವೈರಾವರಣಸ್ಥಿತೈಃ ಕೃತನತಿಃ ಶೇಷಾಂಗಶಾಯೀ ಸದಾ।
ಭಾವೇ ಮೇ ವಿಧು ಪುಷ್ಕರಿಣ್ಯಧಿಪತಿಃ ಶ್ರೀರಂಗನಾಥೋಽಕ್ಷಯಮ್॥

ಶ್ರುತಿಶತಪರಿಗೀತಃ ಶುದ್ಧಭಾವೈಃ ಗೃಹೀತಃ।
ಕಮಲನಿಲಯತಾಶಃ ಕಂಜನೇತ್ರಃ ಪ್ರತೀತಃ।
ಸಕಲಜಗದದೀಶಃ ಸರ್ವಸಂಪತ್ಸಮೇತಃ।
ಪ್ರವಿಶತು ಮಮ ಚೇತಃ ಪ್ರತ್ಯಹಂ ರಂಗನಾಥಃ॥

ಶ್ರೀರಂಗನಾಥಃ ಸುರಸಿದ್ಧಗೀತಃ ಕಾರುಣ್ಯಸಿಂಧುಃ ಕವಿವರ್ಗಬಂಧುಃ।
ಸ್ಮೇರಾಸ್ಯಚಂದ್ರಃ ಸ್ಮರತಾಂ ಮಹೇಂದ್ರಕ್ಷ್ಮಾರುಟ್ ಪ್ರಸನ್ನಃ ಕ್ಷಪಯತ್ವಘಂ ನಃ॥

ಲಯೇ ಶಯನೋಽಪ್ಯುದರಸ್ಥಲೋಕಭರೇಣ ಲಕ್ಷ್ಮೀಕರವಿಭ್ರಮೃಷ್ಟ।
ಅನಿದ್ರಿತೋಽದ್ಯಾಂಘ್ರಿನಿಷೇವಣೇ ತಾಂ ನಿಯುಜ್ಯ ನಿದ್ರಾಸಿ ಕಿಮಂಬುಜಾಕ್ಷ॥

ನಿಜಾಂಘ್ರಿಸೇವಾನಿರತಾನ್ ಮನುಷ್ಯಾನ್ ವಿಧೂತನಿದ್ರಾನ್ ವಿದಧಾಸಿ ಯಸ್ತ್ವಂ।
ತವೇಶ ತಸ್ಯಾಮಲಬೋಧಮೂರ್ತೇಃ ಸಹಾಮಹೇ ಸಂಪ್ರತಿ ನೈವ ನಿದ್ರಾಮ್॥

